MR. SPEAKER.—The Hon' ble Member can continue after recess. The House will now adjourn and meet after half-an-hour.

---

*The House adjourned for recess at Five Minutes past Three of the Clock and re-assembled at Forty Minutes past Three of the Clock.*

---

( MR. DEPUTY SPEAKER in the Chair )

Sri J. B. MALLARADHYA.—I was talking about the question of transferring the control of primary education to the Taluk Boards and I was saying that as a result of this, the teacher will become a handmaid of the local politician. I am really apprehensive about the future of primary education if these taluk boards are going to be given the control of primary education. I can advance a number of arguments , but having regard to the limited time at my disposal, I do not wish to say further on this ; I want the Education Minister to plead valiantly with his Cabinet colleagues to see that such a state of affairs never comes to pass because I see a very ominous future for primary education if you transfer the control of primary education to taluk boards.

I forgot mentioning one importa t matter about the University. For number of years past, the Intermediate Colleges in Chickmagalur, Mandya and Kolar, are making repeated representions for being upgraded to first grade colleges. Even when the control of these Colleges vested in the University, we wanted to take a decision and just when we were about to take a decision, these Colleges were transferred. If you see the latest figures published about the admission to these Colleges in Chickmagalur, Mandya and Kolar, it is progressively going down for the reason that it is not a first grade college. After all, the maintenance of each College will take about Rs. 1, 20, 000 or 1, 25, 000. In a budget of Rs. 13–14 crores for this department, what is Rs. 3, 60, 000. Particularly in Chickmagalur the other difficulty is, it is a malnad area. You may say that only primary education is the responsibility of the State and that you want to reserve all the money for primary education.

Sri S. D. GAONKER.—What about Kanara District ?

Sri J. B. MALLARADHYA.—This came up for discussion at the University level. Whenever there is demand for higher education, that demand as got to be met. If the Government says that they are not going to upgrade the Colleges hereafter, even then I have got serious objection. The urge for higher education in a democracy should not be throttled and it should be stimulated and you must give it much impetus.

Sri ANNARAO GANAMUKHI.—The urge should be matched with the surge of money !

Sri J. B. Mallaradhya.—When they get as much as Rs. 1½ crores from the University Grants Commission, is it difficult to get Rs. 3, 60 000? Even for higher education, you must find the necessary funds.

Sri C. J. Muckannappa.—There was a promise held by the then Chief Minister that he was going to upgrade the Chickmagalur College. I do not know why they have not done it.

Sri J. B. Mallaradhya.—What about the women in those areas who have got an urge for higher education. You want equality of status between men and women and there was a complaint by Smt. Nagaratnamma that in various fields of governmental endeavour and including Judges, Munsiffs and Magistrates, you do not give representation to women. Should they not qualify themselves for getting equal opportunities with men? Why do you come in the way of girls' urge for higher education. Even from that point of view, what is to happen to thousands of young men and women who pass out in the high schools in these three districts including North Kanara. I think that is a very unequal distribution of facilities of higher education. Even taking the whole State into consideration, you have got pockets which are very unfavourably endowed. Is it not the duty of the Government to see that this injustice or imbalance is set right? It is against this background that I would like to urge upon the Government that the requests from these three or other districts for upgrading the Colleges is very favourably considered. In a budget of Rs. 13-14 crores, it should not be difficult to find funds for upgrading these colleges.

I want to refer to one or two things about the multi- purpose high schools. These multipurpose high schools are a costly luxury in a scheme of education. I happen to get the most expert opinion in regard to this matter as to what functions they are fulfilling in a scheme of secondary education. The statement of the subordinate members of the department makes it very clear that there is no need for these multi-purpose high schools. I do not think even 5 per cent of the existing multi-purpose high schools have fulfilled the purpose for which they were originally intended. I do not know if you are going to expand.........

Sri C. M. Arumugham.—Yesterday We have seen the Ministers not being attentive. Even the Home Minister who was to reply was not present, but all of a sudden he came to the House and said something which was not relevant to the discussion. To-day also, we see, except the Minister for Education the other Ministers are not taking any interest in the discussion. Such being the case, how can we expect proper reply from the Ministers concerned? When discussion is going on a Demand, they are expected to follow the discussion and take notes. But here the Forest Minister is always discussing with other members. The Minister should be in his seat and not elsewhere. The Chair must give a direction in this regard.

Sri J. B. MALLARADHYA.—The multi-purpose high schools were started as far back as 1949 and to-day we are in the year of grace 1961. A report on the progress of the multi-purpose high schools would be a very sad commentary on the administration of the mutli-purpose high schools in the department, and I want to know why the Government has not come to a firm decision. I personally feel that much of good money in this country or the State is being wasted. There is admission on behalf of the departmental officers as between higher secondary education and multi-purpose high school. They are absolutely in favour of higher secondary school. I co ulted expert opinion in respect of technical education. It does not serve any purpose so far as the candidates of these schools are concerned. Many multi-purpose high schools have got equipment of the order of Rs. 80,000 or 90,000 and all that is not being used properly. I want you to look into this matter and make a declaration of policy as to whether you are going to continue these multi-purpose high schools or stop it and divert the funds for some other purpose. In regard to the multi-purpose high schools there is not even sufficient strength of trained teachers. What is the training facility that you have provided for teachers of these Schools? It is a make-shift arrangement; it is very unatisfactory. 99 per cent of the teachers who are drafted to these schools are not experts in the subject they are expected to teach.

Coming to Polytechnic, what is the facility that exists in Mysore today for training teachers who are intended to teach different subjects in the Polytechnic Schools? You will now refer to some Regional Training Centre which the Government is likely to start somewhere in the South.

Sri ANNARAO GANAMUKHI.—Is there any State in India where training is imparted to these technical teachers?

Sri J. B. MALLARADHYA.—That is my complaint to the Government. You go and start without adequate preparations and it collapses; that is the trouble. Whether it is Government of India or Government of Mysore, I say, it is bad planning. Even at the national level there is no co-ordinated thinking. If you want these Institutions to serve very usefull schemes in the State, you have to put pepole who are trained. But, you have not taken the trouble of training these people. To-day, a person takes a Diploma in Bangalore and he is posted to a Polytechnic Institute at Mangalore to be one of the staff of the Assistant Lecturer. Do you imagine, he would be of some service to the boys? What is his competence? This is happening in more than 99 per cent of the cases. Then, you borrow some people from the department. I consider this a very unsatisfactory arrangement. We demand the services of men who are top-must in their intellectual capacity and their technical capacity. It should not be forgotton that industries require the highest men. That such training schools do not exist anywhere in India is no excuse. If you object to the principle that I am enunciating that trained people should be in charge of Polytechnic and if you want to expand the polytechnic; then, it would be a farce.

Sri ANNARAO GANAMUKHI.—Even in the Colleges also you want the Lecturers to be trained in teaching?

Sri J. B. MALLARADHYA.—No Sir, it does not apply to the University. It is understood that it is not the instruction that is given there; the teacher only helps the student to study.

Sri ANNARAO GANAMUKHI.—Here also the samething. In the workshop, it is mere helping than teaching.

Sri J. B. MALLARADHYA.—In the case of workshop, the Superintendents would be practical men with some minimum qualification. But the persons in charge of Civil Engineering etc. should be trained persons.

Then, Sir, I would like to be pardoned if I say with regard to basic schools, that these are farce. If you go and look into these schools in Bombay area, they are slightly better or infinitely better than the erstwhile Mysore State. I say that not even 5 percent of the basic schools in the erswhile Mysore State work satisfactorily. In fact, you and I pay reverence to Gandhiji but when the question of implementation comes in the true spirit, we have failed and failed miserably. There are only spinning and weaving craft in these schools I can understand your tall order that all the schools should become basic schools. So, Sir, I want you so see if there is anything to improve the quality of these basic schools. You do not have sufficient number of trained basic school teachers. They have neither the background nor the spirit of serving. Selection of teachers to these schools is made in a very hapazard manner and they have been a failure.

Sir, I have got a word to say with regard to medical inspection. If there is any serious lapse on the part of the department, it is with regard to medical inspection. There seems to be a tussel between the Health Department and the Education Department as to who should have control over this. Sir, there is no follow-up; there is no hospital facility to the children who are suffering from a particular ailment. This medical inspection is there only to collect 12 nP. per boy. If any body takes you to a court, you will have no justification to collect the money.

Sir, I would like to make a reference to Sports and Games, which is of very great interest to me. The sooner you take away the control of the department on physical education and place it in indepedent charge of a Director of Physical Education of a status of a Joint-Director or Additional Director, it is better from the point of view of the youngmen concerned. I know, Sir, after the present Education Minister came, he has taken trouble to start a College of Physical Education. What is the number of people you have trained and what is the ratio between the number of pupils and the number of Instr.ctors you have given? The Director of Public Instruction is a man who is for too busy and you want him to go and see to the development of sports and physical teaching; it is impossible. Any money that is spent by appointing the Director is worth-while. Sir, what is the amount of

money that is allowed to lapse? It is to the order of lakhs. How many institutions have got playgrounds? This is a much neglected field in education. I consider that physical education, games and sports deserve better attention, better than the academic things. I wish that you place this on a good footing.

About mid-day meal Government has given 3 to 4 lakhs. I would like to draw the attention to Madras which has done the best in this regard, and the Director of Public Instruction got the President's Award this time.

4-00 P.M.

He collected a fantastic amount. In the whole of Madras State there is no institution in which this scheme of mid-day meals was not introduced I am looking forward to the day when with the co-operation of the people and the efforts of Government, every school, particularly rural scchools, will have a scheme for supply of free mid-day meals. It is a pititable sight to see boys and girls migrating to the villages, three miles away, without facilities for going back. No scheme of education will succeed until you emphasise the importance of mid-day meal.

Sri ANNARAO GANAMUKHI.—That is why we want to transfer schools to the taluk board ?

Sri J. B. MALLARADHYA.—Only God must take care of those schools then.

I want to say a word about pre-primary education. As far back a 1944, the great Seargent produced a monumental report on the scheme of national education in which he said that for an integrated picture of national education, pre-primary eudcation is one of the most important items. He also stated that it was the most neglected items. After 16 years today, we see that it is in the same state. Luckily for the State, you appointed a committee and it is only on the 31 st of last month that the report has been submitted. I venture to express the hope that those recommendations, if worthwhile, would be implemented in order to see that pre-primary education is made a vital and very significant part of education in Mysore.

Sir, the Ministry has been visualising a big scheme of compulsory education, I congratulate you on the laudable enterprise but I am asking a very pertinent question : have you been adequately preparing to meet the challenge that introduction of compulsory education throughout the length and breadth of the new Mysore State, will pose. Are you keeping your power dry to meet this challenge ?

Sri ANNARAO GANAMUKHI—I have given a note on the point.

Sri J. B. MALLARADHYA.—I wish that it had come to my hands ten minutes ago or atleast during the lunch interval. I do not know if you have trained teachers. Please do not begin to implement a scheme until you are fully prepared. I know there are some people who would say...''ಬರಿಕೈಲಿರುವುದಕ್ಕಿಂತ ಹಿತ್ತಾಳೆ ಕಡಗ ಲೇಸು'' ಎಂತ. ಆದರೆ ನಾನು ಹೇಳುತ್ತೇನೆ ಹಾಗೆ ಹಿತ್ತಾಳೆ ಕಡಗ ಹಾಕಿಕೊಳ್ಳುವುದಕ್ಕಿಂತ ಬರಿಕೈಲಿರುವುದೇ ಲೇಸು''ಎಂತ.

I do not want you to begin a big scheme of compulsory primary education throughout the State until you have made adequate preparations.

I would now speak on a point of great significance. You must see that in your plan for extending primary education, quality is made all-important. All along every one has been keen-either in the department or at the Secretariat level--on expansion and nobody has devoted an iota of attention for consolidation, for improving quality. If you do not get the type of education which lends itself to an appreciation that it is good education, there is no use of having that education at all. Please keep an eye on quality, not merely quanity. Both quantitative and qualitative expansion should be the guiding factors in any scheme of national education.

†ಶ್ರೀ ಎಸ್. ಸುಬ್ಬಯ್ಯನಾಯುಕ್ (ಪುತ್ತೂರು ನಿಮ್ನ ಪಂಗಡ).—ಮಾನ್ಯ ಅಧ್ಯಕ್ಷರೇ ಈಗ ಸಭೆಯ ಮುಂದೆ ಇರತಕ್ಕ ಅರಣ್ಯ, ಸೇಲ್ಸ್ ಟ್ಯಾಕ್ಸ್ ಮತ್ತು ಶಿಕ್ಷಣ ಬಾಬುಗಳ ಮನವಿಯನ್ನು ನಾನು ಸಂಪೂರ್ಣವಾಗಿ ಸಮರ್ಥಿಸುತ್ತೇನೆ. ಹೀಗೆ ಸಮರ್ಥನೆ ಮಾಡುವಾಗ ಸರ್ಕಾರದವರ ಗಮನಕ್ಕೆ ಒಂದೆರಡು ವಿಷಯಗಳನ್ನು ತರಬಯಸುತ್ತೇನೆ.

ಅಧ್ಯಕ್ಷರೇ, ನಾನೀಗ ಮೊದಲನೆಯದಾಗಿ ಅರಣ್ಯ ಶಾಖೆ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಈ ದಿವಸ ನಮ್ಮ ರಾಜ್ಯ ಸರ್ಕಾರದವರು ಈ ಅರಣ್ಯಗಳ ಅಭಿವೃದ್ಧಿ ವಿಚಾರದಲ್ಲಿ ಬಹಳ ಮುತುವರ್ಜಿ ವಹಿಸಿ ಉತ್ಸಾಹದಿಂದ ಕೆಲಸ ಮಾಡುತ್ತಿರುವುದು ಬಹಳ ಸಂತೋಷಕರವಾದ ವಿಚಾರ. ಇದಕ್ಕಾಗಿ ನಾನು ಸರ್ಕಾರದವರನ್ನು ಅಭಿನಂದಿಸುತ್ತೇನೆ. ನಮ್ಮ ರಾಜ್ಯದ ವರಮಾನಗಳ ಪೈಕಿ ಅರಣ್ಯಸಂಪತ್ತು ಬಹಳ ಮುಖ್ಯವಾದ ಒಂದು ಭಾಗವಾಗಿದೆ. ಈ ಅರಣ್ಯಶಾಖೆಯಿಂದ ನಮ್ಮ ಕೈಗಾರಿಕೆಗಳಿಗೆ ಬೇಕಾಗುವ ಅನೇಕ ಕಚ್ಚಾಪದಾರ್ಥಗಳೆಲ್ಲ ದೊರೆಯುತ್ತಿವೆ. ಮೇಲಾಗಿ ಖನಿಜ ಸಂಪತ್ತುಗಳಿಂದ ಕೂಡಿರುತ್ತವೆ. ಈ ಕಾರಣಗಳಿಂದ ಕಾಡನ್ನು ಬೆಳೆಸಬೇಕಾದ್ದು ಅತ್ಯಗತ್ಯ. ಆದರೆ ಹೀಗೆ ಕಾಡನ್ನು ಬೆಳೆಸತಕ್ಕ ಸಂಭ್ರಮ ಮತ್ತು ಉತ್ಸಾಹದಲ್ಲಿ ನಾಡನ್ನೆಲ್ಲಾ ಕಾಡಾಗಿ ಮಾಡಬಾರದು. ಈ ದಿವಸ ನಮ್ಮ ಮಲೆನಾಡಿನ ವಿಚಾರ ಹೇಳುವುದಾದರೆ ಅಲ್ಲಿ ವರ್ಷಕ್ಕೆ 150 ಇಂಚಿಗಿಂತಲೂ ಹೆಚ್ಚಿಗೆ ಮಳೆಯಾಗುತ್ತದೆ. ಅದರಿಂದ ಮಲೆನಾಡಿನಲ್ಲಿ ದಟ್ಟವಾದ ಕಾಡುಗಳು ಬೆಳೆದಿವೆ. ಅಲ್ಲಿ ಈಗ ಈ ಅರಣ್ಯಾಭಿವೃದ್ಧಿ ಮಾಡುವುದಕ್ಕೆ ಹೋದರೆ ಈ ದಿವಸ ಅಲ್ಲಿ ಜನರು ಏನು ಬಹಳ ಕಷ್ಟಪಟ್ಟು ಬೆಳೆಸಿದ್ದಾರೋ ಆ ತೋಟಗಳೆಲ್ಲ ಹೋಗಿ ಬಿಡುತ್ತವೆ. ಗದ್ದೆಗಳೆಲ್ಲಾ ಕಾಡುಮೃಗಗಳ ಹಾವಳಿಯಿಂದ ಹಾಳಾಗಿ ಬೆಳೆಗಳೊಂದೂ ರೈತರ ಕೈ ಸೇರುವುದಿಲ್ಲ. ಇದಕ್ಕೆ ಕಾರಣವೇನೆಂದರೆ ನಾನೀಗ ಹೇಳುವುದು ನಮ್ಮ ಕಡೆ ಈ ವ್ಯವಸಾಯ ಮಾಡತಕ್ಕ ಜಮೀನುಗಳೇನಿರುತ್ತವೆ ಅವುಗಳ ಸುತ್ತಮುತ್ತಲೂ ಇರುವ ಒಂದು ನೂರು ಗಜ ಪ್ರದೇಶವನ್ನು ಬಫರ್-ಏರಿಯಾ ಎಂತ ಹೇಳಿ ಅದನ್ನು ಕಾಡು ಬೆಳೆಯದಂತೆ ತಡೆಗಟ್ಟಲಾಗಿರುತ್ತೆ. ಆ ಪ್ರದೇಶದಲ್ಲೂ ಈ ದಿವಸ ಸರ್ಕಾರದವರು ಕಾಡನ್ನು ಅಭಿವೃದ್ಧಿ ಮಾಡುವ ಸಲುವಾಗಿ ಮರಗಳನ್ನು ಬೆಳೆಸುತ್ತೇವೆಂದು ಹೇಳುವುದಾದರೆ

ಅಲ್ಲಿ ಕೋತಿ-ಕಾಡುಮೃಗಗಳ ಹಾವಳಿ ಜಾಸ್ತಿಯಾಗಿ ಬೆಳೆಯೆಲ್ಲ ಸಂಪೂರ್ಣವಾಗಿ ನಾಶವಾಗುತ್ತದೆ. ಆದ ಕಾರಣ ತತ್ಕಾಲಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಾದರೂ ಈ ಕಾಡು ಪ್ರದೇಶ ವ್ಯವಸಾಯದ ಜಮೀನುಗಳಿಗೆ ದೂರದಲ್ಲಿರಬೇಕಾದುದು ಅತ್ಯಗತ್ಯ ಮತ್ತು ಬಹಳ ಮುಖ್ಯವಾದಂಥ ವಿಚಾರ ಇದು. ಈಗ ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ ಎರಡು ಫಾರೆಸ್ಟ್ ಡಿವಿಜನ್‌ಗಳನ್ನು ಮಾಡಿದ್ದಾರೆಂದು ಕೇಳುತ್ತೇನೆ. ಇದು ಬಹಳ ಸಂತೋಷದ ವಿಷಯ. ಇದಕ್ಕಾಗಿ ನಾನು ಸರ್ಕಾರದವರನ್ನು ಅಭಿನಂದಿಸುತ್ತೇನೆ. ಇದಾದ ಮೇಲೆ ಮತ್ತೊಂದು ವಿಚಾರವನ್ನು ನಾನೀಗ ಸರ್ಕಾರದವರ ಗಮನಕ್ಕೆ ತರಬೇಕೆಂದಿದ್ದೇನೆ. ನಮ್ಮ ಮಲೆನಾಡಿನ ಕಾಡಿನಿಂದ ಲಕ್ಷಾಂತರ ಮರಗಳನ್ನು ಕಡಿದು ಸ್ಲೀಪರ್‌ಗಳಿಗಾಗಿ ಬೇರೆ ದೇಶಕ್ಕೆ ರವಾನೆ ಮಾಡಲಾಗುತ್ತಿದೆ. ಆದರೆ ನಮ್ಮ ಜಿಲ್ಲೆಯಲ್ಲಿ ಪುತ್ತೂರು ಮತ್ತು ಬಂಟವಾಳ ತಾಲ್ಲೂಕುಗಳು ಅರಣ್ಯ ಪ್ರಾಧ್ಯ ಪ್ರದೇಶದಲ್ಲಿದ್ದರೂ—ಅಲ್ಲಿ ಕಚ್ಚಾಪದಾರ್ಥಗಳು ಹೇರಳವಾಗಿ ದೊರೆಯುತ್ತಿದ್ದರೂ ಅಲ್ಲಿ ಸರ್ಕಾರದವರು ಇಲ್ಲಿಯತನಕ ಒಂದಾದರೂ ಕಾರ್ಖಾನೆಗಳನ್ನು ಪ್ರಾರಂಭಮಾಡಿಲ್ಲ. ನಮ್ಮ ಕಾಡಿನ ಮರಗಳನ್ನು ಕಡಿದು ಬೇರೆ ದೇಶಕ್ಕೆ ರವಾನೆ ಮಾಡುವ ಬದಲು ಇಲ್ಲೇ ಒಂದು ಕಾರ್ಖಾನೆಯನ್ನು ಸ್ಥಾಪಿಸುವುದು ಅತ್ಯವಶ್ಯಕ. ಈ ಪ್ರದೇಶದ ಜನಗಳಿಗೆ ಬೇರೆ ಯಾವ ಉದ್ಯೋಗವೂ ಇಲ್ಲ. ಆದ್ದರಿಂದ ಈ ಪ್ರದೇಶದಲ್ಲಿ ಒಂದು ಪ್ಲೈವುಡ್ ಫ್ಯಾಕ್ಟರಿಯನ್ನಾಗಲೀ-ಪ್ರಿಸರ್ವೇಷನ್ ಆಫ್ ಪ್ಲಾಂಟ್ಸ್ ಅಥವಾ ಕಾಗದದ ಕಾರ್ಖಾನೆ ಹೀಗೆ ಏನಾದರೂ ಒಂದು ಕಾರ್ಖಾನೆಯನ್ನು ಇಲ್ಲ ಕೂಡಲೇ ತೆರೆಯಬೇಕೆಂದು ಹೇಳುತ್ತೇನೆ. ನಮ್ಮ ಪ್ರಾಂತ್ಯದಲ್ಲಿ ಈ ದಿವಸ ಅಪಾರವಾಗಿ ಬಿದಿರು ಬೆಳೆಯುತ್ತಿದೆ. ಆದರೆ ಇದನ್ನು ಪ್ರಿಸರ್ವ್ ಮಾಡಲು ಅವಕಾಶವಿಲ್ಲ. ಇದರಿಂದ ಈ ಬಿದರೆಲ್ಲ ಹಾಳಾಗಿಹೋಗುತ್ತದೆ. ಈ ಬಿದರನ್ನು ಪ್ರಿಸರ್ವ್ ಮಾಡಲು ಒಂದು ಕಾರ್ಖಾನೆ ಪ್ರಾರಂಭಿಸಿದರೆ ಇದರಿಂದ ಪೇಪರ್ ಮಿಲ್ ಪ್ರಾರಂಭಿಸಲು ಅನುಕೂಲವಾಗುತ್ತೆ. ಇದರಿಂದ ಸರ್ಕಾರಕ್ಕೂ ಲಾಭವಿದೆ ಜನಗಳಿಗೂ ಅನುಕೂಲವಾಗುತ್ತೆ. ಇನ್ನು ಇಲ್ಲಿಯತನಕ ರೆವಿನ್ಯೂ ಹಿಡುವಳಿಯಲ್ಲಿದ್ದ ಅರಣ್ಯಖಾತೆಯನ್ನು ಫಾರೆಸ್ಟ್ ಇಲಾಖೆಗೆ ವರ್ಗಾಯಿಸುತ್ತಾರೆಂತ ಕೇಳುತ್ತೇನೆ. ಇಲ್ಲಿಯತನಕ ರೈತನು ತನಗೆ ದಿನವಹಿ ಕೆಲಸಗಳಿಗೆ ಅತ್ಯವಶ್ಯಕವಾಗಿ ಬೇಕಾಗುತ್ತಿದ್ದಂಥ ನಾರು-ಬೇರು-ಸೊಪ್ಪು-ಸೌದೆ, ಬಳ್ಳಿ ಸೊಪ್ಪುಗಳನ್ನು ತರಲು ಅನುಕೂಲವಾಗಿತ್ತು. ಆದರೆ ಮಾತೆತ್ತಿದರೆ ಸರ್ಕಾರದವರು ಬಾಯಲ್ಲಿ ರೈತನಿಗೆ ದೊರೆಯತಕ್ಕ ಸೌಲತ್ತುಗಳಲ್ಲಿ ನಾವು ಯಾವುದನ್ನು ಕಡಮೆ ಮಾಡುವುದಿಲ್ಲವೆಂದು ಹೇಳತ್ತಿದ್ದಾರೆ. ಅಷ್ಟೇ ವಿನಾ ಅದನ್ನು ಕಾರ್ಯತಃ ಮಾಡುತ್ತಿಲ್ಲ. ಈ ದಿವಸ ಈ ಕಾಡನ್ನು ಫಾರೆಸ್ಟ್ ಇಲಾಖೆಯವರ ಆಡಳಿತಕ್ಕೊಳಪಡಿಸಿದರೆ ಅಲ್ಲಿ ಈ ಇಲಾಖೆಯ ನೌಕರರಿಂದ ಜನರಿಗೆ ಬಹಳ ತೊಂದರೆ ಆಗುತ್ತೆ. ಮತ್ತು ಇದರಿಂದ ದುರಾಡಳಿತ ಉಂಟಾಗುವುದಕ್ಕೆ ಅವಕಾಶವಾಗುತ್ತದೆ. ಆ ಕಾರಣ ಜನರಿಗೆ ಅನುಕೂಲ ಕಲ್ಪಿಸತಕ್ಕ ದೃಷ್ಟಿಯಿಂದ ಈ ಕಾಡನ್ನು ಫಾರೆಸ್ಟ್ ಇಲಾಖೆಗೆ ಸೇರಿಸಬಾರದೆಂದು ಕೇಳಿಕೊಳ್ಳುತ್ತೇನೆ. ಕೆಲವು ಪ್ರದೇಶಗಳಲ್ಲಿ ಅರಣ್ಯದಲ್ಲಿರತಕ್ಕ ಮರಗಳನ್ನೆಲ್ಲಾ ಸಂಪೂರ್ಣವಾಗಿ ಕಡಿದು ಅರಣ್ಯವನ್ನೇ ನಾಶಮಾಡುತ್ತಿದ್ದಾರೆ. ಅಂಥ ಮರಗಳನ್ನು ಬೆಳೆಸಲು ಸರ್ಕಾರದವರು ಜನಗಳಿಗೆ ಪ್ರೋತ್ಸಾಹ ನೀಡಬೇಕು. ಈ ಕಾರ್ಯವು ಒಂದು ಸ್ಪರ್ಧೆಯಲ್ಲಿ ನಡೆಯುವಂತೆ ಆಗಬೇಕು. ಉತ್ತಮ ಜನರಿಗೆ ಐದು-ಹತ್ತು ಎಕರೆ ಜಮೀನು ಕೊಟ್ಟು ಅಲ್ಲಿ ಉತ್ತಮ ಜಾತಿ ಮರಗಳನ್ನು ಬೆಳಸುವಂತೆ ಏರ್ಪಾಡಾಗಬೇಕು. ಜನರಿಗೆ ಯಾರು ಉತ್ತಮ ಮರಗಳನ್ನು ಹೆಚ್ಚಾಗಿ ಬೆಳೆಸುತ್ತಾರೋ ಅಂಥವರಿಗೆ ಬಹುಮಾನ ದೊರೆಯುವಂತೆ ಮಾಡಿದರೆ ಅದರಿಂದ ಜನರಲ್ಲಿ ಒಂದು ಹುರುಪುಂಟುಮಾಡಿದಂತಾಗುತ್ತದೆ. ಈ ಕೆಲಸಕ್ಕೆ ಯಾರು ಅರಣ್ಯದಲ್ಲೇ ವಾಸಮಾಡಲು ಇಷ್ಟಪಡುತ್ತಾರೋ ಅಂಥ ಜನರನ್ನು ಆರಿಸಬೇಕೇ ಹೊರತು ಎಲ್ಲಿಯೋ ನಗರಗಳಲ್ಲಿರತಕ್ಕ ಜನರಿಗೆ ಈ ಅವಕಾಶ ಕೊಡಬಾರದು. ಅವರಿಗೆ ಇದರ ಅನುಭವವಿರುವುದಿಲ್ಲ. ಈ ಅರಣ್ಯ ಸಂಪತ್ತನ್ನು ಅಭಿವೃದ್ಧಿಪಡಿಸುವ ಕೆಲಸವನ್ನು ಅರಣ್ಯ ಪ್ರದೇಶದಲ್ಲಿ ವಾಸಮಾಡ

(ಶ್ರೀ [illegible] ಯ್ಯನಾಯಕ್)

ತಕ್ಕ ಗಿರಿಜನರಿಗೂ ಮತ್ತು ಕಾಡಿಗೆ ಹತ್ತಿರದಲ್ಲಿ ಜಮೀನು ಮಾಡಿಕೊಂಡಿರುವ ರೈತರಿಗೂ ಕೊಟ್ಟರೆ ಈ ಕೆಲಸ ಚೆನ್ನಾಗಿ ನಡೆಯುತ್ತೆ. ಈ ಗಿರಿಜನರಿಗೆ ಕಾಡೇ ಬೇರೇ-ನಾಡೇ ಬೇರೆ ಎಂಬ ವ್ಯತ್ಯಾಸವಿಲ್ಲ. ಈಗ ನಾನು ಮತ್ತೊಂದು ಅಂಶವನ್ನು ಸರ್ಕಾರದವರ ಗಮನಕ್ಕೆ ತರ ಬಯಸುತ್ತೇನೆ. ಈ ದಿವಸ ನಮ್ಮ ಪ್ರದೇಶದಲ್ಲಿ ಸುಮಾರು 60 ವರ್ಷಗಳಿಂದಲ್ಲೂ ಕೆಲವು ಜನ ಕಾಡಿನಲ್ಲಿ ವಾಸ ಮಾಡಿಕೊಂಡು ಅಲ್ಲಿ ಉತ್ತಮ ಮರಗಳನ್ನು ಬೆಳೆಸಿರತಕ್ಕ ಸ್ಥಳಗಳು 20-22 ಇರುತ್ತವೆ. ಆ ಜನರು ಯಾರೆಂದರೆ ಅವರು ಮಲೆಕುಡಿ ಜನರು. ಆ ಸ್ಥಳಗಳಲ್ಲಿ ವಾಸದ ಮನೆಗಳಿದ್ದ ಗುರುತುಗಳಿವೆ. ಹಲಸು-ಹುಣಿಸೆ, ಸಂಪಿಗೆ–ಅಡಕೆ ಇತ್ಯಾದಿ ಮರಗಳೂ–ಕೆರೆ-ಬಾವಿಗಳಿರುವ ಚಿಹ್ನೆಗಳಿರುತ್ತವೆ. ಈ ಜಾಗಗಳನ್ನು ಇತ್ತೀಚೆಗೆ ಫಾರೆಸ್ಟ್ ಇಲಾಖೆಯವರು ಈ ಜಾಗಗಳೆಲ್ಲ ಫಾರೆಸ್ಟಿಗೆ ಸೇರಿದ್ದೆಂದು ಆ ಜನರನ್ನು ಹೆದರಿಸಿ ಕಿತ್ತುಕೊಂಡಿದ್ದಾರೆ. ಆದರೆ ಆ ಗಿರಿಜನರಿಗೆ ತಿಳುವಳಿಕೆ ಇದ್ದದ್ದೋ ಅಥವ ಇಲ್ಲದೇನೋ ಈ ದಿವಸ ಆ ಜಾಗಗಳೆಲ್ಲ ಫಾರೆಸ್ಟ್ ಇಲಾಖೆಗೆ ಸೇರಿದ ಜಾಗಗಳೆಂದು ಹೇಳುವಂಥ ಒಂದು ಸಂಧರ್ಭವೀಗ ಬಂದಿದೆ. ಈ ಜಾಗಗಳು ಈ ದಿವಸ ರೆವಿನ್ಯೂ ಖಾತೆಗೆ ಸೇರಿದವುಗಳೇ ಅಥವ ಅರಣ್ಯ ಶಾಖೆಗಳಿಗೆ ಸೇರಿದವುಗಳೇ ಎನ್ನುವುದೊಂದು ಗೊತ್ತಾಗುತ್ತಿಲ್ಲ. ಈ ಜಮೀನುಗಳನ್ನೆಲ್ಲಾ ಈಗಲೂ ಕೂಡ ಅದೇ ಜನರಿಗೆ ದರಖಾಸ್ತು ಮೂಲಕವಾಗಲೀ ಅಥವ ಲೀಸ್ ಮೂಲಕ ಆಗಲೀ ಅಥವಾ ಗೇಣಿಗಾಗಲೀ ಕೊಡಬೇಕೆಂದು ಹೇಳುತ್ತೇನೆ. ಈ ಜನರು ಬಹಳ ಪ್ರಾಮಾಣಿಕರು. ಅವರು ಕಾಡಿನ ಮಧ್ಯದಲ್ಲಿದ್ದರೂ ಕಾಡು ನಾಶವಾಗುವುದಿಲ್ಲವೆಂಬ ಭರವಸೆಯನ್ನು ನಾನು ಕೊಡಬಲ್ಲೆ.

ಇನ್ನು ನಾನು ವಿದ್ಯಾಭ್ಯಾಸದ ವಿಚಾರದಲ್ಲಿ ಒಂದೆರಡು ವಿಷಯಗಳನ್ನು ತಿಳಿಸ ಬಯಸುತ್ತೇನೆ. ಇದು ಬಹಳ ದೊಡ್ಡ ಸಂಸ್ಥೆಗಳ ಇಲಾಖೆ. ಈ ಇಲಾಖೆಗೆ ಸಾಕಷ್ಟು ಶಿಬ್ಬಂದಿಯಿದೆ. ಆದರೂ ಈ ಇಲಾಖೆ ಹಿಂದೆ ಹೇಗೆ ಇತ್ತೋ ಈಗಲೂ ಹಾಗೆ ಇದೆ. ಈ ಇಲಾಖೆಗೆ ದೊಡ್ಡದಾದ ಲಕ್ಷಣಗಳೇ ಕಂಡುಬರುತ್ತಿಲ್ಲ. ಕಾಲೇಜ್ ಫೀಜ್ ವಿಚಾರದಲ್ಲಿ ಕೊಡಗಿನಲ್ಲಿಯ ಕಾಲೇಜುಗಳಲ್ಲಿ ಮದ್ರಾಸ್ ಯೂನಿವರ್ಸಿಟಿಯ ವ್ಯಾಪ್ತಿಗೆ ಒಳಪಟ್ಟಾಗ್ಗೆ ಎಷ್ಟು ಫೀಜ್ ಇದ್ದಿತ್ತೋ ಅಷ್ಟನ್ನೇ ಈಗಲೂ ವಸೂಲು ಮಾಡಲಾಗುತ್ತಿದೆ. ಹಳೇ ಮೈಸೂರು ಕಾಲೇಜುಗಳಲ್ಲಿ ಹೊಸ ಮೈಸೂರು ಪ್ರದೇಶದಲ್ಲಿಯ ಕಾಲೇಜು ಫೀಜುಗಿಂತ ಕಡಿಮೆಯಾಗಿದೆ. ಈ ರೀತಿ ಇರುವದರಿಂದ ಅತೃಪ್ತಿ ಬರಲು ಕಾರಣವಾಗಿದೆ. ಈ ಧೋರಣೆ ಸರಿಯಾದುದು ಅಲ್ಲ. T. E. D. Training ಗೆ ಬರತಕ್ಕ ಶಿಕ್ಷಕರಿಗೆ ಹಳೇ ಮೈಸೂರಿನಲ್ಲಿ ಅನುಕೂಲವಿದೆ. ಪೂರ್ತಿ ಸಂಬಳ ಫ್ಯಾಮಿಲಿ ಅಲೌನ್ಸ್ ಕೊಡುತ್ತಾರೆ. ನಮ್ಮ ಜಿಲ್ಲೆಯಿಂದ ಬಗತಕ್ಕ ಶಿಕ್ಷಕರಿಗೆ ಯಾವ ಸಂಬಳ ಕೊಡುವದಿಲ್ಲ. ಸ್ಟೈಪೆಂಡ್ ಸಹ ಕೊಡುವದಿಲ್ಲ. ಇದು ಸರಿಯಲ್ಲ. ಇದರಿಂದ ಅತೃಪ್ತಿ ಉಂಟಾಗಿದೆ. ಸರಕಾರದವರು ದಯವಿಟ್ಟು ಮನಸ್ಸು ಮಾಡಿ ಈ ಅತೃಪ್ತಿಯನ್ನು ಹೋಗಲಾಡಿಸಬೇಕು. ಇನ್ನೊಂದು ವಿಚಾರ. ಹಳೇ ಮೈಸೂರು ಪ್ರದೇಶದಲ್ಲಿ ರಿಟೈರ್ ಆಗುವುದಕ್ಕೆ 58 ವರ್ಷ ವಯೋಪರಿಮಿತಿಯಿದೆ. ಇತರ ಪ್ರದೇಶದಲ್ಲಿ 55 ವರ್ಷ ಎಂದಿದೆ. ಖಂಡಿತವಾಗಿ ಇಂಥ ವ್ಯತ್ಯಾಸವಿರುವುದು ಒಳ್ಳೆಯದಲ್ಲ. ವಿದ್ಯಾ ಇಲಾಖೆಗೆ ಒದಗಿಸಿದ ಹಣ ನೋಡಿದರೆ ಸಂತೋಷವಾಗುತ್ತದೆ. ಈ ವರ್ಷ ಒಂದೂವರೆ ಪಟ್ಟು ಹೆಚ್ಚಿಗೆ ಹಣ ಒದಗಿಸಿದ್ದಾರೆಂದು ಹೇಳಲು ಸಂತೋಷವಾಗುತ್ತದೆ.

ಇನ್ನು ಕನ್ನಡ ಟೈಪ್‌ರೈಟರ್ ವಿಷಯ. ಆಡಳಿತ ಭಾಷೆ ಎಲ್ಲ ಮಟ್ಟದಲ್ಲಿ ಕನ್ನಡವಾಗಬೇಕು. ಆದಷ್ಟು ಬೇಗನೆ ಕನ್ನಡ ಟೈಪ್‌ರೈಟರ್ ಒದಗಿಸಬೇಕು. ಕನ್ನಡ ಟೈಪ್‌ರೈಟರ್ ಬಗ್ಗೆ ಉದಾಸೀನ ಭಾವನೆ ಅನಾಸಕ್ತಿಯಿಂದ ನೋಡುವುದು ಒಳ್ಳೆಯದಲ್ಲ. ಕನ್ನಡ ಟೈಪ್‌ರೈಟರ್ ತಯಾರಿಕೆ ಬಗ್ಗೆ ಮೇಲ್ಮನೆಯಲ್ಲಿ ಮುಖ್ಯಮಂತ್ರಿಗಳು ಕೊಟ್ಟಿರುವ ಹೇಳಿಕೆ ಸಂತೋಷದ

ವಿಚಾರ. ಕನ್ನಡ ಟೈಪ್‌ರೈಟರ್ ತಯಾರಿಕೆ ಬಗೆ, ಇನ್ನೂ ಹೆಚ್ಚಿಗೆ ಆಸಕ್ತಿ ವಹಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಸಂಬಳದ ವಿಚಾರ. ಸಾಧಾರಣವಾಗಿ ಪ್ರೈಮರಿ ಸ್ಕೂಲು ಟೀಚರುಗಳ ವೇತನ ತೃಪ್ತಿಕರವಾಗಿದೆಂದು ಹೇಳಬಹುದು. ಆದರೆ ಕೆಲವು ಪ್ರದೇಶದಿಂದ ಬಂದಿರತಕ್ಕಂಥವರಿಗೆ ಮಾತ್ರ ಅನ್ಯಾಯವಾಗಿದೆ. ಪ್ರಿಸ್ಕ್ರೈಬ್ಡ್ ವೇತನದಲ್ಲಿ ಬಹಳ ಕಡಿಮೆಯಾಗಿದೆ. ಈ ಪರಿಷ್ಕೃತ ವೇತನ ಬಗ್ಗೆ ಪುನರಾಲೋಚನೆ ಮಾಡಬೇಕು. ಇನ್ನು ಕ್ರಾಫ್ಟ್ ಟ್ರೈನಿಂಗ್ ವಿಚಾರದಲ್ಲಿ ಒಂದು ರೀತಿಯ ಅತೃಪ್ತಿಯುಂಟಾಗಿರುವುದನ್ನು ಸರಿಪಡಿಸಬೇಕು. ಉಪಾಧ್ಯಾಯರುಗಳಿಗೆ ವೇತನದ ವಿಚಾರದಲ್ಲಿ ಕೆಲವು ಸವಲತ್ತು ಕೊಡಬೇಕು. ಇದರಿಂದ ಸರಕಾರಕ್ಕೆ ಅಷ್ಟೇನು ಹೆಚ್ಚು ಖರ್ಚು ಆಗುವುದಿಲ್ಲ. ಪ್ರೈವೇಟಾಗಿ ಕಲಿತು ಪರೀಕ್ಷೆಗೆ ಕಟ್ಟುವ ಅವಕಾಶ ಕೊಡುವುದು ಸರಿಯಾದುದು. ಇದರಿಂದ ಪ್ರಯೋಜನವಿದೆ. ಕೆಲವರು ಹೇಳುತ್ತಾರೆ. ಪ್ರೈವೇಟಾಗಿ ಕಲಿತು ಪರೀಕ್ಷೆಗೆ ಕುಳಿತುಕೊಳ್ಳತಕ್ಕಂಥವನಿಗೆ ಯೋಗ್ಯತೆ ಇರುವುದಿಲ್ಲ ಎಂದು. ಎಲ್ಲವನ್ನು ಶಾಲೆಯಲ್ಲಿಯೇ ಕಲಿಯಬೇಕೆಂದೇನು ಇರುವುದಿಲ್ಲ. ನಿಜವಾಗಿ ಬುದ್ಧಿ ಒಡಲೊಳಗೆ ಹುಟ್ಟಬೇಕು. ಅಂಥವರಲ್ಲಿ ಯೋಗ್ಯತೆ ಇರುತ್ತದೆ.

ಇನ್ನೊಂದು ವಿಚಾರ. ಸ್ಕೂಲು ಹೈಸ್ಕೂಲುಗಳನ್ನು ತಾಲ್ಲೂಕ್ ಬೋರ್ಡ್ ಡಿಸ್ಟ್ರಿಕ್ಟ್ ಬೋರ್ಡುಗಳ ಸ್ವಾಧೀನಕ್ಕೆ ಕೊಡುವ ಬಗ್ಗೆ ಆಲೋಚನೆ ನಡೆದಿದೆ. ಇದನ್ನು ತೀವ್ರ ನಿಶ್ಚಯ ಮಾಡಬೇಕು. ನಾನು ಸೂಚಿಸುವುದೇನೆಂದರೆ ಹೈಸ್ಕೂಲುಗಳನ್ನು ತಾಲ್ಲೂಕ್ ಬೋರ್ಡುಗಳಿಗೆ ಕೊಡದೇ ಒಂದು ಸ್ಕೂಲು ಬೋರ್ಡು ರಚಿಸಿ ಅದರ ಅಧೀನದಲ್ಲಿ ಕೊಡಬೇಕು. ವಿದ್ಯಾಕ್ಷೇತ್ರದಲ್ಲಿ ರಾಜಕೀಯ ವಾತಾವರಣ ಬರುವುದು ಒಳ್ಳೆಯದಲ್ಲ. ಪ್ರೈಮರಿ ಸ್ಕೂಲುಗಳನ್ನು ತಾಲ್ಲೂಕು ಬೋರ್ಡಿಗೆ ಕೊಟ್ಟಲ್ಲಿ ತೊಂದರೆ ಏನೂ ಇಲ್ಲ.

ವಿದ್ಯಾರ್ಥಿಗಳಿಗೆ ಸ್ಕೂಲುಗಳಲ್ಲಿ ಮಧ್ಯಾಹ್ನದ ಊಟ ಕೊಡುವುದರಿಂದ ಹೆಚ್ಚಿನ ಪ್ರಯೋಜನವಾಗುತ್ತದೆ. ಐದಾರು ವರ್ಷದ ಚಿಕ್ಕಮಕ್ಕಳು ಒಂದೆರಡು ಮೈಲಿ ನಡೆದುಕೊಂಡು ಬೆಳಗ್ಗೆ ಎಂಟು ಗಂಟೆಗೆ ಮನೆಯಿಂದ ಹೊರಟು ಸ್ಕೂಲುಗಳಿಗೆ ಬರುತ್ತಾರೆ. ಬೆಳಗ್ಗೆ ಸರಿಯಾಗಿ ಊಟ ಮಾಡಲು ಆಗುವುದಿಲ್ಲ. ಬಡ ವಿದ್ಯಾರ್ಥಿಗಳಿಗೆ ಮದ್ಯಾಹ್ನ ಊಟ ದೊರೆಯದೆ ಅನಾನುಕೂಲವಾಗುತ್ತದೆ. ಮಧ್ಯಾಹ್ನದ ಊಟ ಕೊಡುವ ಬಗ್ಗೆ ವ್ಯವಸ್ಥೆ ಮಾಡಲು ಸರಕಾರ ಮನಸ್ಸು ಮಾಡಬೇಕು. ಒಂದು ಊಟಕ್ಕೆ ಹತ್ತು ಪೈಸೆ ಖರ್ಚು ಆಗುತ್ತದೆ. ಗಂಜಿ ಕೊಡುತ್ತಾರೆ. ಇದರಿಂದ ಹೆಚ್ಚು ಖರ್ಚಾಗುವುದಿಲ್ಲ. ಕೆಲವು ಮಕ್ಕಳು ಅಡಿಗೆ ಸಹ ಮಾಡತ್ತಾರೆ. ಮಧ್ಯಾಹ್ನದ ಊಟ ಒದಗಿಸಿ ಕೊಡುವುದರಿಂದ ಹೆಚ್ಚಿನ ಉಪಯೋಗವಾಗುತ್ತದೆ. ಮಕ್ಕಳಿಗೆ ಅನ್ನ ಕೊಟ್ಟರೆ ಸಂತೋಷವಾಗುತ್ತದೆಂದು ನಾನು ಹೇಳುತ್ತೇನೆ.

ಕಡ್ಡಾಯ ಶಿಕ್ಷಣ ಬಂದಾಗ ವಿದ್ಯಾಇಲಾಖೆಯಲ್ಲಿ ಬಹುದೊಡ್ಡ ಪ್ರಮಾದವಾಗುತ್ತದೆ. ಏನೆಂದರೆ ಪ್ರತಿಯೊಂದು ಯೋಜನೆಯನ್ನೂ ಹಾಕಿ ಅದನ್ನು ಜಾರಿಗೆ ಕೊಡುತ್ತಾರೆ. ಆದರೆ ಅದು ಹೇಗೆ ಕೆಲಸ ಮಾಡುತ್ತದೆ ಎನ್ನುವುದನ್ನು ಪ್ರಯೋಗ ಮಾಡಿ ನೋಡಿರುವುದಿಲ್ಲ. ಉದಾಹರಣೆಗೆ ಹೇಳುವುದಾದರೆ, ಹೊಸ ಸಿಲಬಸ್ ಜಾರಿಗೆ ತಂದರು. ಅದರ ಪ್ರಕಾರ ಪಠ್ಯಪುಸ್ತಕಗಳೇ ಸಿಕ್ಕಲಲ್ಲ. ಇದರಿಂದ ಬಹಳ ತೊಂದರೆಯಾಯಿತು. ಪ್ರತಿಯೊಂದು ಯೋಜನೆಯನ್ನು ಜಾರಿಗೆ ತರುವಾಗಲೂ ಪ್ರಯೋಗ ಮಾಡಿ ನಂತರ ಜಾರಿಗೆ ತಂದರೆ ಒಳ್ಳೆಯದೆಂದು ಹೇಳುತ್ತೇನೆ.

ಕಡ್ಡಾಯ ಶಿಕ್ಷಣವನ್ನು ಜಾರಿಗೆ ತರುವಾಗ ಕಟ್ಟಡಗಳ ಸಮಸ್ಯೆ ಬಹಳ ಉಗ್ರರೂಪವಾಗಿ ಉದ್ಭವಿಸುತ್ತದೆ. ಕಟ್ಟಡಗಳನ್ನು ಈಗಿನ ಧೋರಣೆ ಪ್ರಕಾರ ಕಟ್ಟುವುದಕ್ಕೆ ಸಾಧ್ಯವಿಲ್ಲ. ಒಂದೊಂದು ಕಟ್ಟಡಕ್ಕೆ ಐದಾರು ಸಾವಿರ ರೂಪಾಯಿ ಬೇಕು. ಕಟ್ಟಡಗಳನ್ನು ಊರಿನವರು ಕಟ್ಟಿಸಿಕೊಡಬೇಕು. ಎಂದರೆ ಅವರು ಎಲ್ಲಿಂದ ಹಣವನ್ನು ತರಬೇಕು? ಸರ್ಕಾರಕ್ಕೆ ಕೊಡಬೇಕಾದ ಕಂದಾಯ ವಗೈರೆಗಳನ್ನು ಕೊಟ್ಟು ತಮ್ಮ ಮಕ್ಕಳ ಸವಲತ್ತುಗಳನ್ನು ನೋಡಿಕೊಳ್ಳ

(ಶ್ರೀ ಎಸ್. ಸುಬ್ಬಯ್ಯನಾಯಕ್)

ಬೇಕಾದರೆ ಊರಿನವರು ಎಲ್ಲಿಂದ ಹಣವನ್ನು ತರುತ್ತಾರೆ. ಈಗಂತೂ ಹಣ ಕೇಳಲಿಕ್ಕೆ ಬರುವವರು ನೂರಾರು ಮಂದಿ ಇದ್ದಾರೆ. ಆದ ಕಾರಣ ಪ್ರತಿಯೊಂದಕ್ಕೂ ಹಣ ಬೇಡುವುದು ಅಥವಾ ಹಣ ಕೊಡುವುದು ಇಂಥ ಪರಿಸ್ಥಿತಿಯನ್ನು ತರಬಾರದು. ಶಾಲಾಕಟ್ಟಡಗಳನ್ನು ಸ್ಥಳೀಕ ಮಾದರಿಯಲ್ಲಿ ಕಟ್ಟಬೇಕು. ಅದು ಪಕ್ಕಕಟ್ಟಡವಾಗಿರುತ್ತದೆಂದು ನಾನು ವಿನಂತಿಸುತ್ತೇನೆ.

ಷೆಡ್ಯೂಲ್ಡ್ ಟ್ರೈಬ್ಸ್ ವಿಚಾರವಾಗಿ ಒಂದೆರಡು ಮಾತನ್ನು ಹೇಳುತ್ತೇನೆ, ಷೆಡ್ಯೂಲ್ಡ್ ಜಾತಿಯವರ ವಿಚಾರವಾಗಿ ತಮ್ಮ ಮುಂದೆ ಹೇಳುವವರಿರುವುದರಿಂದ, ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಬಗ್ಗೆ ಹೆಚ್ಚು ಮಾತನಾಡುವುವವರಿಲ್ಲದೆಯಿರುವುದರ ಕಾರಣ ನಾನು ಕೆಲವು ಮಾತುಗಳನ್ನು ಹೇಳುತ್ತೇನೆ. ವಿದ್ಯಾಭ್ಯಾಸ ಇಲಾಖೆ ಷೆಡ್ಯೂಲ್ಡ್ ಟ್ರೈಬ್ಸ್‌ನವರ ವಿದ್ಯಾಭ್ಯಾಸದ ಬಗ್ಗೆ ಏನೊಂದು ಗಮನವನ್ನು ಕೊಟ್ಟಿಲ್ಲ, ಏನೊಂದೂ ಯೋಜನೆಯನ್ನು ತಯಾರಿಸಿಲ್ಲವೆಂದು ಹೇಳುತ್ತ, ಇವರಿಗೆ ವಿದ್ಯಾಭ್ಯಾಸ ಕೊಡುವ ಸಲುವಾಗಿ ಒಂದು ಯೋಜನೆಯನ್ನು ತಯಾರಿಸಿ ಅದನ್ನು ಜಾರಿಗೆ ತರಬೇಕೆಂದು ಹೇಳುತ್ತೇನೆ. ಗಿರಿ ಜನರಿಗೆ ಕರೆದು ಕೊಟ್ಟರೂ, ವಿದ್ಯಾಭ್ಯಾಸ ಬೇಡ. ಅದರು ಕಂದಾಚಾರದಲ್ಲಿದ್ದಾರೆ, ನಮ್ಮಪ್ಪನಿಗೆ ಇರಲಿಲ್ಲ, ನನ್ನ ಮಗನಿಗೂ ಬೇಡ ಎಂದು ಹೇಳುವ ಸ್ಥಿತಿಯಲ್ಲಿದ್ದಾರೆ. ಇವರನ್ನೂ ಎಚ್ಚರಿಸಿ, ಕರೆದುಕೊಂಡು ಹೋಗಿ, ಶಾಲೆಗಳನ್ನೂ ಮಾಡಿ, ಅವರಿಗೆ ವಸ್ತ್ರ, ಪುಸ್ತಕ, ಸ್ಟೈಫಂಡ್ ಇತ್ಯಾದಿಗಳನ್ನು ಕೊಟ್ಟರೆ ಅವರು ಮುಂದಕ್ಕೆ ಬರಲು ಸಾಧ್ಯ. ಇವರಿಗೆ ವಿದ್ಯಾ ಇಲಾಖೆಯಿಂದ ಹೆಚ್ಚಿನ ಪ್ರೋತ್ಸಾಹ ಸಿಕ್ಕಬೇಕು. ಇಲ್ಲದೆ ಹೋದರೆ ಪ್ರಜೆಗಳಿಗೆ ಕಂಟಕಪ್ರಾಯರೂ ಅಪ್ರಯೋಜಕರೂ ಆಗುತ್ತಾರೆ ಆದಕಾರಣ ಈ ಜನರನ್ನು ಸುಧಾರಿಸುವ ವಿಷಯಕ್ಕೆ ಹೆಚ್ಚು ಗಮನ ಕೊಡಬೇಕು.

ಈ ವರ್ಷ ಒಬ್ಬನೇ ಒಬ್ಬ ಗುಡ್ಡಗಾಡಿನ ಜನರ ಗುಂಪಿಗೆ ಸೇರಿದವನು ಪದವೀಧರನಾಗಿ ಟ್ರೈನಿಂಗಿಗೆ ಹೋಗಿದ್ದ. ಅವನಿಗೆ ವಿದ್ಯಾ ಇಲಾಖೆಯಿಂದ ಅಥವಾ ಸಮಾಜ ಕಲ್ಯಾಣ ಇಲಾಖೆಯಿಂದಾಗಲೀ stipend ಸಿಕ್ಕಲಿಲ್ಲ. ಇನ್ನು ಯಾವ ತರಹ ಅನಕೂಲ ಸಹ ಸಿಕ್ಕಲಿಲ್ಲ. ಅತನು ತನ್ನನ್ನೇ ಮೂದಲಿಸಿ ಮಾತನಾಡ ತಕ್ಕ ಪರಿಸ್ಥಿತಿ ಬಂತು, ಈ ರೀತಿ ಯಾಗಬಾರದು.

ಎಷ್ಟೋ ಶಾಲೆಗಳಲ್ಲಿ 60 ರಿಂದ 90 ಮಕ್ಕಳವರೆಗೂ ಇದ್ದಾರೆ. ದೊಡ್ಡಿಯಲ್ಲಿ ಜಾನುವಾರಗಳನ್ನು ಸೇರಿಸುವಂತೆ ಇವರನ್ನು ಶಾಲೆಯಲ್ಲಿ ಹಾಕಿರುತ್ತಾರೆ. ಒಬ್ಬ ಉಪಾಧ್ಯಾಯ ಹೇಗೆ ತಾನೇ ಇವರಿಗೆ ಪಾಠ ಹೇಳಬಲ್ಲ? ಇಂಥ ಪರಿಸ್ಥಿತಿಯಾಗಬಾರದು, ಕಡ್ಡಾಯ ಶಿಕ್ಷಣವನ್ನು ಜಾರಿಗೆ ತರುವಾಗ್ಗೆ ಹೆಚ್ಚು ಹೆಚ್ಚು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 70 ಕ್ಕಿಂತ ಹೆಚ್ಚು ಹೈಸ್ಕೂಲುಗಳಿವೆ. ನೂರಾರು ಮಿಡಲ ಸ್ಕೂಲುಗಳೂ ಸಾವಿರಾರು ಪ್ರೈಮರಿ ಸ್ಕೂಲುಗಳೂ ಇವೆ. ಇವುಗಳನ್ನೆಲ್ಲ ಒಬ್ಬ D. E. O. ನಿರ್ವಹಿಸಲಿಕ್ಕೆ ಖಂಡಿತ ಸಾಧ್ಯವಾಗಿಲ್ಲ, ಎರಡು ಡಿವಿಜ಼ನ್ ಮಾಡಿ ಅಲ್ಲಿಗೆ ಇನ್ನೊಬ್ಬ D. E. O. ರವರನ್ನೂ ನೇಮಿಸಬೇಕಾದ್ದು ಬಹಳ ಪ್ರಾಮುಖ್ಯವಾದ ವಿಷಯವೆಂದು ಹೇಳುತ್ತೇನೆ.

ನಾನು ಯಾವಾಗಲೂ ನನಗೆ ಕೊಟ್ಟ ಸಮಯದಲ್ಲಿ ಮಾತನಾಡಿ ಮುಗಿಸುತ್ತೇನೆ. ಸಮಯವಾಯಿತೆಂದು ಈಗಾಗಲೇ ಮಾನ್ಯ ಅಧ್ಯಕ್ಷರು ಅಪ್ಪಣೆ ಕೊಡಿಸಿದ್ದಾರೆ. ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಅಭಿನಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ನಿಲ್ಲಿಸುತ್ತೇನೆ

† ಶ್ರೀ ಬಿ. ಎಲ್. ನಾರಾಯಣ ಸ್ವಾಮಿ (ಮುಳಬಾಗಿಲು).—ಮಾನ್ಯ ಅಧ್ಯಕ್ಷರೇ, ಮೈಸೂರು ದೇಶದಲ್ಲಿ ಬಹಳ ಹಿಂದಿನ ಕಾಲದಿಂದ ವಿಶ್ವವಿದ್ಯಾನಿಲಯವು ವಿದ್ಯಾಭ್ಯಾಸದ ವಿಚಾರದಲ್ಲಿ ಇಡೀ ಭರತಖಂಡದಲ್ಲಿಯೇ ತನ್ನ ಔನ್ನತ್ಯದ ಶಿಖರವನ್ನು ಏರಿತು. ಅದಕ್ಕೆ ಕಾರಣರಾದಂಥ ಮಹಾನುಭಾವರನ್ನು ಸ್ಮರಣೆ ಮಾಡತಕ್ಕದ್ದು ನಮ್ಮ ಕರ್ತವ್ಯವೆಂದು ಕಾಣುತ್ತದೆ.

ಡಾಕ್ಟರ್ ಬ್ರಜೇಂದ್ರನಾಥ್ ರಾಧಾಕೃಷ್ಣಮುಖರ್ಜಿ, ಡಾಕ್ಟರ್ ರಾಧಾಕೃಷ್ಣನ್, ಸಿ. ಆರ್. ರೆಡ್ಡಿ, ಎಚ್. ಎಸ್. ಸುಬ್ಬರಾವ್, ಎ. ಆರ್. ವಾಡಿಯಾ ಇಂಥವರ ದೇಸೆಯಿಂದ ಬಹಳ ಖ್ಯಾತಿಯನ್ನು ಗಳಿಸಿತ್ತು. ಇಂಥ ಒಂದು ಮಹಾಸಂಸ್ಥೆಯ ವಿಷಯವಾಗಿ ಇಂದು ಬಹಳ ಜವಾಬ್ದಾರಿಯುತರಾಗಿರುವ ಶ್ರೀಮಾನ್ ಮರ್ಲ್ಲಾರಾಧ್ಯರು ಮಾತನಾಡುತ್ತ ಅದು ಎಷ್ಟು ಹೀನವಾದ ಟೀಕೆಗೆ ತುತ್ತಾಗಿದೆ ಎಂದು ತಿಳಿಸಿದರು. ಇದನ್ನು ಕಂಡು ಯಾರಾದರೂ ವ್ಯಥೆ ಪಡಬೇಕಾದ್ದೇ; ಸಂತೋಷ ಪಡತಕ್ಕದ್ದಲ್ಲ. ಈ ವಿಚಾರ ಕೇವಲ ಒಬ್ಬರಿಂದ ಮಾತ್ರವಲ್ಲ, ಅನೇಕರಿಂದ ಅನೇಕ ಕಡೆ ಕೇಳಿದ್ದೇವೆ. ಇದಕ್ಕಾಗಿ ಬಹಳ ವಿಷಾದಪಡುತ್ತೇನೆ. ಎಲ್ಲರೂ ವಿಷಾದ ಪಡಬೇಕಾದ್ದೇ. ಇಂಥ ಟೀಕೆಗಳಿಗೆ ಮತ್ತೆ ಅವಕಾಶವಿಲ್ಲದೆ ತನ್ನಗತ ಔನ್ನತ್ಯವನ್ನು ಈ ಸಂಸ್ಥೆ ಸಾಧಿಸುವ ಮಾರ್ಗದಲ್ಲಿ ಸಾಕಷ್ಟು ಹೆಚ್ಚಿನ ನಿಗಾ ಮಾನ್ಯ ಸಚಿವರು ಕೊಡಬೇಕೆಂದು ಪ್ರಾರ್ಥನೆ ಮಾಡುತ್ತಿದ್ದೇನೆ.

ಹೈಸ್ಕೂಲ್ ವಿದ್ಯಾಭ್ಯಾಸದ ವಿಚಾರದಲ್ಲಿ ಸಾಕಾದಷ್ಟು ತಾವು ಮಾಡುತ್ತಿದ್ದೀರಿ. ಆದರೆ ಮುಂದಿನ ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸಂಸ್ಥಾನದಲ್ಲಿ 246 ಹೈಸ್ಕೂಲುಗಳು ಸ್ಥಾಪನೆ ಯಾಗಬೇಕಾಗಿವೆ. ಆ ಪೈಕಿ 200 ಶಾಲೆಗಳನ್ನು ಖಾಸಗಿಯವರೂ ಮಾಡಬೇಕು ಮತ್ತು ಹತ್ತು ಶಾಲೆಗಳನ್ನು ಸರ್ಕಾರದಿಂದ ತೆರೆಯುತ್ತೇವೆಂದು ಹೇಳಿದ್ದಾರೆ. ಉಳಿದ 36 ಶಾಲೆಗಳ ಗತಿ ಏನಾಗಬೇಕೇನ್ನುವುದು ಗೊತ್ತಾಗಿಲ್ಲ. ಸರ್ಕಾರದವರು ಈ ಸಭೆಯಲ್ಲಿ ಮೊನ್ನೆ ಒಂದು ಪ್ರಶ್ನೆಗೆ ಉತ್ತರ ಕೊಡುತ್ತ ಇನ್ನುಮುಂದೆ ಸರ್ಕಾರದವರು ಹೈಸ್ಕೂಲುಗಳನ್ನು ಸ್ಥಾಪನೆ ಮಾಡತಕ್ಕ ನೀತಿಯನ್ನು ಬದಲಾಯಿಸಿದ್ದೇವೆ. ಖಾಸಗಿಯವರೇ ಇನ್ನುಮುಂದೆ ಮಾಡ ಬೇಕು ಎಂದು ಹೇಳಿದರು. ಹೊಟ್ಟೆ ಬಟ್ಟೆಗೆಯಿಲ್ಲದೆ ಕಷ್ಟಪಡತಕ್ಕ ಜನ, ವಿದ್ಯಾಭ್ಯಾಸಕ್ಕೆ ಮತ್ತಷ್ಟು ಕಷ್ಟಪಡಬೇಕಾದರೆ ಹೇಗೆತಾನೇ ಸಾಧ್ಯವಾಗುತ್ತದೆ? ಕೋಲಾರ ಜಿಲ್ಲೆ ಅದರಲ್ಲಿಯೂ ಶ್ರೀನಿವಾಸಪುರ ತಾಲ್ಲೂಕು ಅಭಾವದಿಂದ ನರಳುತ್ತಿರುವ ಪ್ರದೇಶ. ಅಂಥ ಕಡೆ ಖಾಸಗಿಯವರು ವಿದ್ಯಾಸಂಸ್ಥೆಗಳನ್ನು ಸ್ಥಾಪನೆ ಮಾಡಲಿ ಎಂದರೆ ನಿಜವಾಗಿಯೂ ನಮ್ಮ ಮಕ್ಕಳ ಮೇಲೆ ನಿಮಗೆ ಅಭಿಮಾನವಿದೆಯೇ ಎಂದು ಕೇಳುತ್ತೇನೆ. ನಾನು ಈ ಬಗ್ಗೆ ಅನೇಕ ಸಾರಿ ಪ್ರಾರ್ಥನೆ ಮಾಡಿದ್ದೇನೆ, ಈಗಲೂ ಪ್ರಾರ್ಥನೆ ಮಾಡುತ್ತೇನೆ. ನಮ್ಮ ತಾಲ್ಲೂಕಿನಲ್ಲಿ, ತಾಲ್ಲೂಕು ಮುಖ್ಯ ಸ್ಥಳವಾದ ಶ್ರೀನಿವಾಸಪುರದಲ್ಲಿ ಇರುವುದು ಒಂದೇ ಒಂದು ಹೈಸ್ಕೂಲ್, ಇದರಲ್ಲಿ ಒಂದೊಂದು ಸೆಕ್ಷನಲ್ಲಿಯೂ 65–70 ಮಂದಿ ಹುಡುಗರಿದ್ದಾರೆ. ಕಟ್ಟಡದಲ್ಲಿ ಸ್ಥಳವೇ ಇಲ್ಲ ಈ ಹೈಸ್ಕೂಲ್ ಕಟ್ಟಡವನ್ನು ಕಟ್ಟಿ ಎಂಟು ವರ್ಷವಾದರೂ ಅದಕ್ಕೆ ರಿಪೇರಿಯಾಗಿಲ್ಲ. ಜಿಲ್ಲಾ ಬೋರ್ಡಿನವರು ಕಟ್ಟಿಸಿದ ಕಟ್ಟಡ ಹಾಗೆಯೇ ಇದೆ. ಉಳಿದ ಅರ್ಧಭಾಗದ ಕಟ್ಟಡವನ್ನು ಸರ್ಕಾರದವರು ಕಟ್ಟಿಸಿ ಕೊಡಬೇಕಾಗಿದೆ. ಅನೇಕ ವೇಳೆ ಅನೇಕ ವಿಧವಾಗಿ ಪ್ರಾರ್ಥನೆ ಮಾಡಿದರೂ ಸರ್ಕಾರಕ್ಕೆ ಇದುವರೆಗೂ ದಯೆ ಬಂದಿಲ್ಲ. 57ಸಾವಿರ ರೂಪಾಯಿಗಳಿಗೆ ಅಂದಾಜು ತಯಾರಾಗಿದೆ ಎಂದು ಸ್ಥಳೀಯ ಸರ್ಕಾರದ ಮಂತ್ರಿಗಳು ಹೇಳಿದರು. ಬೇಗ ಇದರ ಕೆಲಸ ಮಾಡಿಸಿ ಹುಡುಗರಿಗೆ ಸೌಕರ್ಯ ಮಾಡಿಸಿಕೊಡಬೇಕು.

ಶ್ರೀನಿವಾಸ ಪುರ ತಾಲ್ಲೂಕಿಗೆಲ್ಲ ಒಂದೇ ಒಂದು ಹೈಸ್ಕೂಲು ಇರುವುದುದರಿಂದ ಅನೇಕ ಜನ ಮಕ್ಕಳಿಗೆ ಹೈಸ್ಕೂಲಿಗೆ ಬಂದು ವ್ಯಾಸಂಗ ಮಾಡುವುದಕ್ಕೆ ಅವಕಾಶವಿಲ್ಲದೆ ಇದೆ. ತಮಗೆಲ್ಲ ಗೊತ್ತಿರುವ ಹಾಗೆ ನಮ್ಮ ತಾಲ್ಲೂಕು ಆಂಧ್ರಪ್ರದೇಶದ ಅಂಚಿನಲ್ಲಿದೆ. ಶ್ರೀನಿವಾಸ ಪುರ ತಾಲ್ಲೂಕು ಉತ್ತರದ ಕಡೆ 22ಮೈಲಿ ದೂರದ ವಿಸ್ತಾರವಾಗಿದೆ. ಅಷ್ಟು ದೂರದಿಂದ ಬಡ ಮಕ್ಕಳು ಶ್ರೀನಿವಾಸಪುರಕ್ಕೆ ಬಂದು ವಿದ್ಯಾಭ್ಯಾಸ ಮಾಡಬೇಕು ಎಂದರೆ ಹೇಗೆತಾನೇ ಸಾಧ್ಯ ವಿದೆ. ಆದುದರಿಂದ ಇಂಥ ಕಡೆಗಳಿಗೆ ಕೂಂಚ ವಿನಾಯಿತಿ ತೋರಿಸಿ, ಶ್ರೀನಿವಾಸಪುರದ ರಾಯಲಪಾಡಿನಲ್ಲಿ ಒಂದು ಹೈಸ್ಕೂಲನ್ನು ಸರ್ಕಾರದವರು ಸ್ಥಾಪನೆ ಮಾಡಬೇಕೆಂದು ಅತಿ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ.

(ಶ್ರೀ ಬಿ. ಎಲ್. ನಾರಾಯಣ ಸ್ವಾಮಿ)

4-30 P.M.

ಇಲ್ಲಿ ಇನ್ನೊಂದು ಸೌಕರ್ಯವಿದೆ. ರಾಯರ್‌ಪಾಡು ಹೋಬಳಿಯಲ್ಲಿ, ಒಂದು ಟೋಲು ಗೇಟಿನ ಕಟ್ಟಡವಿದೆ. ಇದು ಐದು ರೂಮುಗಳನ್ನು ಕಟ್ಟಿರುವಂತಹ ದೊಡ್ಡ ಕಟ್ಟಡವಾಗಿರುವುದರಿಂದ ಇಲ್ಲಿ ಹೈಸ್ಕೂಲನ್ನು ನಡೆಸುವುದಕ್ಕೆ ಅನುಕೂಲವಾಗಿದೆ. ಈಗ ಕಟ್ಟಡಕ್ಕಾಗಿ ಸರಕಾರ ದುಡ್ಡನ್ನು ಏನೂ ಖರ್ಚು ಮಾಡಬೇಕಾಗಿಲ್ಲ. ಇಂತಹ ಭಾಗದಲ್ಲಿ ಈಗಲಾದರೂ ನಮ್ಮ ಮಕ್ಕಳಿಗೆ ಅನುಕೂಲವಾಗುವಂತೆ ಒಂದು ಹೈಸ್ಕೂಲನ್ನು ಸರಕಾರದವರು ಮಂಜೂರು ಮಾಡಿದರೆ ನಿಜವಾಗಿಯೂ ಬಹಳ ಉಪಕಾರ ಮಾಡಿದಂತೆ ಆಗುತ್ತದೆ. ಒಂದುವೇಳೆ, ಇಲ್ಲಿ ಮಾಡುವುದಕ್ಕಾಗವುದಿಲ್ಲ ಎಂದು ಹೇಳಿದರೆ, ನಾನೇನೂ ಮಾಡುವ ಹಾಗಿಲ್ಲ. ಒಂದುವೇಳೆ ಅಂತಹ ಕಾಲ ಬಂದರೆ ಮುಖ್ಯಮಂತ್ರಿಗಳ ಮನೆಯ ಮುಂದೆ ಇಲ್ಲವೇ ವಿದ್ಯಾಮಂತ್ರಿಗಳ ಮನೆಯ ಮುಂದೆ ಸತ್ಯಾಗ್ರಹವನ್ನು ಆಚರಿಸಬೇಕಾಗುತ್ತದೆ. ಆರೀತಿ ಮಾಡುವವರೆಗೂ ಬಿಡುವುದಿಲ್ಲ ಎಂದು ನಾನು ನಂಬುತ್ತೇನೆ.

ಸ್ವಾಮೀ ಹೈಸ್ಕೂಲುಗಳಲ್ಲಿ ಮಲ್ಟಿಪರ್ಪಸ್ ಹೈಸ್ಕೂಲುಗಳೆಂದು ಮಾಡುತ್ತಿದ್ದೀರಿ. ಇದೇ ರೀತಿಯಾಗಿ ಶ್ರೀನಿವಾಸಪುರದಲ್ಲಿಯೂ ಒಂದು ಮಲ್ಟಿಪರ್ಪಸ್ ಸ್ಕೂಲು ಎಂದು ಮಾಡಿದ್ದಾರೆ. ಇದೇ ರೀತಿ ಎಲ್ಲ ಕಡೆಗಳಲ್ಲಿಯೂ ಮಾಡಿದ್ದಾರೆಂದು ಕೇಳುತ್ತೇನೆ. ಆದರೆ ಇಲ್ಲಿ ಇದರ ಬಗ್ಗೆ ಏನು ನಡೆಯುತ್ತಿದೆ ಎನ್ನುವುದೇ ಕಾಣುತ್ತಿಲ್ಲ. ಇಲ್ಲಿಗೆ ಯಾವ ಇನ್‌ಸ್ಟ್ರಕ್ಟರನ್ನೂ ಕೂಡ ನೇಮಿಸಿಲ್ಲ. ಕುಡಿಯುವುದಕ್ಕೆ ನೀರು ಬೇಕಾಗುತ್ತದೆ ಎಂದು ಯಾರೋ ಒಬ್ಬರು ಬಾವಿ ತೋಡಿಸುತ್ತಾರೆ. ಇದರಿಂದ ಜನಕ್ಕೆ ಪ್ರಯೋಜನವಾಗತ್ತದೆ. ಆ ರೀತಿ ಯಾವ ಉದ್ದೇಶಕ್ಕಾಗಿ ಎಂದು ಮಾಡುತ್ತೇವೆಯೋ ಅದು ಸಫಲವಾಗದಿದ್ದರೆ, ಇದರಿಂದ ದೇಶಕ್ಕೆ ಒಳ್ಳೆಯದಾಗುತ್ತದೆಯೋ ಎಂದು ನಾನು ತಮ್ಮಲ್ಲಿ ಕೇಳಬೇಕಾಗಿದೆ. ಈಗಾಗಲೇ ಮಾನ್ಯ ಸದಸ್ಯರು ಹೇಳಿದಂತೆ ಯಾವುದಾದರೂ ಒಂದು ಯೋಜನೆಯನ್ನು ಜಾರಿಗೆ ತರಬೇಕಾದರೆ ಅದಕ್ಕೆ ಬೇಕಾದಂತಹ ಸಲಕರಣೆಗಳನ್ನೆಲ್ಲಾ ಒದಗಿಸಿಕೊಂಡು ಅನಂತರ ಅದನ್ನು ಜಾರಿಗೆ ಕೊಡತಕ್ಕದ್ದು ಯೋಗ್ಯವಾಗಿರುತ್ತದೆ. ಅದಿಲ್ಲದೆ, ಸರಕಾರ ಸುಮ್ಮನೆ ಏನೋ ಒಂದು ಯೋಜನೆ ಮಾಡಿಕೊಂಡು ಅದು ಕಾರ್ಯಗತವಾಗದಿದ್ದರೆ ಆದರಿಂದೇನು ಉಪಯೋಗವಾಗುತ್ತದೆ? ನಿಜವಾಗಿಯೂ ನಿಮ್ಮ ಉದ್ದೇಶ ಸಾರ್ಥಕವಾಗುತ್ತದೆಯೇ? ಆದುದರಿಂದ ಈ ಮಲ್ಟಿಪರ್ಪಸ್ ಹೈಸ್ಕೂಲುಗಳ ಉದ್ದೇಶ ಸಫಲ ವಾಗ ಬೇಕಾಗಿದ್ದರೆ ಅದಕ್ಕೆ ಬೇಕಾದಂತಹ ಸಲಕರಣೆಗಳನ್ನೆಲ್ಲಾ ಕೊಟ್ಟು ಒದಗಿಸಿಕೊಡಿ ಎಂದು ಹೇಳುತ್ತೇನೆ.

ಶ್ರೀ. ಅಣ್ಣಾರಾವ್ ಗಣಮುಖಿ.—ಮಲ್ಟಿಪರ್ಪಸ್ ಹೈಸ್ಕೂಲುಗಳ ಸಂಖ್ಯೆ ಇನ್ನು ಮುಂದೆ ನಿರ್ಧಾರ ಮಾಡಬೇಕು. ಈಗ ಉಪಕರಣಗಳ ಪೂರ್ವಸಿದ್ಧತೆ ಮಾಡುತ್ತಿದ್ದಾರೆ. ಈಗ ಬರೀ ಹದಿನೈದು ಹೈಸ್ಕೂಲುಗಳಲ್ಲಿ ಈ ರೀತಿಯಾದ ಮಲ್ಟಿಪರ್ಪಸ್ ಹೈಸ್ಕೂಲುಗಳಿವೆ. ಇತರ ಕಡೆಯಲ್ಲಿಯೂ ಮಾಡಲಿಕ್ಕೆ ಪೂರ್ವಸಿದ್ಧತೆಗಳು ಆಗುತ್ತಿವೆ.

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ಮುಂದೆ ಮಾಡುತ್ತಾರೆಂದರೆ ಸಂತೋಷ; ಅದಿರಲಿ. ಈ ಹೈಸ್ಕೂಲುಗಳಲ್ಲಿ ಹೆಣ್ಣುಮಕ್ಕಳ ಸಂಖ್ಯೆ ಜಾಸ್ತಿ. ಈ ಹೆಣ್ಣುಮಕ್ಕಳಿಗಾಗಿ ಹೋಮ್ ಸೈನ್ಸ್ ಮತ್ತು ಸಂಗೀತದ ಶಿಕ್ಷಣ ಇಲ್ಲದೆ ಇದೆ. ಇಲ್ಲಿರತಕ್ಕ ಎಷ್ಟೋ ಹೆಣ್ಣು ಮಕ್ಕಳಿಗೆ ಸಂಗೀತದ ಶಿಕ್ಷಣ ಬೇಡವೇ? ಹಿಂದೆ ಈ ಸ್ಕೂಲುಗಳು ಜಿಲ್ಲಾ ಬೋರ್ಡುಗಳಿಗೆ ಸೇರಿತ್ತು. ಈಗ ಅದು ಹೋಯಿತು. ಇಲ್ಲಿ ಹೆಣ್ಣುಮಕ್ಕಳ ಸಂಖ್ಯೆ ಜಾಸ್ತಿ ಇದೆ. ಹೋಂ ಸೈನ್ಸ್‌ಗೆ ಮತ್ತು ಸಂಗೀತಕ್ಕೆ ಶಿಕ್ಷಣ ಇರುವಂತೆ ಏರ್ಪಾಡು ಮಾಡಬೇಕು. ತಾವು ಈಗಾಗಲೇ ಕೆಲವು ಸ್ಕೀಮುಗಳಲ್ಲಿ Fine Arts, Music ಇಂತಹುದನ್ನು ಮಾಡುವಂತೆ

ಇದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ತಮ್ಮಲ್ಲಿ ಬಹಳ ದಿವಸಗಳಿಂದಲೂ ಇದನ್ನು ಬೇಡುತ್ತಿದ್ದೇನೆ.

ಪ್ರೈಮರಿ ಸ್ಕೂಲುಗಳ ವಿಚಾರ ತೆಗೆದುಕೊಳ್ಳೋಣ. ಈ ಸ್ಕೂಲುಗಳ ವಿಚಾರದಲ್ಲಿ ಸರ್ವೆ ಮಾಡಿದ ರಿಪೋರ್ಟಿನಲ್ಲಿ ತಾವು ಏನು ಮಾಡುತ್ತೀರಿ ಎಂದರೆ ಮುಂದಿನ ಮೂರನೇ ಪಾಂಚವಾರ್ಷಿಕ ಯೋಜನೆಯಲ್ಲಿ ದೊರೆಯತಕ್ಕ ಸ್ಕೂಲುಗಳಿಗೆ ಎಲ್ಲ ಟ್ರೇನ್ಡ್ ಟೀಚರುಗಳು ಇದ್ದಾರೆಯೇ ? ಇದಕ್ಕಾಗಿ ಸರಿಯಾದ ಮೆಷಿನರಿಯೂ ಇಲ್ಲ ಎಂದು ಹೇಳಬೇಕಾಗಿದೆ. ಪಬ್ಲಿಕ್ ಸರ್ವಿಸ್ ಕಮಿಷನ್ನಿನವರು ಅಪ್ಲಿಕೇಷನ್ನುಗಳನ್ನು ಕರೆಯುವಾಗ ಕರೆದುಬಿಡುತ್ತಾರೆ. ಆದರೆ ಹಾಗೆ ಬಂದ ಅರ್ಜಿಗಳು ಎಷ್ಟೋವರ್ಷಗಳಾದರೂ ಅವರಿಗೆ ಕೆಲಸ ದೊರೆಯುತ್ತಿಲ್ಲ. ಹಿಂದೆ ಬಡಮಕ್ಕಳು ಎಲ್. ಎಸ್. ಪಾಸು ಮಾಡಿಕೊಂಡು ಅರ್ಜಿಗಳನ್ನು ಕೆಲಸಕ್ಕಾಗಿ ಪಿ. ಎಸ್. ಸಿ. ಗೆ ಹಾಕಿಕೊಂಡಿದ್ದರು. ಇವತ್ತಿನವರೆವಿಗೂ ಅಂತಹವರಿಗೆ ಕೆಲಸ ಸಿಗದಿದ್ದರೆ ಗತಿಯೇನು ? ಈಗೇನೋ ಸ್ಟಾಂಡರ್ಡನ್ನು S. S. L. C. ಇರಬೇಕೆಂದು ಹೆಚ್ಚುಮಾಡಿದ್ದಾರೆ. ಸಂತೋಷ ಇದರಂತೆ ತಾವು ಮಾಡಿರುವ ಸ್ಕೀಮಿನಲ್ಲಿ ಇವರುಗಳಿಗೆಲ್ಲಾ ತರಬೇತಿ ಕೊಡಬೇಕಾದರೆ ನಾಲ್ಕು ಸೆಂಟರುಗಳಲ್ಲಿ ಮಾಡಬೇಕೆಂದು Training Centres ಗಳನ್ನು ತೆರೆದರೆ ಅದು ಸಾಲದು. ಇದಕ್ಕಾಗಿ ಇನ್ನೂ ಹೆಚ್ಚಿನ ಸೆಂಟರುಗಳನ್ನು ಮಾಡಬೇಕು.

ಶಾಲೆಗಳನ್ನೇನೋ ಮಾಡಬೇಕೆಂದು ಹೊರಡುವಾಗ ಅದಕ್ಕೆ ಬೇಕಾಗುವ ಕಟ್ಟಡಗಳವಿಚಾರದಲ್ಲಿ ಯೋಚನೆ ಮಾಡುತ್ತಿಲ್ಲ. ಹಂಗಾಮಿಯಾಗಿರುವ ಬಾಡಿಗೆ ಕಟ್ಟಡಗಳಲ್ಲಿವೆ. ಇನ್ನೂ ಎಂಟು-ಹತ್ತು ವರ್ಷಗಳಲ್ಲಿ ಸರಕಾರ ಪೂರ್ತಿಯಾಗಿ ಕಟ್ಟಡಗಳಿಗಾಗಿ ಹಣವನ್ನು ಒದಗಿಸಬೇಕೆಂದು ತಾವು ಯೋಚನೆ ಮಾಡಿದ್ದೇವೆಂದು ಹೇಳುತ್ತೀರಿ ಆದರೆ ಅದೆಲ್ಲಾ ಕಾಗದದ ಬದನೇಕಾಯಿಯಾಗಿದೆಯೇ ವಿನಾ ಬೇರೇನಲ್ಲ. ಮಕ್ಕಳ ಶಾಲೆಗಳಿಗಾಗಿ ಎಂದು ವ್ಯವಸ್ಥಿತವಾದ ಯೋಚನೆ ಮಾಡಿ ಕಟ್ಟಡಗಳನ್ನು ಕಟ್ಟಿದರೆ ಅನೇಕ ಕಡೆಗಳಲ್ಲಿ ಬಾಡಿಗೆ ಕಟ್ಟಡಗಳಿಗಾಗಿ ಕೊಡುವ ಹಣ ಉಳಿಯುತ್ತದೆ. ಈ ರೀತಿಯಾದ ಒಂದು ಕಟ್ಟಡಗಳ ಯೋಚನೆಯನ್ನು ತಾವು ಸರಿಯಾಗಿ ಹಾಕಿಕೊಳ್ಳಬೇಕು ಎಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಎರಡನೇದು, ಪ್ರೈಮರಿ ಶಾಲೆಗಳಲ್ಲಿ ವಿದ್ಯಾಭ್ಯಾಸದ ಮಟ್ಟ ಎಷ್ಟರಮಟ್ಟಿಗೆ ಇದೆ ಎಂದರೆ, ಅಲ್ಲಿರುವ ಅನೇಕ ಜನ ಉಪಾಧ್ಯಾಯರುಗಳು ಸ್ಥಳವಂದಿಗರಾಗಿರುವವರು. ದೇಶಾಭಿಮಾನದಿಂದ ನಿಷ್ಠೆಯಿಂದ ಕೆಲಸ ಮಾಡುವ ಉಪಾಧ್ಯಾಯರೂ ಇದ್ದಾರೆ. ಆದರೆ ಬಹುಮಂದಿ ಗ್ರಾಮಗಳಲ್ಲಿರುವ ಉಪಾಧ್ಯಾಯರು ಗ್ರಾಮದಲ್ಲಿ ಜಮೀನು ಇಟ್ಟುಕೊಂಡು, ಕಂಟ್ರಾಕ್ಟು ವ್ಯಾಪಾರ ಇತ್ಯಾದಿ ಕೆಲಸಗಳನ್ನು ಮಾಡುವವರೇ ಜಾಸ್ತಿ. ಇದು ತಮ್ಮಗಮನಕ್ಕೆ ಬರುತ್ತಿಲ್ಲ. ಇಂತಹವರನ್ನು ಅವರು ಎಷ್ಟೇಉತ್ತಮವಾಗಿರಲಿ, ಪಕ್ಕದ ತಾಲ್ಲೂಕುಗಳಿಗೆ ವರ್ಗಮಾಡು ಎಂದರೂ ಮಾಡುತ್ತಿಲ್ಲ. ಅವರುಗಳು ಅಲ್ಲೇ within a radius of five miles ಇರುತ್ತಾರೆ. ನಾನು ಬೇಕಾದರೆ ನಮ್ಮ ಕಡೆಯಲ್ಲಿರುವ ಕೆಲವರ ಹೆಸರನ್ನು ಕೊಡುತ್ತೇನೆ. ಅವರ ಮೇಲೆ ಸೂಕ್ತವಾದ ಕ್ರಮ ತೆಗೆದುಕೊಂಡರೆ ಅನುಕೂಲವಾಗುತ್ತದೆ. ಈ ಸಂದರ್ಭದಲ್ಲಿ ನಾನು ಬಹಳ ವಿನಯದಿಂದ ಹೇಳಿಕೊಳ್ಳುತ್ತಿದ್ದೇನೆ.

ಶ್ರೀ ಅಣ್ಣಾರಾವ್ ಗಣಮುಖಿ.—ಪ್ರೈವೇಟು ಸಂಸ್ಥೆಗಳಿದ್ದರೆ, 50 ವರ್ಷಗಳಿದ್ದರೆ ಅಲ್ಲೇನೂ ಕಂಪ್ಲೇಟು ಇರುವುದಿಲ್ಲ. ಇಲ್ಲೇಕೆ ಇಷ್ಟು ?

ಶ್ರೀ. ಬಿ. ಎಲ್. ನಾರಾಯಣ ಸ್ವಾಮಿ.—ಕಂಟ್ರಾಕ್ಟನ್ನು ಮಾಡಕೂಡದು ಎಂದು, ಹೇಳುತ್ತಿರುವಾಗ, ಜವಾಬ್ದಾರಿಯುತರಾಗಿರತಕ್ಕ ವಿದ್ಯಾಭಿಮಾನ ವಿರತಕ್ಕ ಮಕ್ಕಳ ಹಿತದೃಷ್ಟಿಯಿಂದ ಹೇಳುತ್ತಿದ್ದೇನೆ. ಇದನ್ನು ತಾವು ಅಲಕ್ಷ್ಯವಾಗಿ ಭಾವಿಸಬಾರದು ಎಂದು ಹೇಳಿ ಇಲ್ಲಿ ಇಷ್ಟು ಮಟ್ಟಿಗೆ ವಿಜ್ಞಾಪನೆ ಮಾಡಿಕೊಳ್ಳುತ್ತೇನೆ.

ಪ್ರೈಮರಿ ಎಜುಕೇಷನ್ನಿನ ಪ್ರಕಾರ ಸ್ಕೀಮು ಹಾಕಿರುವಂತೆ ನರ್ಸರಿ ಸ್ಕೂಲುಗಳು ಆಗ ಬೇಕಾಗುತ್ತದೆ ಎಂದು ಇದೆ. ನರ್ಸರಿ ಸ್ಕೂಲುಗಳಿಂದೇನೂ ಪ್ರಯೋಜನವಾಗುವುದಿಲ್ಲ ಎಂದು ಕಾಣುತ್ತದೆ. ಏಕೆಂದರೆ ತಾವು ಕೊಟ್ಟಿರತಕ್ಕ ಕರಿಕ್ಯುಲಂಗೆ ಅನುಸಾರವಾಗಿ ನರ್ಸರಿ ಸ್ಕೂಲುಗಳನ್ನು ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ. ಇಂತಹ ಸ್ಕೂಲುಗಳಿಗೆ ಬರಬೇಕಾಗಿದ್ದರೆ ತಾವು ಹೇಳುವಷ್ಟು ಫೀಜುಗಳನ್ನು ಕೊಟ್ಟು ಚೈತನ್ಯವಿರುವವರು ಮಾತ್ರ ಮಕ್ಕಳನ್ನು ಕಳುಹಿಸಬೇಕಾಗುತ್ತದೆ. ಅದಿಲ್ಲದೆ ಇತರರು ಮುಂದಕ್ಕೆ ಬರುವಹಾಗಿಲ್ಲ. ದುಡ್ಡಿನ ಚೈತನ್ಯವಿರತಕ್ಕವರಿಗೋಸ್ಕರ ನಡೆಸದೆ ಬಡವರಿಗೋಸ್ಕರವೂ ಸ್ವಲ್ಪ ಹೆಚ್ಚಿನ ಗಮನಕೊಟ್ಟು ಇಂತಹ ನರ್ಸರಿಸ್ಕೂಲುಗಳಲ್ಲಿ ಶೇಕಡಾ 50ರಷ್ಟು ಬಡ ಮಕ್ಕಳಿಗಾಗಿ ಎಂದು ಮಾಡಿ ಒಂದು ಕಾರ್ಯಕ್ರಮ ಹಾಕಿಕೊಳ್ಳಬೇಕು, ಮತ್ತು ಇದಕ್ಕಾಗಿ ಹೆಚ್ಚಿನ ಗ್ರಾಂಟನ್ನೂ ಕೊಡಬೇಕು.

ಇನ್ನು ನಿಮ್ಮ ವರ್ಗದಲ್ಲಿ ಕೊರಚ, ಕೊರಮ, ಬೋವಿ, ಆದಿದ್ರಾವಿಡ, ಆದಿಕರ್ನಾಟಕ ಎಂದು ಷೆಡ್ಯೂಲು ಕ್ಯಾಸ್ಟು ಪಂಗಡಗಳಿವೆ. ಕೊರಚ, ಕೊರಮ ಅತಿಕೀಳು ದರ್ಜೆಯವರು ಆದಿಕರ್ನಾಟಕ ಅತಿ ದೊಡ್ಡದಾದುದೆಂದು ಕೆಲವು ದಿನಗಳ ಹಿಂದೆ ಸಮಾಜಕಲ್ಯಾಣ ಶಾಖೆಯ ಮಂತ್ರಿಗಳು ಒಂದು ಕಡೆ ಹೇಳಿಕೆ ಕೊಡುತ್ತಾ ಯಾರು ಅಸ್ಪೃಶ್ಯರೋ ಅವರ ಮಟ್ಟಿಗೆ ಅನ್ವಯಿಸತಕ್ಕದ್ದು. ಬೇರೊಬ್ಬರನ್ನು ಕೇಂದ್ರ ಸರಕಾರಕ್ಕೆ ಶಿಫಾರಸು ಮಾಡುವುದಿಲ್ಲ ಎಂದು ಹೇಳಿದುದಕ್ಕೆ ನಿಜವಾಗಿಯೂ ನಾನು ಬಹಳ ವಿಷಾದಪಡುತ್ತೇನೆ. ಶ್ರೀಮಾನ್ ರಾಚಯ್ಯನವರು ಇಂತಹ ಒಂದು ತೀರ್ಮಾನವನ್ನು ಕೈಗೊಳ್ಳುತ್ತಾರೆಂದು ನಾನು ನಂಬಿರಲಿಲ್ಲ. ಅವರೂ ಅನೇಕ ವರ್ಷಗಳ ಕಾಲ ಹಿಂದುಳಿದ ಪಂಗಡದವರೊಡನಿದ್ದು ಕೇವಲ ಆದಿಕರ್ನಾಟಕ ಮತ್ತು ಆದಿದ್ರಾವಿಡರಿಗಾಗಿ ಎಂದು ಏನು ಮಹತ್ವ ಬಂತು. untouchability ಎನ್ನುವುದು ಇನ್ನೂ ದೇಶದಲ್ಲಿದೆ ಎನ್ನುವ ಅನುಭವದಿಂದ ಮಾಡಿದರೆ ನಮ್ಮ ಸರಕಾರದ ನೀತಿಯನ್ನು ಅಲ್ಲಗಳೆಯಬೇಕಾಗಿ ಬರುತ್ತದೆ. ಇಂತಹ ಒಂದು ಮುಖ್ಯ ತೀರ್ಮಾನ ಕೈಗೊಳ್ಳಬೇಕಾದ ಕಾರಣವೇನಿತ್ತು? ಹೀಗಾದರೆ ಸರಕಾರದ ಕಾನೂನೇನಾಯಿತು ? ದೇಶದಲ್ಲಿ ಪರಿಪೂರ್ಣವಾಗಿ ಎಲ್ಲಾ ಜಾತಿಗಳೂ ಇರುತ್ತವೆ.

ಶ್ರೀ ಎಸ್. ಸುಬ್ಬಯ್ಯ ನಾಯಕ್.—ಸಮಾಜ ಕಲ್ಯಾಣ ಮಂತ್ರಿಗಳು ಇದ್ದಾರಲ್ಲಾ !

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ಕೆಲವು ಜಾತಿಗಳನ್ನು ಷೆಡ್ಯೂಲ್ ಟ್ರೈಬಿಗೆ ಸೇರಿಸಬೇಕೆಂದು ಹೇಳಿದ್ದಾರೆಯೇ ಹೊರತು ಅವುಗಳನ್ನು ಷೆಡ್ಯೂಲ್ ಕ್ಯಾಸ್ಟಿನಲ್ಲಿ ಸೇರಿಸಿ ಅಸ್ಪೃಶ್ಯತೆ ನಿವಾರಣೆ ಮಾಡಬೇಕೆಂದು ಏನೂ ಹೇಳಲಿಲ್ಲ

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಕೆಲವರು ಷೆಡ್ಯೂಲ್ ಕ್ಯಾಸ್ಟ್‌ನಿಂದ ಷೆಡ್ಯೂಲ್ ಟ್ರೈಬ್ಸ್‌ಗೆ ಕೊಟ್ಟರೆ ಒಪ್ಪುವುದಿಲ್ಲ ಷೆಡ್ಯೂಲ್ ಕ್ಯಾಸ್ಟಿನಲ್ಲಿ ಶ್ರೀಮಾನ್ ತಿಮ್ಮಾಬೋವಿಯವರು ಇದ್ದಾರೆ. ಅವರು ಷೆಡ್ಯೂಲ್ ಟ್ರೈಬ್ಸ್‌ನಲ್ಲಿ ಸೇರಿದ್ದಾರೆಂದು ಹೇಳಿದರು ಅವರೂ ಸಹ ಒಪ್ಪುವುದಿಲ್ಲ.

ಶ್ರೀ ಬಿ. ಎಲ್. ನಾರಾಯಣಸ್ವಾಮಿ.— ದೇಶದ ಮಂತ್ರಿಗಳಲ್ಲಿ ಎಲ್ಲಾ ಜನಾಂಗಕ್ಕೂ ಒಬ್ಬ ಮಂತ್ರಿ ಇರುವುದಕ್ಕೆ ಸಾಧ್ಯವಿಲ್ಲ. ಒಂದೊಂದು ಜಾತಿಗೂ ಒಬ್ಬೊಬ್ಬ ಮಂತ್ರಿ ಇರು

ವುದಕ್ಕೂ ಸಾಧ್ಯವಿಲ್ಲ. ಪ್ರಜಾಪ್ರಭುತ್ವದಲ್ಲಿ ಇರತಕ್ಕ ಮಂತ್ರಿಗಳು ಎಲ್ಲರೂ ಎಲ್ಲ ಜನಾಂಗದವರ ಹಿತ ಚಿಂತನೆಯನ್ನು ಮಾಡಲಿ ಎಂದು ನಾನು ಆಶಯ ಪಡುತ್ತೇನೆ.

ಇನ್ನು ಕೋಲಾರದಲ್ಲಿ ಇಂಟರ್‌ಮೀಡಿಯೇಟ್ ಕಾಲೇಜನ್ನು ಅಪ್‌ಗ್ರೇಡ್ ಮಾಡಬೇಕು. ಎಂಬುದಾಗಿ ಅನೇಕ ವರ್ಷಗಳಿಂದ ನಾನು ಪ್ರಾರ್ಥನೆ ಮಾಡುತ್ತಿದ್ದೇನೆ. ಕೆಲವು ದಿವಸಗಳ ಹಿಂದೆ ಎಲ್ಲಾನಾಯಕರು ಕಾಂಗ್ರೆಸ್ ಸ್ನೇಹಿತರು ಮತ್ತು ಇತರರೆಲ್ಲರೂ ನಮ್ಮ ಊರಿಗೆ ಬಂದಿದ್ದರು. ಅಲ್ಲಿ ಬಂದು ಏನು ಹೇಳುತ್ತಾರೆಂದರೆ ಈಗ ಒಂದು ಪ್ರಿನ್ಸಿಪಲ್ ಇಟ್ಟುಕೊಂಡಿದ್ದೇವೆ. ಈಗ ಸಾಧ್ಯವಿಲ್ಲ ಮುಂದೆ ಇದಕ್ಕೆ ಏನಾದರೂ ಮಾಡೋಣ ಎಂದು ಉತ್ತರ ಬರುತ್ತದೆ. ನನ್ನ ಅರಿಕೆ ಏನೆಂದರೆ ಜಾಗ್ರತೆಯಾಗಿ ಈ ಕಾಲೇಜನ್ನು ಅಪ್‌ಗ್ರೇಡ್ ಮಾಡಬೇಕೆಂದು. ಈ ವಿಷಯದಲ್ಲಿ ಶ್ರೀಮಾನ್ ಮಲ್ಲಾರಾಧ್ಯರು ಬಹಳ ಚೆನ್ನಾಗಿ ಮಾತನಾಡಿದ್ದಾರೆ. ಚಿಕ್ಕಮಗಳೂರು ಮತ್ತು ಕೋಲಾರ ಪ್ರಶ್ನೆ ಬಹಳ ಮುಖ್ಯವಾದುದು. ಕೇವಲ ಸರ್ಕಾರದವರು 3–4 ಕಾಲೇಜುಗಳನ್ನು ತಮ್ಮ ರಕ್ಷಣೆಯಲ್ಲಿಟ್ಟು ಕೊಳ್ಳುವುದಕ್ಕೆ ಅಷ್ಟೇನೂ ತೊಂದರೆಯಾಗಲಾರದು. ಕೋಲಾರ. ಚಿಕ್ಕಮಗಳೂರು, ಮಂಡ್ಯ ಜಿಲ್ಲೆಗಳಲ್ಲಿರತಕ್ಕ ಕಾಲೇಜುಗಳನ್ನು ಬಹಳ ಜಾಗ್ರತೆಯಾಗಿ ಅಪ್‌ಗ್ರೇಡ್ ಮಾಡಬೇಕು, 1964ನೇ ಇಸವಿಯೊಳಗೆ ಎಲ್ಲಾಕಡೆಗೂ ಸೆಕೆಂಡರಿ ಸ್ಕೂಲುಗಳು ಬಂದಾಗ ಕಟ್ಟಡ ಸಿಬ್ಬಂದಿ ಇನ್ನೂ ಜಾಸ್ತಿಯಾಗಬೇಕು ಎಂದು ಹೇಳಿದ್ದೀರಿ. ಆದ್ದರಿಂದ ಏತಕ್ಕೋಸ್ಕರ ನಮಗೆ ಅನ್ಯಾಯ ಮಾಡುತ್ತಿದ್ದೀರಿ ಎಂದು ನಾನು ಕೇಳುತ್ತೇನೆ. ನಾವು ಚಿನ್ನವನ್ನು ನಿಮಗೆ ಕೊಡುತ್ತೇವೆ. ಆದ್ದರಿಂದ ಕೋಲಾರದ ಮೇಲೆ ತುಂಬಾ ಗಮನ ಕೊಡಿ. ನಾವು ನಿಮ್ಮನ್ನು ಪೂರ್ಣವಾಗಿ ನಂಬಿಕೊಂಡು ಇದ್ದೇವೆ.

ಶ್ರೀ ಅಣ್ಣಾರಾವ್ ಗಣಮುಖಿ.—ನಾವೇ ನಿಮ್ಮನ್ನು ನಂಬಿಕೊಂಡಿದ್ದೇವೆ.

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ತಮ್ಮ ಮೇಲೆ ನಮಗೆ ಸಂಪೂರ್ಣ ನಂಬಿಕೆ ಇದೆ. ಕೋಲಾರದಲ್ಲಿ ವಿಶೇಷವಾಗಿ ಮೈನ್ಸ್ ಇದೆ. ಅವನ್ನು ಅಭಿವೃದ್ಧಿಮಾಡಿದರೆ. ಬಹು ಚೆನ್ನಾಗಿ ನಡೆಯುತ್ತವೆ. ಕೆಲವು ವರ್ಷಗಳ ಹಿಂದೆ ಇವನ್ನು ಕೇಂದ್ರ ಸರ್ಕಾರದವರು ವಹಿಸಿಕೊಳ್ಳುತ್ತಾರೆಂಬ ಆ ದೇಶ ಬಂತು. ಇದು ಎಲ್ಲರಿಗೂ ಗೊತ್ತುಂಟು ಅದೇ ಸಂದರ್ಭದಲ್ಲಿ ಕೋಲಾರ ಜಿಲ್ಲೆಯಲ್ಲಿ ಗೋಲ್ಡ್ ಮೈನ್ಸ್ ಇದೆಯಲ್ಲಾ ಅದನ್ನು ಸಹ ಕೇಂದ್ರ ಸರ್ಕಾರದವರೆ ವಹಿಸಿಕೊಳ್ಳುತ್ತಾರೆಂದು ಹೇಳಿದರು. ಅದು ಏನಾಯಿತೋ ಗೊತ್ತಿಲ್ಲ. ಇಡೀ ಭಾರತ ದೇಶದಲ್ಲಿ ಹೆಚ್ಚಿಗೆ ಮೈನ್ಸ್ ಇರುವುದು ಈ ಕಡೆ ನಮ್ಮ ಕೋಲಾರ ಜಿಲ್ಲೆಯಲ್ಲಿ. ಆದ್ದರಿಂದ ನಾವು ಹೊಂದಿರತಕ್ಕ ಈ ಅವಕಾಶವನ್ನು ಕಳೆದುಕೊಳ್ಳಬಾರದು. ಅದನ್ನು ದಯವಿಟ್ಟು ತಾವೇ ತಮ್ಮ ವಶದಲ್ಲಿಯೇ ಇಟ್ಟುಕೊಂಡು ಆ ಮೈನ್ಸ್ ಅಭಿವೃದ್ಧಿಮಾಡಬೇಕೆಂದು ನಾನು ತಮ್ಮಲ್ಲಿ ಅರಿಕೆ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀಮತಿ ರತ್ನಮ್ಮ ಮಾಧವರಾವ್ (ಶಿವಮೊಗ್ಗ).—ಅಧ್ಯಕ್ಷರೇ ಈ ಸಭೆಯ ಮುಂದೆ ಇರತಕ್ಕ ಅರಣ್ಯ, ಮಾರಾಟ ತೆರಿಗೆ, ವಿದ್ಯಾಭ್ಯಾಸದ ಈ ಬೇಡಿಕೆಗಳನ್ನು ನಾನು ಅನುಮೋದಿಸುತ್ತಾ ಅವುಗಳ ಬಗ್ಗೆ ಕೆಲವು ಮಾತುಗಳನ್ನು ಹೇಳುತ್ತೇನೆ. ಈ ಬೇಡಿಕೆಗಳಿಗೆ ಏನು ಹಣವನ್ನು ಒದಗಿಸಿದ್ದೀರೋ ಅದು ಏನೇನು ಸಾಲದು ಎಂದು ನನಗನ್ನಿಸುತ್ತದೆ. ಈ ಬೇಡಿಕೆಗಳಲ್ಲಿ ಬಹು ಮುಖ್ಯವಾದುದು ಆರೋಗ್ಯ ಮತ್ತು ವಿದ್ಯಾಭ್ಯಾಸ. ಈ ಬೇಡಿಕೆಗಳಿಗೆ ಯಾವಾಗಲೂ ಹಣವನ್ನು ಹೆಚ್ಚಿಗೆ ಒದಗಿಸಬೇಕು.

ಮಾನ್ಯ ವಿದ್ಯಾ ಸಚಿವರು ನನ್ನ ಪ್ರಶ್ನೆಯೊಂದಕ್ಕೆ ಹಿಂದೆ ಉತ್ತರಿಸುವಾಗ, ಹಣವಿಲ್ಲ. ಹಣಕ್ಕಾಗಿ ಕಾದಿದ್ದೇವೆ. ವಿಶೇಷವಾಗಿ ಹಣವನ್ನು ಒದಗಿಸಿದರೆ ಏನು ಬೇಕಾದರೂ ಮಾಡಬಹುದು ಎಂದು ಹೇಳಿದರು. ಅಂದಮೇಲೆ ಹಣ ಕೊಟ್ಟರೆ ಇಷ್ಟು ಆಸಕ್ತಿವಹಿಸಿ ಕೆಲಸ ಮಾಡುತ್ತೇನೆಂದು ಹೇಳತಕ್ಕ ವಿದ್ಯಾ ಸಚಿವರು ನಮ್ಮಲ್ಲಿರುವಾಗ ಸರ್ಕಾರದವರು ಏತಕ್ಕೆ ಹೆಚ್ಚಿಗೆ ಹಣ ಕೊಡುವುದಿಲ್ಲವೊ ನನಗೆ ಅರ್ಥವಾಗಲಿಲ್ಲ. ಆದ್ದರಿಂದ ಅವರಿಗೆ ಹೆಚ್ಚಿಗೆ ಹಣವನ್ನೊದಗಿಸಬೇಕು.

(ಶ್ರೀಮತಿ ರತ್ನಮ್ಮ ಮಾಧವರಾವ್)

ಇನ್ನು ಪ್ರಾಥಮಿಕ ಶಿಕ್ಷಣವನ್ನು ಇವತ್ತಿನ ದಿವಸ ಯಶಸ್ವಿಗೊಳಿಸಬೇಕು. ಉಪಾಧ್ಯಾಯರಿಗೆ ಕಾಲೇಜು ಲೆಕ್ಚರರಿಗೆ ಮನೆಗಳನ್ನು ಮೊದಲು ಒದಗಿಸಬೇಕು. ಅದರಲ್ಲೂ ನಮ್ಮೂರಿನಲ್ಲಿ ಊರಿಗೆ ನಾಲ್ಕು-ಐದು ಮೈಲಿಗಳ ದೂರದಲ್ಲಿ ಒಂದು ಕಾಲೇಜು ಇರುವುದರಿಂದ ಲೆಕ್ಚರರಿಗೆ ಅಲ್ಲಿ ಮನೆಯಿಲ್ಲದೆ ಇರುವ ಕಾರಣ ಅವರು ಶುಕ್ರವಾರ ಊರು ಬಿಟ್ಟು ಹೋದರೆ ಬರುವುದು ಸೋಮವಾರವೇ. ಆದ್ದರಿಂದ ಈ ವಿಷಯದಲ್ಲಿ ಸರ್ಕಾರದವರು ಮೊದಲನೆಯದಾಗಿ ಗಮನ ಕೊಡಬೇಕು.

ಇನ್ನು ಈಗಿನ ಶಿಕ್ಷಣ ಪದ್ಧತಿಯಲ್ಲಿ ಸ್ವಲ್ಪ ಬದಲಾವಣೆಯಾಗಬೇಕು. ಇದ್ದಕ್ಕಿದ್ದಹಾಗೆ ಅರ್ಧ ವರ್ಷ ಆಗಲಿಕ್ಕಿಲ್ಲ ಪ್ರೈಮರಿ ಶಾಲೆಗಳಲ್ಲಿ ಪುಸ್ತಕಗಳು ಬದಲಾವಣೆಯಾಗುತ್ತವೆ. ಆ ರೀತಿ ಆಗಬಾರದು. ಇದರಿಂದ ಮಕ್ಕಳಿಗೆ ಬಹಳ ತೊಂದರೆಯಾಗುತ್ತದೆ. ಗ್ರಾಮಾಂತರ ಪ್ರದೇಶಗಳಲ್ಲಿ ಶಾಲೆಗಳ ಕಟ್ಟಡಗಳನ್ನು ಕಟ್ಟಿಸುವುದನ್ನು ಮೊದಲು ಮಾಡಬೇಕು. ಹಣ ಸಾಕಾದಷ್ಟಿದೆ, ಇನ್ನು ಬೇಕಾದಷ್ಟು ಈ ಬಾರಿಗೆ ಮಾನ್ಯ ಅರ್ಥ ಸಚಿವರು ಉದಾರವಾಗಿ ಕೊಡುತ್ತಾರೆ. ತಾವು ಉತ್ತರ ಕೊಡುವಾಗ ಯಾವ್ಯಾವ ಪ್ರದೇಶಗಳಲ್ಲಿರತಕ್ಕ ಶಾಲೆಗಳಿಗೆ ಕಟ್ಟಡವನ್ನು ಕಟ್ಟಿಸುವುದಕ್ಕೆ ಎಷ್ಟು ಹಣವನ್ನು ಒದಗಿಸಿ ಅವಕಾಶಮಾಡಿಕೊಟ್ಟಿದ್ದೀರೀ ಎಂಬುದನ್ನು ನನಗೆ ವಿವರವಾಗಿ ತಿಳಿಸಬೇಕು. ಕಾಲೇಜುಗಳಲ್ಲಿ ಪ್ರತಿವರ್ಷವೂ ಪರೀಕ್ಷೆಯಾಗುವ ಹೊತ್ತಿಗೆ ಸಾಕಷ್ಟು ಪೋರ್ಷನ್ಸ್ ಮುಗಿದಿರುವುದಿಲ್ಲ. ಅದಕ್ಕೆ ಕಾರಣವೇನೆಂಬುದನ್ನು ಹೇಳಬೇಕು. ಎಲ್ಲಾ ಪರೀಕ್ಷೆಗಳು ಸಕಾಲದಲ್ಲಿ ನಡೆಯುವಂತಾಗಬೇಕು. ಚಿಕ್ಕ ಮಕ್ಕಳಿಗಂತೂ ತೀರ ಬಿಸಿಲುಕಾಲದಲ್ಲಿ ಪರೀಕ್ಷೆ ನಡೆಯುತ್ತದೆ. ಇವನ್ನು ಇನ್ನೂ ಮುಂಚೆಯೇ ಮಾಡಬೇಕು. ಆ ರೀತಿ ಮಾಡುವುದು ಒಳ್ಳೆಯದು.

ಇನ್ನು ಉಪಾಧ್ಯಾಯರ ಬಗ್ಗೆ ನಾನು ಕೆಲವು ಮಾತುಗಳನ್ನು ಹೇಳಬೇಕಾಗಿದೆ. ಈಗ ಎಸ್. ಎಸ್. ಎಲ್. ಸಿ. ಮಾಡಿಕೊಂಡು ರಜಾದಿನಗಳಲ್ಲಿಯೂ ಓದಿ ಮುಂದೆ ಪದವೀಧರರಾಗಿರುವ ಉಪಾಧ್ಯಾಯರುಗಳು ಮಿಡಲ್ ಸ್ಕೂಲುಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಇವರುಗಳಿಗೆ ಪದವೀದರರ ಸಂಬಳ, ಕೆಲಸ ಸಿಗುವಂತಾಗಬೇಕು ಇದನ್ನು ನಾವು ಇಲ್ಲಿಗೆ ಬಂದಾಗಿನಿಂದಲೂ ನಾಲ್ಕು ವರ್ಷಗಳಿಂದಲು ಕೇಳುತ್ತಿದ್ದೇವೆ. ಈಗ ನಾಲ್ಕು ತಿಂಗಳಲ್ಲಿ ಮೈಸೂರಿನಲ್ಲಿರುವ ಹೈಸ್ಕೂಲುಗಳಿಗೆ ಕೆಲವರನ್ನು ಟೆಂಪೊರರಿಯಾಗಿ ನೇಮಕ ಮಾಡಲಾಗಿತ್ತು. ಅವರು ಮಾರ್ಚಿ ತಿಂಗಳಲ್ಲೇನೇ ಮತ್ತೆ ವಾಪಸ್ಸಾದರು. ಈ ಪದವೀಧರ ಉಪಾಧ್ಯಾಯರುಗಳನ್ನು ಪಬ್ಲಿಕ್ ಸರ್ವಿಸ್ ಕಮಿಷನ್ನಿನವರು ಇಂಟರ್‌ವ್ಯೂ ಕೂಡ ಮಾಡಿರುತ್ತಾರೆ. ಪಿ. ಎಸ್. ಸಿ. ಯವರ ಇವರನ್ನು ಹೈಸ್ಕೂಲುಗಳಲ್ಲಿ ನೇಮಕ ಮಾಡಲು ಅವಕಾಶ ಮಾಡಿ ಕೊಡಬೇಕು, ವಿದ್ಯಾಇಲಾಖೆಯ ಡೈರೆಕ್ಟರ್ ಅವರೂ ಸಹ ಇವರ ಬಗ್ಗೆ ಬಹಳ ಸಹಾನುಭೂತಿಯನ್ನು ತೋರಿಸಬೇಕೆಂದು ತಿಳಿಸಿದ್ದಾರೆ. ಆದರೆ ಪಾಬ್ಲಿಕ್ ಸರ್ವಿಸ್ ಕಮಿಷನ್ನಿನವರು ಇದುವರೆಗೆ ಯಾವ ಫಲತಾಂಶವನ್ನು ಹೊರಗೆಡಹಲಿಲ್ಲ. ಇದನ್ನು ಮಾಡಲು ಸರ್ಕಾರದವರು ಒತ್ತಾಯಮಾಡಿ ಈ ಉಪಾಧ್ಯಾಯರುಗಳಿಗೆ ಜೀವದಾನ ಮಾಡಿದರೆ ಆ ಮೂಲಕ ಅವರೂ ಸಹ ತೃಪ್ತಿಯಿಂದ ಕೆಲಸ ಮಾಡುವುದಾದರೆ ನಮ್ಮ ರಾಜ್ಯದ ಮಕ್ಕಳು ಇನ್ನೂ ಹೆಚ್ಚು ವಿದ್ಯಾವಂತರಾಗಲು ಸಹಕಾರಿಯಾಗುತ್ತದೆ.

ಇನ್ನು ಲೋಕಲ್ ಕ್ಯಾಂಡಿಡೇಟ್ಸ್ ಬಗ್ಗೆ ಸರ್ಕಾರದವರು ಒಂದು ನಿರ್ದಿಷ್ಟ ತೀರ್ಮಾನಕ್ಕೆ ಜಾಗ್ರತೆ ಬರಬೇಕು. ಅವರ ಸ್ಥಿತಿ ಶೋಚನೀಯವಾಗಿದೆ. ರಜಾ ಬಂದೊಡನೆ ಅವರಿಗೆ ಅವರಿಗೆ ಸಂಬಳವಿಲ್ಲ ಮತ್ತೆ ಕೆಲಸ ಸಿಕ್ಕುವ ಭರವಸೆ ಇಲ್ಲ. ಅದರಲ್ಲೂ ಹೆಣ್ಣು ಮಕ್ಕಳು ಎಷ್ಟೋಜನ ಪದವೀಧರರಾಗಿದ್ದಾರೆ. ಅವರಿಗೂ ಇದರಿಂದ ಬಹಳ ತೊಂದರೆಯಾಗುತ್ತೆ ಅದನ್ನು ಯೋಚನೆ ಮಾಡಬೇಕು.

ಇನ್ನು ಸ್ಪೋರ್ಟ್ಸ್ ಗ್ರಾಂಟು ವಿಷಯ. ಈ ಬಗ್ಗೆ ನಾನು ಹೋದ ವರ್ಷವೂ ಮಾತನಾಡಿದ್ದೆ. ಈ ವರ್ಷವೂ ಮಾತನಾಡುವ ಪರಿಸ್ಥಿತಿ ಬಂದಿದೆ. ನಿಜವಾಗಿ ಸರ್ಕಾರದವರು ಕ್ರೀಡೆಗಳಿಗೆ ಉತ್ತೇಜನ ಕೊಡಬೇಕೆಂದಿದ್ದಾರೆ ಈ ಗ್ರಾಂಟುಗಳನ್ನು ಸಲೀಸಾಗಿ ಆಟಗಾರರ ಸಂಸ್ಥೆಗಳಿಗೆ ಕಾಲಕ್ಕೆ ಸರಿಯಾಗಿ ಸಿಗುವಂತೆ ಮಾಡಬೇಕು. ಇಲ್ಲದಿದ್ದರೆ ಗ್ರಾಂಟು ಕೊಡುವುದನ್ನೆ ನಿಲ್ಲಿಸಿಬಿಡಿ. ಇದನ್ನು ನಾನು ನನ್ನ ಸ್ವಂತ ಅನುಭವದಿಂದ ಹೇಳುತ್ತಿದ್ದೇನೆ. ಒಂದು ಉದಾಹರಣೆಯನ್ನು ಕೊಡುತ್ತೇನೆ. ಬೆಂಗಳೂರು ಟೇಬಲ್ ಟೆನ್ನಿಸ್ ಅಸೋಸಿಯೇಷನ್ನಿನವರು ಸೆಪ್ಟೆಂಬರ್ ತಿಂಗಳಲ್ಲಿ ಗ್ರಾಂಟ್ಸಿಗೆ ಅರ್ಜಿ ಹಾಕಿದರು ಫೆಬ್ರವರಿ ಕೊನೇ ವಾರದಲ್ಲಿ ಉತ್ತರ ಬಂತು, ಏನೆಂದು ಅಂದರೆ ಹೋದವರ್ಷ ಮತ್ತು ಅದರ ಹಿಂದಿನ ವರ್ಷದ ಲೆಖ್ಖ ಕೊಡಬೇಕೆಂದು. ಆ ರೀತಿ ಕೊಟ್ಟದ್ದೂ ಆಯಿತು. ಆ ಫೈಲುಗಳ ಹಿಂದೆ ನಾವೂ ಕೂಡ ಓಡಾಡಿ ಫೈನಾನ್ಸ್ ಇಲಾಖೆ, ವಿದ್ಯಾ ಇಲಾಖೆಯಲ್ಲಾ ಸುತ್ತಿ ವಿದ್ಯಾಮಂತ್ರಿ, ವಿದ್ಯಾ ಡೈರೆಕ್ಟರೆಲ್ಲಗೂ ಸಾಕಷ್ಟು ತೊಂದರೆಕೊಟ್ಟು 31ನೇ ತಾರೀಖು ಮಾರ್ಚಿನೊಳಗೆ ಗ್ರಾಂಟನ್ನು ದೊರಕಿಸಿಕೊಳ್ಳುವ ಹೊತ್ತಿಗೆ ಕುರಿ ಕೋಣ ಬಿದ್ದು ಹೋಯಿತು ಅಂತಾರೆಲ್ಲ ಆ ರೀತಿ ಆಯಿತು. ದೊಡ್ಡ ಅಧಿಕಾರಿಗಳೇನು ತೊಂದರೆ ಮಾಡುವುದಿಲ್ಲ. ಎಲ್ಲಾ ಮಧ್ಯೆ ಸ್ವಾಮಿ ಬರೋದು. ಈ ಗ್ರಾಂಟಿನ ಗಲಾಟೆಯಲ್ಲಿ ನಾವುಗಳು ಏನೇನೋ ಮಾತು ಕೇಳಬೇಕಾಯಿತು, ಸ್ವಾಮಿ. ಹೀಗೆಯೇ ಒಬ್ಬ ಅಧಿಕಾರಿ "ಏನಿರಿ, ಇದೆಂಥಾ ಆಟ, ಟೇಬಲ್ ಟೆನ್ನಿಸ್ ಕುಸ್ತಿ ಆಡಿರಿ" ಅಂದರು ಇದರಲ್ಲಿ ಮಹಿಳೆಯರೂ ಇದ್ದಾರೆ. ನಾವೆಲ್ಲಾ ಕುಸ್ತಿ ಮಾಡಲಿಕ್ಕೆ ಹೊರಟರೆ ನೀವೆಲ್ಲಾ ಉಳಿದೀರ? ಎಂದು ನಾನು ಕೇಳಿದೆ. ಇನ್ನೊಬ್ಬರೂ "ಗುಂಪು ಕಟ್ಟಿ ದುಡ್ಡು ಹೊಡೆಯಲಿಕ್ಕೆ" ಅಂದರು ದುಡ್ಡು ಹೊಡೆಯುವುದಾದರೆ ನೀವು ಈ ಅಸೋಸಿಯೇಷನ್ನಿಗೆ ಕೊಡುವುದು, ಕೇವಲ 750 ರೂಪಾಯಿಗಳು. ಈ 750 ರೂಪಾಯಿಗಳನ್ನು ಏನು ಹೊಡೆಯುವುದು. ಹೊಡೆದರೆ ಲಕ್ಷಾಂತರ ಹೊಡೆಯಬೇಕು. ಅದಕ್ಕೆ ವಿಧಾನ ಬೇರೆ ಇದೆಯೆಂದು ಹೇಳಿದ್ದಾಯಿತು.

ಇನ್ನು 31 ನೇ ತಾರೀಖು ನಾನು ವಿಧಾನ ಸಭೆ ಬಿಟ್ಟು ಕೆಳಗೆಹೋಗುತ್ತಿರುವಾಗ ಮಾನ್ಯ ಸೋದರಿಯರು ಮೂರು ನಾಲ್ಕು ಜನ ಸಪ್ಪೆ ಮುಖಗಳಿಂದ ಸುಸ್ತಾಗಿ ಬಳಲಿ ಬೆಂಡಾಗಿ ನಿಂತಿದ್ದರು. ಅವರೆಲ್ಲರೂ ನನ್ನ ಪರಿಚಿತರಾದ್ದರಿಂದ ಏನ್ರೀ, ನಿಮ್ಮ ಅವಸ್ಥೆ ಎಂದು ಕೇಳಿದೆ. ಗ್ರಾಂಟ್ಸ್ ಬೆಳಗಿನಿಂದ ಇಲ್ಲಿಯೇ ಕಾದಿದ್ದೇವೆ ಎಂದರು. ಅದನ್ನು ನೋಡಿ ನನಗೆ ತುಂಬಾ ವಿಷಾದವಾಯಿತು. ನಮ್ಮ ಈ ಸರ್ಕಾರ ಇದ್ದು ಮಹಿಳೆಯರಿಗೆ ಇಷ್ಟು ತೊಂದರೆಯೇ ಅನ್ನಿಸಿತು. ಇಷ್ಟೊಂದೂ ನಾನು ಹೇಳುತ್ತಿರುವ ಉದ್ದೇಶವಿಷ್ಟೇ: ಮಂತ್ರಿಗಳಿಂದ ಈ ಬಗ್ಗೆ ಏನಾದರೂ ಅನುಕೂಲ ಮಾಡುವುದಕ್ಕೆ ಪ್ರಯತ್ನಿಸು ಪಡುತ್ತೇನೆಂದು ಹೇಳಿದೆ. ಇನ್ನು ಮುಂದಾದರೂ ಈ ರೀತಿಯಾದ ತೊಂದರೆ ತಪ್ಪಬೇಕು. ಅಧಿಕಾರಿಗಳು ಮತ್ತು ಮಂತ್ರಿಗಳು ಈ ಗ್ರಾಂಟ್ ಕೊಡುವ ವಿಷಯದಲ್ಲಿ ಹೆಚ್ಚಿನ ಗಮನವನ್ನು ಕೊಡಬೇಕು.

ಒಬ್ಬರು ಹೇಳಿದರು.—"ಏನ್ರಿ ಟೇಬಲ್ ಟೆನಿಸ್ ಅಂತೆ! ಕುಸ್ತಿ ಮಾಡಿರಿ" ಎಂದು. ನಾನು ಕುಸ್ತಿಗೆ ಹೋದರೆ ನೀವು ಉಳಿಯುತ್ತೀರ ಎಂದೆ. ನೀವು ಗುಂಪು ಕಟ್ಟಿಕೊಂಡು ಬಂದು ದುಡ್ಡು ಮಾಡುತ್ತೀರ ಎಂದರು. ಉರ್ದುವಿನಲ್ಲಿ ಒಂದು ಗಾದೆ ಇದೆ. ಅದರಂತೆ ಹೊಡೆದರೆ ಸರ್ಕಾರಿ ಖಜಾನೆಯನ್ನೇ ಹೊಡೆಯುತ್ತೇವೆ, ಅದಕ್ಕೆ ಬೇರೆ ವಿಧವಿದೆ, ಇವರು ಕೊಡುವ 750 ರೂಪಾಯಿ ಗುಂಪು ಕಟ್ಟಿಕೊಂಡು ಹೊಡೆಯಬೇಕಾಗಿಲ್ಲ ಎಂದು ಹೇಳಿದೆ. ಇನ್ನು ಮುಂದಾದರೂ ಕೂಡ ಈ ತರಹ ತೊಂದರೆಯಾಗದ ಹಾಗೆ ನೋಡಿಕೊಳ್ಳಿ. ಈ 5 ಸಾವಿರ ರೂಪಾಯಿ ಗ್ರಾಂಟ್ ಏನು ಕೊಟ್ಟಿದ್ದೀರೋ, ಅದನ್ನು ಸ್ಯಾಂಕ್ಷನ್ ಮಾಡುವ ಅಧಿಕಾರವನ್ನು ಡಿ. ಪಿ. ಐ. ಯವರಿಗೆ ಕೊಡಿ, ನಿಮಗೆ ನಮ್ಮಿಂದ ತಲೆನೋವು ತಪ್ಪುತ್ತದೆ. ನಾವು ಬಂದು ನಿಮ್ಮನ್ನು ಕಾಡುವುದಿಲ್ಲ.

ಈ Sports Council ಅರ್ಧ ಕಾನ್‌ಸ್ಟಿಟ್ಯೂಟ್ ಆಗಿದೆ. ಅದನ್ನು ಜಾಗ್ರತೆ ಪೂರ್ತಿಮಾಡಿ. ಜಾಗ್ರತೆಯಾದರೆ ಒಳ್ಳೆಯದು. ಈ ತೊಂದರೆಗಳೆಲ್ಲಾ ಪರಿಹಾರವಾಗುತ್ತದೆ.

ಶ್ರೀ ಅಣ್ಣಾರಾವ್ ಗಣಮುಖಿ.—ಪೂರ್ಣವಾಗಿ ಕಾನ್‌ಸ್ಟಿಟ್ಯೂಟ್ ಆಗಿದೆ ಮತ್ತು ಅದು ಕೆಲಸ ಮಾಡುತ್ತಾ ಇದೆ. ಅದಕ್ಕೆ ಇನ್ನಿಬ್ಬರು ಮೆಂಬರನ್ನು ಹಾಕುವುದು ಇದೆ; ಅಷ್ಟೆ ಅದರ ಕೆಲಸ ನಡೆಯುತ್ತಾ ಇದೆ.

ಶ್ರೀಮತಿ ರತ್ನಮ್ಮ ಮಾಧವರಾವ್.—Sports Councilಗೆ ಮೆಂಬರುಗಳನ್ನು ನೇಮಿಸು ವಾಗಲಾದರೂ ಸ್ವಲ್ಪ ಸ್ಪೋರ್ಟ್ಸ್‌ನಲ್ಲಿ ವಿಶ್ವಾಸವಿರುವಂಥವರನ್ನು ನೋಡಿ ಹಾಕಿ.

ಹೋದ ವರ್ಷ ಸ್ಪೋರ್ಟ್ಸ್‌ಗೆ ಅಂತ ಸೆಂಟ್ರಲ್ ಗವರ್ನ್‌ಮೆಂಟ್ 4 ಕೋಟಿ ರೂಪಾಯಿ ಇಟ್ಟಿದ್ದರಲ್ಲಾ ಅದರಲ್ಲಿ ನೀವು ಇದುವರೆಗೆ ತೆಗೆದುಕೊಂಡಿರುವುದು ಎಷ್ಟು? ತೆಗೆದುಕೊಂಡಿದ್ದರೆ ಅದರಿಂದ ಏನೇನು ಮಾಡಿದಿರಿ ಎನ್ನುವುದನ್ನು ತಿಳಿಸಬೇಕು. ಜಾಗ್ರತೆ ಒಬ್ಬ ಅಸಿಸ್ಟೆಂಟ್ ಸೆಕ್ರೆಟರಿಯನ್ನು ಈ ಸಬ್ಜೆಕ್ಟನ್ನು ನೋಡಿಕೊಳ್ಳುವುದಕ್ಕೆ ಮಾಡಿ. ನೀವು ಏನು ಸ್ಕೀಮ್ ಮಾಡಿದ್ದೀರೋ ಅದನ್ನು ಕಳುಹಿಸಿ! ದಾವಾಶ ಪ್ರಕಾರ ನಮಗೂ ಸಿಕ್ಕಲಿ. ಇದು ಸಣ್ಣ ರಾಜ್ಯವಲ್ಲ.

ಶ್ರೀ ಅಣ್ಣಾರಾವ್ ಗಣಮುಖಿ.—ಎಲ್ಲಾ ಖರ್ಚಾಗಿದೆ. ಯಾವುದೂ ಲ್ಯಾಪ್ಸ್ ಆಗಿಲ್ಲ.

ಶ್ರೀಮತಿ ರತ್ನಮ್ಮ ಮಾಧವರಾವ್.—ಈ ಶಾಲೆಗಳನ್ನು ಸ್ಯಾಂಕ್ಷನ್ ಮಾಡುವುದನ್ನು ಸಾವಿರವೋ ಎಷ್ಟೋ ತಾವು ಸ್ಯಾಂಕ್ಷನ್ ಮಾಡಿ ಆ ಶಾಲೆಗಳನ್ನು ಎಲ್ಲೆಲ್ಲಿಗೆ ಕೊಡಬೇಕೆನ್ನುವುದನ್ನು ಡಿ. ಪಿ. ಐ. ಯವರಿಗೆ ಬಿಟ್ಟರೆ ಒಳ್ಳೆಯದು. ಏಕೆಂದರೆ ಅವರು ಹೇಗೂ ಎಲ್ಲಾ ಕಡೆ ಟೂರು ಹೋಗುತಿರುತ್ತಾರೆ. ಅವರು ಎಲ್ಲೆಲ್ಲಿ ಅವಶ್ಯಕವಿದೆ ನೋಡಿ ಕೊಡುತ್ತಾರೆ. ನೀವು ಈ ಅಧಿಕಾರವನ್ನು ಅವರಿಗೇ ಕೊಟ್ಟರೆ, ನಾವು ಅವರನ್ನೇ ಕೇಳುತ್ತೇವೆ. ನಿಮ್ಮನ್ನು ಕೇಳುವುದೇ ಇಲ್ಲ. ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ಹೆಸರು ದೊಡ್ಡದು. ಹುದ್ದೆ ದೊಡ್ಡದು. ಅವರಿಗೂ ಸ್ವಲ್ಪ ಪವರ್ ಕೊಡಿ. ಕೊಟ್ಟರೆ ಒಳ್ಳೆಯದು.

ಶ್ರೀ ಅಣ್ಣಾರಾವ್ ಗಣಮುಖಿ.—ಶಾಲೆಗಳನ್ನು ನಾವು ಸ್ಯಾಂಕ್ಷನ್ ಮಾಡುವುದಿಲ್ಲ. ಅವರೇ ಮಾಡುತ್ತಾರೆ.

ಶ್ರೀಮತಿ ರತ್ನಮ್ಮ ಮಾಧವರಾವ್.—ಸಿಟಿಗಳಲ್ಲಿ ಕಟ್ಟಡಗಳ ಅಭಾವ ಜಾಸ್ತಿ. ಅದ್ದರಿಂದ ಪ್ರತಿಮೊಹಲ್ಲಾದಲ್ಲಿ ಸ್ಟೇಟ್ ತೆಗೆದುಕೊಂಡು ಕಾರ್ಪೋರೇಶನ್ನಿನವರು ತಾವು ಒಂದಾಗಿ ಶಾಲೆಗಳನ್ನು ಕೊಡಬೇಕು. ಸರ್ಕಾರಿ ಶಾಲೆಗಳಲ್ಲಿ ಮಿಡ್ಲ್ ಪ್ರೈಮರಿಗಳಲ್ಲಿ 60–80 ಮಕ್ಕಳಿರುತ್ತಾರೆ. ಸ್ಥಳದ ಅಭಾವದಿಂದ ಬೆಳಿಗ್ಗೆ ಒಂದು ಕ್ಲಾಸು. ಮಧ್ಯಾಹ್ನ ಒಂದು ಕ್ಲಾಸು ಮಾಡುತ್ತಿದ್ದಾರೆ. ಮಕ್ಕಳ ವಿದ್ಯಾಭಿವೃದ್ಧಿಗೆ ಬಹಳ ತೊಂದರೆಯಾಗಿದೆ. ಈ ಕಾರ್ಯಕ್ರಮ ಜಾಗ್ರತೆಯಾಗಿ ಮಾಡಬೇಕು.

ಈ ವರ್ಷ ಸ್ಕೂಲುಗಳನ್ನು ಕೊಡುವಾಗ ಮಲೆನಾಡಿಗೆ ಪ್ರಾತಿನಿಧ್ಯ ಕೊಡಿ. ಹೋದ ವರ್ಷ ಎಲ್ಲೆಲ್ಲಿ ಕೊಟ್ಟಿದ್ದೀರಿ ಎನ್ನುವುದನ್ನು ಸ್ವಲ್ಪ ಹೇಳಿ.

ಮಾನ್ಯ ಮುಖ್ಯಮಂತ್ರಿಗಳು ಮಹಿಳೆಯರಿಗಾಗಿಯೇ ಪಾಲಿಟೆಕ್ನಿಕ್ ಶಾಲೆಯೊಂದನ್ನು ತೆರೆಯುತ್ತೇವೆಂದು ಹೇಳಿರುವುದು ಸಂತೋಷವಾದ ಸಮಾಚಾರ. ಇದನ್ನು ನಮ್ಮ ಊರಿನಲ್ಲಿಯೇ ತೆಗೆಯಬೇಕೆಂದು ಕೇಳಿಕೊಳ್ಳುತ್ತೇನೆ. ಅಲ್ಲಿ ಗಂಡು ಮಕ್ಕಳಿಗೆ ಇದ್ದ ಕೆಲವು ಕೋರ್ಸುಗಳಲ್ಲಿ ಒಂದು ಭಾಗ ಸಾಗರಕ್ಕೆ ಹೋಯಿತು. ಉಳಿದ ಭಾಗ ಇಷ್ಟರಲ್ಲಿಯೇ ಭದ್ರಾವತಿಗೆ ಹೋಗಿ ಭದ್ರವಾಗಲಿದೆ. ನಮ್ಮ ಊರಿನವರಿಗೆ ಇದರಿಂದ ಎಷ್ಟು ಬೇಜಾರಾಗಿದೆ ಎನ್ನುವುದನ್ನು ತಾವು ತಿಳಿದುಕೊಳ್ಳಬೇಕು.

ಚಿಕ್ಕಮಗಳೂರಿನ ಮಹಿಳಾ ಪ್ರತಿನಿಧಿಗಳು ಒಂದು ಫಸ್ಟ್ ಗ್ರೇಡ್ ಕಾಲೇಜ್ ಚಿಕ್ಕಮಗಳೂರಿಗೆ ಕೊಡಬೇಕೆಂದು ಮನವಿ ಮಾಡಿದ್ದಾರೆ. ಅಲ್ಲಿಗೆ ಅದನ್ನು ಕೊಡಬೇಕಾದ್ದು ನ್ಯಾಯ. ಮಲೆನಾಡಿಗಿಂದು 12 ಹೈಸ್ಕೂಲು ಇರುವ ಅಲ್ಲಿಗೆ ಅದರಲ್ಲಿಯೂ ಹೆಣ್ಣುಮಕ್ಕಳು ಬಂದು ಕೇಳಿರುವಾಗ ಫಸ್ಟ್‌ಗ್ರೇಡ್ ಗವರ್ನ್‌ಮೆಂಟ್ ಕಾಲೇಜ್ ಕೊಡಲೇಬೇಕು. ಅದು

ನಿಮ್ಮ ಕರ್ತವ್ಯ. ಹೆಣ್ಣುಮಕ್ಕಳ ಬಗ್ಗೆ ಇಷ್ಟೊಂದು ಆಸಕ್ತಿ ವಹಿಸುತ್ತಿದ್ದ ಸರ್ಕಾರ ಇದ್ದಕ್ಕಿದ್ದ ಹಾಗೆಯೇ ವರ್ಷದ ಕೊನೆಯಲ್ಲಿ ಹೈಸ್ಕೂಲಿನಲ್ಲಿ ಹೆಣ್ಣುಮಕ್ಕಳಿಗೆ ಮೊದಲಿನಿಂದಲೂ ಇದ್ದ ಅರ್ಧ ಫೀಜನ್ನು ನಿಲ್ಲಿಸಿ ಪೂರ್ತಿಕೊಡಬೇಕೆಂದರೆ ಬಡವರಾದ ತಂದೆ ತಾಯಿಗಳು ಹೇಗೆ ಕೊಡುತ್ತಾರೆ. ಅವರ ಗತಿ ಏನು ? ನಾನು ಈ ಬಗ್ಗೆ ವಿದ್ಯಾ ಇಲಾಖೆಗೆ ಬರೆದಾಗ ವರ್ಷಕ್ಕೆ 1,200 ರೂಪಾಯಿ ಮೇಲಿನ ವರಮಾನವಿರುವವರು ಕೊಡಬೇಕಾಗುತ್ತದೆಂದು ಉತ್ತರ ಬಂದಿತು. ಏನೇ ಆಗಲಿ. ಹೆಣ್ಣುಮಕ್ಕಳ ವಿದ್ಯಾಭಿವೃದ್ಧಿ ದೃಷ್ಟಿಯಿಂದ ಈ ಆರ್ಡರನ್ನು ವಾಪಸು ತೆಗೆದುಕೊಂಡು, ಮೊದಲಿದ್ದಂತೆಯೇ ಅರ್ಧ ಫೀ ಹೆಣ್ಣುಮಕ್ಕಳಿಗೆ ಮಾಡಲೇಬೇಕೆಂದು ಒತ್ತಾಯದ ಮನವಿ ಮಾಡುತ್ತೇನೆ.

ಇದನ್ನೆಲ್ಲಾ ನೋಡಿದಾಗ ಈ ಸಲದ ಜನ ಗಣತಿಯಲ್ಲಿ ಮಹಿಳೆಯರ ಸರಾಸರಿ ಸಂಖ್ಯೆ ಕಡಿಮೆಯಾಯಿತೇನೋ ಎಂದು ಗಾಬರಿಯಾಗಿ ಹೋಗಿದೆ.

ನಮ್ಮ ಸಹೋದರಿ ಶ್ರೀಮತಿ ನಾಗರತ್ನಮ್ಮನವರು ನಾಲ್ಕು ವರ್ಷಗಳಿಂದಲೂ ಮಾಗಡಿ ರೋಡಿಗೆ ಒಂದು ಹೈಸ್ಕೂಲು ಕೇಳುತ್ತಾ ಇದ್ದಾರೆ. ಹೈಸ್ಕೂಲು ಕೊಡುವುದು ನಮ್ಮ ಪಾಲಿಸಿಯಲ್ಲಿ ಇಲ್ಲ ಎಂದು ಹೇಳುತ್ತಿದ್ದೀರಿ. ಹೋದವರ್ಷ ಅವರು ಕೇಳಿದಾಗ ಈ ಪಾಲಿಸಿ ಇರಲಿಲ್ಲ. ಅದು ಕೂಲಿಗಾರರು ಇರುವ ಪ್ರದೇಶ. ಅವರಿಗೆ ದುಡ್ಡು ಕೊಡುವ ಶಕ್ತಿಯಿಲ್ಲ. ನೀವು ಮನಸ್ಸುಮಾಡಿದರೆ ಕಷ್ಟವಾಗುವುದಿಲ್ಲ. ಆದ ರಿಂದ ನೀವು ಹೈಸ್ಕೂಲನ್ನು ಅಲ್ಲಿಗೆ ಕೊಡಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ. ಇಷ್ಟು ಹೇಳಿ ನಮ್ಮ ಮುಂದಿರುವ ಎಲ್ಲಾ ಬೇಡಿಕೆಗಳನ್ನು ಅನುಮೋದಿಸಿ ಇಷ್ಟು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸುತ್ತೇನೆ.

†ಶ್ರೀ ಜಿ. ಎಚ್. ಪುಟ್ಟಣ್ಣ (ತುಮಕೂರು).—ಮಾನ್ಯ ಅಧ್ಯಕ್ಷರೆ ಈ ದಿವಸ ನಮ್ಮ ಸುದೈವವೇನೆಂದರೆ ನಮ್ಮ ಫೈನಾನ್ಸ್ ಮಿನಿಸ್ಟರು ಇಲ್ಲಿ ಕೂತಿದ್ದಾರೆ. ಅವರು ಈ ವರ್ಷ ಹಾಕಿರತಕ್ಕಂಥ ತೆರಿಗೆಯಲ್ಲಿ ಲ್ಯಾಂಡ್ ರೆವಿನ್ಯೂ ಮೇಲೆ ಸರ್ಚಾರ್ಜ್ ಹಾಕಿ ಪಡೆಯುವ 130 ಲಕ್ಷ ರೂಪಾಯಿಯೂ ಸೇರಿಕೊಂಡಿದೆ. ಫೈನಾನ್ಸ್ ಮಿನಿಸ್ಟರು ಸರ್ಚಾರ್ಜ್ ಹಾಕಿ ಹೋಗತಕ್ಕವನ್ನು ಸ್ವಲ್ಪಮಟ್ಟಿಗೆ ಸರಿದೂಗಿಸಿದ ಹಾಗೆ ಅವರ ಪಕ್ಕದಲ್ಲಿರುವ ಅರಣ್ಯಮಂತ್ರಿಗಳೂ ಮನಸ್ಸು ಮಾಡಿದರೆ ಚೆನ್ನಾಗಿ ಕೆಲಸಮಾಡಿ ಫಾರೆಸ್ಟ್ ಇಲಾಖೆಯನ್ನು ಸುಧಾರಿಸಿಕೊಂಡು ಅದರಿಂದ ಇನ್ನೂ ಹೆಚ್ಚಿಗೆ ಆದಾಯ ಬರುವಹಾಗೆ ಮಾಡಬಹುದು. ಮೊದಲನೆಯದಾಗಿ ಫಾರೆಸ್ಟ್ ಟಿಂಬರ್ ಡಿಪೋಗಳಲ್ಲಿ ಸರಿಯಾದ ಚೆಕಿಂಗ್ ಮತ್ತು ಸೂಪರ್‌ವಿಶನ್ ಇರಬೇಕು, ಫಾರೆಸ್ಟಿನಲ್ಲಿರತಕ್ಕ ಮರಗಳನ್ನು ಕಡಿದರೆ, ರೂಲ್ಸ್ ಪ್ರಕಾರ ಒಂದು ಸ್ಟ್ಯಾಂಪನ್ನು ಮರಕ್ಕೆ ಹಾಕಬೇಕು; ನಂಬರ್ ಹಾಕಬೇಕು, ಅದು ಬುಡದಿಂದ ಒಂದು ಅಡಿ ಮೇಲಕ್ಕೆ ಇರಬೇಕು. ಡಿಪೋನಲ್ಲಿರುವ ಸ್ಟ್ಯಾಂಪರ್ ಸೀಲಿಗೂ, ಅಲ್ಲಿಗೆ ಬರತಕ್ಕಂಥ ಮರದ ಮೇಲಿರುವ ಸ್ಟ್ಯಾಂಪ್ ಮಾರ್ಕಿಗೂ ಎರಡಕ್ಕೂ ಹೋಲಿಕೆ ಬರಬೇಕು. ಮರಗಳು ಟಿಂಬರ್ ಡಿಪೋಗೆ ಬಂದ ಮೇಲೆ ವರ್ಷಂಪ್ರತಿ ಸಬ್-ಅಸಿಸ್ಟೆಂಟ್ ಕನ್ಸರ್ವೇಟರೋ ಅಥವ ಒಬ್ಬ ರೇಂಜರೋ ಚೆಕ್ ಮಾಡಬೇಕು. ಈಗ ಏನಾಗುತ್ತಿದೆಯೆಂದರೆ ಚೆಕಿಂಗ್ ಕಾಲದಲ್ಲಿ ಆ ಡಿಪೋದು ಈ ಡಿಪೋಗೆ, ಈ ಡಿಪೋದು ಆ ಡಿಪೋಗೆ ಲೆಕ್ಕಕೋಸ್ಕರ ಹಾಕುತ್ತಿರುತ್ತಾರೆ. ಇದರಿಂದ ಸರಿಯಾದ ಸ್ಟಾಕ್ ಚೆಕಿಂಗ್ ನಡೆಯುತ್ತಿಲ್ಲವೆಂದು ಹೇಳಬಹುದು. ಈ ಸ್ಟಾಕ್ ಚೆಕಿಂಗನ್ನು ಬೇರೆ ಆಫೀಸರು ಗಳಿಂದ ಮಾಡಿಸುವುದು ಒಳ್ಳೆಯದು. ಯಾರಾದರೂ ಮೆಜಿಸ್ಟ್ರೇಟರೋ, ತಹಸೀಲ್‌ದಾರರೋ, ಅಸಿಸ್ಟೆಂಟ್ ಕಮಿಶನರಿಂದಲೋ ಮಾಡಿಸುವುದು ಒಳ್ಳೆಯದು. ನೀವು ಹೀಗೆ ಚೆಕ್ ಮಾಡಿಸುವುದಕ್ಕೆ ಪ್ರಾರಂಭ ಮಾಡಿ, ಎಷ್ಟು ಉತ್ಪತ್ತಿ ಬರುತ್ತದೆ ನೋಡಿ. ಶಿವಮೊಗ್ಗದ ಸಾಮಿಲ್ಸ್ ಉಡ್ ಯಾರ್ಡಿನಲ್ಲಿ ವಿಪರೀತ ಲೂತಾಸ್ಸನಾಗುತ್ತಿವೆ. ಗವರ್ನ್‌ಮೆಂಟಿನವರು ಏನುಮಾಡಿದ್ದಾರೆಂದರೆ ಜನಗಳ ಕಣ್ಣಿಗೆ ಮಣ್ಣೆರಚುವುದಕ್ಕೆ ಡಿಪೋವಿನಲ್ಲಿ ಆಕ್‌ಚುಯಲ್ ಕಾಸ್ಟಿನಿಂದ 33⅓ ಪರ್ಸೆಂಟ್ ಬಿಟ್ಟುಕೊಡುತ್ತೇವೆಂದು ಹೇಳುತ್ತಾರೆ. ಫಾರೆಸ್ಟ್ ಡಿಪಾರ್ಟ್‌ಮೆಂಟಿನವರು ಡಿಪೋವಿಗೆ

(ಶ್ರೀ ಡಿ. ಎಚ್. ಪುಟ್ಟಣ್ಣ)

ಕಡಿಮೆ ಬೆಲೆಗೆ ಸಪ್ಲೈಮಾಡಿರುತ್ತಾರೆ. ಆ 33⅓ ಪರ್ಸೆಂಟನ್ನು ಡಿಪೋ ಅವರು ಮೇಕ್‌ಅಪ್ ಮಾಡಬೇಕು. ಡಿಪೋ ಅವರು ಕಡಿಮೆಗೆ ಕೊಟ್ಟಿದ್ದನ್ನು ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ, ಆದ್ದರಿಂದ ಡಿಪೋವಿಗೆ ಲಾಭಬಂದಹಾಗೆ ಕಾಣುತ್ತೆ, ಡಿಪೋವಿಗೆ ಲಾಭ ತೋರಿಸುತ್ತಾರೆ. ಆದರೆ ನಿಜವಾಗಿ ಫಾರೆಸ್ಟ್ ಇಲಾಖೆಗೆ ಲಾಸ್ ಆಗಿರುತ್ತದೆ. It is nothing but deposing the Government.

5–00 P.M.

ಈಗ ಇದರಲ್ಲಿ ಎಲ್ಲ ಏನಾಗಿದೆ ಎಂದರೆ ನುಂಗುವುದು ಜಾಸ್ತಿಯಾಗುತ್ತಿದೆ, ಈ ದಿವಸ ಶ್ರೀಗಂಧದ ಮರ ತೆಗೆದುಕೊಂಡರೆ ಇದರ ಖರೀದಿ ಟನ್ನಿಗೆ 7–8 ಸಾವಿರ ರೂಪಾಯಿಗಳಿವೆ. ಯಾರೂ ಒಬ್ಬನಿಗೆ ಕಾಡಿನಲ್ಲಿರತಕ್ಕ ಗಂಧದ ಮರಗಳನ್ನೆಲ್ಲಾ ಒಂದು ಕಡೆಗೆ ಕಲೆಕ್ಟ್ ಮಾಡಿ ಕೊಡಲು ಕಂಟ್ರಾಕ್ಟ್ ಕೊಟ್ಟಿದ್ದಾರೆ. ಈ ದಿವಸ ಅಲ್ಲಿ ನಡೆಯುತ್ತಿರುವುದೇನೆಂದರೆ–ಈ ಗಂಧದ ಮರಗಳನ್ನು ಸಣ್ಣಸಣ್ಣ ತುಂಡುಗಳನ್ನಾಗಿ ಕತ್ತರಿಸಿ ಅವುಗಳನ್ನು ಸಗಣಿ ಬಗ್ಗಡದಲ್ಲದ್ದಿ ಚೀಲದ ಸ್ವಲ್ಪ ಮೆಣಸಿನಪುಡಿಹಾಕಿ ಆನಂತರ ಆ ಚೀಲದಲ್ಲಿ ಈ ಗಂಧದ ತುಂಡುಗಳನ್ನೆಲ್ಲ ತುಂಬಿ ಆನಂತರ ಚೀಲದ ಬಾಯಿಗೆ ಮತ್ತೆ ಮೆಣಸಿಣಪುಡಿಯನ್ನು ಭರ್ತಿಮಾಡಿ, ಇಲ್ಲವೇ ಕಡಲೆಕಾಯಿ ಸಿಪ್ಪೆಯನ್ನೋ ಹಾಕಿ ಗಂಧದ ಮರಗಳನ್ನು ಆ ಕಳವಿನಿಂದ ಬೇರೆ ದೇಶಗಳಿಗೆ ಸಾಗಿಸುತ್ತಿದ್ದಾರೆ. ನಾನು ಹಿಂದೆ ಇಂಥ ಕೇಸುಗಳನ್ನು ಹಿಡಿದು ಕೊಟ್ಟಿದ್ದೇನೆ. ಹೀಗೆಲ್ಲಾ ಅನ್ಯಾಯವಾಗಿ–ಅನೀತಿಯಿಂದ ಹೋಗುತ್ತಿರುವುದನ್ನೆಲ್ಲ ತಡಗಟ್ಟಿದ್ದರೆ ಸರ್ಕಾರಕ್ಕೆ ಲಕ್ಷಾಂತರ ರೂಪಾಯಿಗಳ ಉಳಿತಾಯವಾಗುತ್ತಿತ್ತು.

ಈ ದಿವಸ ಅಫಾರೆಸ್ಟೇಷನ್ ಮಾಡಿಸುತ್ತಿದ್ದಾರೆ. ಇದರಲ್ಲಿ ಏನಾದರೂ ಸತ್ಯ–ಧರ್ಮ–ನ್ಯಾಯ ಇದೆಯೇ? ಈ ಹಿಂದೆ ಶ್ರೀಮಾನ್ ಕೆ. ಎಫ್. ಪಾಟೀಲರ ಕಡೆಗೆ ಈ ಶಾಖೆಯಿದ್ದಾಗ ಅವರಿಗೆ ಇಂಥ ಕಡೆಯಲ್ಲಿ ಹೀಗೇ ಮಾಡಿದ್ದಾರೆ, ಇಂಥಕಡೆ ಡಬ್ಬಲ್ ಪೇಮೆಂಟ್ ಆಗಿದೆ ಅನ್ನುವುದನ್ನೆಲ್ಲ ತಿಳಿಸಿದ್ದೆನು. ಆದರೆ ಇಲ್ಲಿಯ ತನಕ ಏನೂ ಆಗಿಲ್ಲ. ಈ ಪ್ಲಾಂಟೇಷನ್ ವಿಚಾರವನ್ನಂತೂ ಹೇಳೋಹಾಗೆ ಇಲ್ಲ. ಆದರೆ ನನ್ನ ಉದ್ದೇಶ ಯಾರಮೇಲೂ ಅಪಾದನೆಗಳನ್ನು ಹೊರಿಸಬೇಕೆಂಬುದಲ್ಲ. ನಮ್ಮ ದೇಶಕ್ಕೆ ಅರಣ್ಯ ಸಂಪತ್ತೆಂಬುದು ಬಹಳದೊಡ್ಡದು. ಅದಕ್ಕಾಗಿ ನಾನೀಗ ಈ ವಿಚಾರಗಳನ್ನೆಲ್ಲಾ ಸರ್ಕಾರದವರ ಗಮನಕ್ಕೆ ತರುತ್ತಿದ್ದೇನೆ. ಹಿಂದೆ ಶ್ರೀ ಸಿ. ಮಾಚಯ್ಯ ಎಂತ ಒಬ್ಬರು ಈ ಫಾರೆಸ್ಟ್ ಇಲಾಖೆಯ ಅಧ್ಯಕ್ಷರಾಗಿದ್ದರು. ಆಗ ಅವರೇನು ಮಾಡುತ್ತಿದ್ದರೆಂದರೆ ದಿನವಹಿ ಬೆಳಗ್ಗೆ ಎದ್ದಕೊಡಲೆ ಅವರು ಕುದರೆ ಮೇಲೆ ಹೊರಟು ಇಂಥ ಕಡೆ ಹೀಗೇ ಮರಗಳಿದ್ದವು–ಇಷ್ಟೇ ಮರಗಳಿದ್ದವು, ಇಂಥ ಕಡೆಯೇ ಮರಗಳು ಗ್ಯೆರುವಿಲೆಯಾಗಿವೆ ಎನ್ನುವಷ್ಟರ ಮಟ್ಟಿಗೆ ಅವರು ಈ ಇಲಾಖೆಯ ಆಡಳಿತವನ್ನು ನೋಡಿಕೊಳ್ಳುತ್ತಿದ್ದರು. ಈ ಹಿಂದೆ ಈ ಪ್ಲಾಂಟೇಷನ್ನುಗಳಲ್ಲೆಲ್ಲ ಬಹಳ ಬೆಲೆಬಾಳತಕ್ಕ ಮರಗಳನ್ನು ಮಾತ್ರ ಬೆಳಸುತ್ತಿದ್ದರು. ಆದರೆ ಈ ದಿವಸದ ಪ್ಲಾಂಟೇಷನ್ನುಗಳಲ್ಲಿ ಹಿಂದಿನಹಾಗೆ ಬೆಲೆಬಾಳತಕ್ಕ ಮರಗಳನ್ನು ಬೆಳೆಸುವುದು ತೀರಾ ಕಡಮೆಯಾಗಿದೆ. ಒಟ್ಟಿನಲ್ಲಿ ಅರಣ್ಯದಲ್ಲಿ ಮರಗಳ ಕಡಿತ ಜಾಸ್ತಿಯಾಯಿತು–ಕಾಡನ್ನು ಬೆಳೆಸುವುದು ಕಡಮೆ ಆಯಿತು. ಹೀಗಾಗಿ ಈ ದಿವಸ ನಮ್ಮ ಸರ್ಕಾರಕ್ಕೆ ಈ ಅರಣ್ಯ ಬಾಬಿನಿಂದ ಬರಬೇಕಾಗಿದ್ದ ಉತ್ಪತ್ತಿ ಖೋತಾ ಆಯಿತು. ಇದರ ಜೊತೆಗೆ ಸ್ಮಗ್ಲಿಂಗ್ ಹೆಚ್ಚಾಗುತ್ತಿದೆ! ಈ ವ್ಯವಹಾರಗಳೆಲ್ಲ ಹೀಗೆ ಮುಂದುವರೆದರೆ ಮುಂದೆ ನಮ್ಮ ಪಾಡೇನು? ಇನ್ನು ಈ ಫಾರೆಸ್ಟ್ ಇಲಾಖೆಯವರು ಭದ್ರಾವತಿ (ಐರನ್ ಅಂಡ್ ಸ್ಟೀಲ್ ವರ್ಕ್ಸ್‌ಗೆ ಸೌದೆ ಮತ್ತು ಇದ್ದಿಲನ್ನು ಸಪ್ಲೈ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದ್ದಾರಂತೆ. ಕಾರಣವೇನು? ಈಗ ಆಗುತ್ತಿರುವ ಆ ಶರವತಿ ವ್ಯಾಲಿ ಮತ್ತು ಭದ್ರ ಜಲಾಶಯಗಳ ಮುಳುಗಡೆ

ಪ್ರದೇಶದಲ್ಲಿದ್ದು ಬಿದ್ದು ಹೋಗಿರತಕ್ಕ ಮರಗಳನ್ನು ಏಕೆ ಈ ಕಾರ್ಖಾನೆಗೆ ಸರಬರಾಯಿ ಮಾಡಬಾರದಾಗಿತ್ತು? ಇದರಲ್ಲಿದ್ದ ತೊಂದರೆಯಾದರೂ ಏನು? ಈಹಿಂದೆಲ್ಲ ಈ ಇಲಾಖೆಯವರು ಬಹಳ ಕಡಮೆ ದರದಲ್ಲಿ ಇದ್ದಿಲನ್ನು ಸರಬರಾಯಿ ಮಾಡುತ್ತಿದ್ದರಂತೆ. ಆದರೆ ಈಗ ಆ ದರದಲ್ಲಿ ಸರಬರಾಯಿ ಮಾಡುವುದಕಾಗುವುದಿಲ್ಲವೆಂದು ಹೇಳುತ್ತಿದ್ದಾರಂತೆ.

ಶ್ರೀ ಎಚ್. ಎಸ್. ರುದ್ರಪ್ಪ.–ಯಾರು ಹಾಗೆ ಹೇಳಿದರು? ಅದು ತಪ್ಪು. ನೀವು ಹೇಳುತ್ತಿರುವುದು ಸರಿಯಲ್ಲ.

ಶ್ರೀ ಡಿ. ಎನ್. ಪುಟ್ಟಣ್ಣ.—ಈ ಪಾಯಿಂಟನ್ನು ನಾನು ಛಾಲೆಂಜ್ ಮಾಡುತ್ತೇನೆ. ನನ್ನ ಒಂದು ಪ್ರಶ್ನೆಗೆ ಇದೇ ಸಭೆಯಲ್ಲಿ ಸರ್ಕಾರದವರು ಕೊಟ್ಟಿರತಕ್ಕ ಉತ್ತರದ ಆಧಾರವನ್ನಿಟ್ಟುಕೊಂಡು ನಾನೀಗ ಈ ಸ್ಟೇಟ್‌ಮೆಂಟ್ ಮಾಡುತ್ತಿದ್ದೇನೆ. ಈ ದಿವಸ ಈ ಕಾರ್ಖಾನೆಗೆ ಆ ಹುಣಸೂರು ಫಾರೆಸ್ಟಿನಿಂದ ಇದ್ದಿಲನ್ನು ತಂದು ಸರಬರಾಯಿ ಮಾಡಿ ಒಂದಕ್ಕೆ 4ರಷ್ಟು ದುಡ್ಡನ್ನು ಕೊಡುತ್ತಿದ್ದಾರೆ. ಈ ದಿವಸ ನಮ್ಮ ಅರಣ್ಯದಲ್ಲಿ ಸೊಗಸಾದ ಇದ್ದಿಲನ್ನು ಮಾಡತಕ್ಕಂಥ ಹಾರ್ಡ್‌ವುಡ್ಡನ್ನು ಬೇರೆ ಜನಗಳಿಗೆ ಅಗ್ಗದ ದರದಲ್ಲಿ ಮಾರಾಟಮಾಡಿ ಹೊರಗಿನವರಿಂದ ಆಲ-ಹತ್ತಿ-ಅರಳಿ ಮರಗಳ ಇದ್ದಿಲಿಗೆ ಒಂದಕ್ಕೆ ನಾಲ್ಕರಷ್ಟನ್ನು ಕೊಟ್ಟು ಕೊಳ್ಳುತ್ತಿದ್ದಾರೆ. ಮೊಟೆಗೆ 1–2 ರೂಪಾಯಿಗಳ ಬೆಲೆಯಿರತಕ್ಕ ಮಾಲಿಗೆ 3–4 ರೂಪಾಯಿಗಳನ್ನು ಈಗ ಕೊಡುತ್ತಿದ್ದಾರೆ. ಇದು ಯಾರ ಸ್ವತ್ತು ಅಂತ ಹೀಗೆಲ್ಲ ಮಾಡುತ್ತಿದ್ದಾರೋ ನನಗೆ ಅರ್ಥವಾಗುತ್ತಿಲ್ಲ. ಈದಿವಸ ಸರ್ಕಾರದವರು ಒಳ್ಳೆ ಲಾಯಖ್ ಆದ ಮರಗಳನ್ನು ಘನಅಡಿ ಒಂದಕ್ಕೆ 2-2¼ ರೂಪಾಯಿಗಳಂತೆ ಮಾರಾಟಮಾಡುತ್ತಿದ್ದಾರೆ. ಹೊರಗಡೆ ಆಲ-ಟಿಕ್ಕೆ ಇತ್ಯಾದಿ ಮರಗಳ ಬೆಲೆ ಘನಅಡಿಗೆ 4–5 ರೂಪಾಯಿಗಳಿರುತ್ತೆ. ಇದರಲ್ಲಿ ಏನಾದರೂ ಅರ್ಥವಿದೆಯೇ ಸರ್ಕಾರಕ್ಕೆ ಇಷ್ಟು ಕಡಿಮೆ ದರದಲ್ಲಿ ಮಾರಾಟ ಮಾಡಲು ಯಾರು ಶಿಫಾರ್ಸು ಮಾಡಿದರು? ಯಾರ ರಿಪೋರ್ಟಿನ ಮೇರೆ ಸರ್ಕಾರ ಈ ರೇಟನ್ನು ಅಂಗೀಕರಿಸಿತು? ಈಗಲಾದರೂ ಸರ್ಕಾರದವರು ನಾನು ಹೇಳಿರತಕ್ಕ ವಿಷಯಗಳನ್ನೆಲ್ಲಾ ಇನ್ನೊಮ್ಮೆ ವೆರಿಫೈ ನೋಡಬೇಕೆಂದು ಹೇಳುತ್ತೇನೆ.

ಇನ್ನು ಮಲೆನಾಡಿನಲ್ಲಿರತಕ್ಕ ರೈತರಿಗೆ ಮಲೆನಾಡು ರೈತರ ಪ್ರಿವಿಲೇಜಸ್ ರೂಲ್ಸ್‌ಗಳಂತ ಮಾಡಿ ಕೆಲವು ರಿಯಾಯಿತಿಗಳನ್ನು ಕೊಡುತ್ತಿದ್ದಾರೆ. ಈ ವಿಚಾರದಲ್ಲಿ ಬಹಳ ಅನ್ಯಾಯಗಳು ನಡೆಯುತ್ತಿವೆ. ನಾನು ಹಿಂದೆ ಅಮಲ್ದಾರ್ ಆಗಿದ್ದಾಗಲೂ ಮತ್ತು ಅಸಿಸ್ಟೆಂಟ್ ಕಮಿಷನರಾಗಿದ್ದಾಗಲೂ ಎಷ್ಟೋ ಅನ್ಯಾಯಗಳು ನಡೆಯುತ್ತಿದ್ದುದನ್ನು ಕಣ್ಣಾರೆ ನೋಡಿದ್ದೇನೆ. ಈ ಬಾಬಿನಲ್ಲಿ ಬಹಳ ಸ್ಮಗ್ಲಿಂಗ್ ನಡೆಯುತ್ತಿದೆ. ಇದನ್ನು ತಡಗಟ್ಟಿದರೆ ಸರ್ಕಾರಕ್ಕೆ ಈಹೊತ್ತು ಲಕ್ಷಾಂತರ ರೂಪಾಯಿಗಳು ಉಳಿತಾಯವಾಗುತ್ತೆ.

ಈ ದಿವಸ ಕೆಲವು ಫಾರೆಸ್ಟ್ ಏರಿಯಾಗಳಲ್ಲಿ ದುಡ್ಡನ್ನು ಎ. ಸಿ. ಬಿಲ್‌ಮೂಲಕ ಡ್ರಾಮಾಡಿದ್ದಾರೆ. ಆದರೆ ಅದನ್ನು ಎನ್. ಡಿ. ಸಿ. ಬಿಲ್‌ಗೆ ಅಕೌಂಟಿಗೇ ಬಂದಿಲ್ಲ. ಆದರೂ ಎನ್. ಡಿ. ಸಿ. ಬಿಲ್ಲಿನಲ್ಲಿ ಈ ಐಟಂನ್ನೇ ಕೊಟ್ಟಿಲ್ಲ. ಈ ವಿಚಾರ ಸರ್ಕಾರದವರ ಗಮನಕ್ಕೂ ಬಂದಿದೆ. ಆದರೂ ಅವರೂ ಸುಮ್ಮನೆ ಕುಳಿತ್ತಿದ್ದಾರೆ. ಪಬ್ಲಿಕ್ ಅಕೌಂಟ್ಸ್ ಕಮಿಟಿ ವರದಿಯಲ್ಲಿ ಈ ಬಾಬಿಗೇನೂ ಉತ್ತರವನ್ನೆ ಕೊಟ್ಟಿಲ್ಲ. ಹೀಗೆ P. W. D. ಬಾಬಿನಲ್ಲಿ :5 ಲಕ್ಷರೂ.ಗಳಿಗೆ ಉತ್ತರಕೊಟ್ಟಿಲ್ಲ. ಸರ್ಕಾರದವರು ಕಣ್ಣುಮುಚ್ಚಿಕೊಂಡು ತಣ್ಣಗೆ ಕುಳಿತುಬಿಟ್ಟಿದ್ದಾರೆ. ಹೀಗೆ ಎ. ಸಿ. ಬಿಲ್ಲಿನಲ್ಲಿ ಈ ದಿವಸ ಆ ದಾಂಡೇಲಿ ಶಾಖೆಯಲ್ಲಿ ಡ್ರಾಮಾಡಿರತಕ್ಕ ಹಣಕ್ಕೆ ಓಚರ್ಸ್ ಇಲ್ಲ ಎಂತಹೇಳಿ ಈ ಹಣಕ್ಕೆ ಎನ್. ಡಿ. ಸಿ. ಬಿಲ್ಲಿನಲ್ಲಿ ಉತ್ತರವನ್ನೇ ಕೊಟ್ಟಿಲ್ಲ. ಇದೆಲ್ಲಾ ಯಾರ ಗಂಟು ಅಂತ ಕೇಳುತ್ತೇನೆ?

ಇನ್ನು ಸಾಯಿಲ್ ಕನ್ಸರ್ವೇಷನ್ ವಿಚಾರಕ್ಕೆ ಬಂದರೆ: ಎಲ್ಲಿ ವ್ಯವಸಾಯಕ್ಕಾಗಿ ಜಮೀನುಗಳನ್ನು ಕೊಡಲಾಗಿದೆಯೋ ಅಂಥ ಕಡೆಗಳಲ್ಲಿ ಜಮೀನನ್ನು ಉಳುವುದರಿಂದ ಮಳೆ ಬಂದಾಗ ಆ ಜಮೀನು ಕೊಚ್ಚಿ ಹೋಗಿ ಅದರಸಾರ ಕಡಮೆಯಾಗುತ್ತದೆ ಅಂಥ ಕಡೆಗಳಲ್ಲಿ ಈ ಸಾಯಿಲ್‌ಕನ್ಸರ್ವೇಷನ್ ಕಾರ್ಯವನ್ನು ಮಾಡತಕ್ಕದ್ದು ನ್ಯಾಯವಾಗಿದೆ. ಆದರೆ ಈ ದಿವಸ ನಡೆಯುತ್ತಿರುವ

(ಶ್ರೀ ಜಿ. ಎಚ್. ಪುಟ್ಟಣ್ಣ)

ಈ ಸಾಯಿಲ್‌ಕನ್ಸರ್ವೇಷನ್ ವಿತರಣೆ ಯಾವ ರೀತಿ ಇದೆ? ಈಗ ಆ ರಾಣಿಬೆನ್ನೂರು-ರಾಯು ಚೂರಗಳ ಹತ್ತಿರ ಕೆಲವು ಗುಡ್ಡಗಳಿವೆ. ಅಲ್ಲಿ ಈಗ ಈ ಸಾಯಿಲ್‌ಕನ್ಸರ್ವೇಷನ್ ಕಾರ್ಯ ನಡೆಯು ತ್ತಿದೆ. ಆದರೆ ಸರ್ಕಾರದವರು ಯಾರಾದರೂ-ಎಂದಾದರೂ ಅಲ್ಲಿಗೆ ಹೋಗಿ ಅಲ್ಲೇನು ನಡೆಯು ತ್ತಿದೆಯೆಂಬುದನ್ನು ನೋಡಿದ್ದಾರೇನು? ಆದರೆ ನಾನೀಗ ಆ ಸ್ಥಳಕ್ಕೆ ಖುದ್ದುಹೋಗಿ ನೋಡಿದ್ದೇನೆ. ಅದಕ್ಕಾಗಿ ನಾನೀಗ ಈ ವಿಚಾರವನ್ನು ಇಲ್ಲಿ ಎತ್ತಿರುವುದು. ಇದೇ ರೀತಿ ಆ ಕಬ್ಬನಹಳ್ಳಿ ಹತ್ತಿರವೂ ಈ ಸಾಯಿಲ್ ಕನ್ಸರ್ವೇಷನ್ ಕೆಲಸ ನಡೆದಿದೆ. ಆದರೆ ಅದು ಯಾವ ಕಾಲ ದಲ್ಲಿ ಆದದ್ದು, ಅದಕ್ಕೆ ಎಷ್ಟು ಹಣ ಕೊಟ್ಟಿದ್ದಾರೆ; ಅಲ್ಲಿ ನ್ಯಾಯವಾಗಿ ಮಾಡಿರತಕ್ಕದ್ದೇನು ಎನ್ನುವುದನ್ನೆಲ್ಲ ಈ ದಿವಸ ಮಂತ್ರಿಗಳು ಅಲ್ಲಿಗೆ ಹೋಗಿ ನೋಡಿದರೆ ತಾನೆ ಅವರಿಗೆ ನಾನೀಗ ಹೇಳು ತ್ತಿರುವುದರ ಸತ್ಯಾಂಶ ಗೊತ್ತಾಗುವುದು? ಈ ದಿವಸ ಸರ್ಕಾರದವರು ವಿದ್ಯಾಭ್ಯಾಸದ ಇಲಾ ಖೆಗೂ ಕೂಡ ಜೀಪುಗಳನ್ನು ಕೊಟ್ಟಿದ್ದಾರೆ. ಆದರೆ ಫಾರೆಸ್ಟ್ ಇಲಾಖೆಗೆ ಗಾರ್ಡುಗಳಿಗೂ- ಫಾರೆಸ್ಟರಿಗೂ ತಿರುಗಾಡಲು ಈ ಇಲಾಖೆಗೊಂದು ಜೀಪನ್ನು ಕೊಟ್ಟಿಲ್ಲವೆಂದರೆ ಇದಕ್ಕೆ ಏನು ಹೇಳಬೇಕು? ಒಂದೊಂದು ಜಿಲ್ಲೆಗೂ 1-2 ಜೀಪುಗಳನ್ನು ಈ ಇಲಾಖೆಗೆ ಕೊಟ್ಟರೆ ಕಾಡಿನಲ್ಲಿರತಕ್ಕ ಮರಗಳು ಕಳವಾಗಿ ಹೋಗುವುದನ್ನು ತಡೆಗಟ್ಟಲು ಎಷ್ಟೋ ಸಹಾಯವಾಗುತ್ತೆ. ಮೊನ್ನೆ ಒಂದು ಕಡೆ ಯಾರೋ ಒಬ್ಬ ಡಿ. ಎಫ್. ಓ. ಅವರು ಈ ನಾಟಾಕಳವನ್ನು ಹಿಡಿಯಲು ಹೋಗಿದ್ದಾಗ ಅವರ ಮೇಲೆ ಏಕ್‌ದಂ 300-400 ಜನರು ಬಂದು ಬಿದ್ದರಂತೆ! ಹೀಗೆಲ್ಲಾ ಈ ಅಧಿಕಾರಿಗಳಿಗೆ ಸರ್ಕಾರದ ಪ್ರೋತ್ಸಾಹವೇನೂ ಇಲ್ಲದಿರುವುದರಿಂದ ಅವರೀದಿವಸ ಏನು ಮಾಡುತ್ತಿದ್ದಾರೆ ಎಂದರೆ ಆಫೀಸಿನಲ್ಲೇ ಕುಳಿತು 30 ದಿವಸಗಳನ್ನು ಎಣಿಸಿ ಸಂಬಳ ತೆಗೆದು ಕೊಂಡರೆ ಸಾಕುಎಂತ ತೆಪ್ಪಗಿದ್ದು ಬಿಟ್ಟಿದ್ದಾರೆ. ಯಾವಾಗ ಸರ್ಕಾರದವರು ಇವರಿಗೆ ಅತ್ಯವಶ್ಯಕವಾಗಿ ಕೊಡಬಹು ದಾದ ಸೌಲಭ್ಯಗಳನ್ನು-ಸಹಕಾರವನ್ನು ಕೊಡಲಿಲ್ಲವೋ ಆಗ ಅವರು ಈ ಕೆಲಸಗಳನ್ನೆಲ್ಲ ಕೈಬಿಟ್ಟು ತೆಪ್ಪಗೆ ಕುಳಿತು ಕೊಂಡಿದ್ದಾರೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಈಗ ಈ ಫಾರೆಸ್ಟ್ ಇಲಾಖೆಯನ್ನು ಸೋಷಿಯಲ್ ವೆಲ್‌ಫೇರ್ ಶಾಖೆಗೆ ಕೂಡಿಸಿದರೆ ಆಗ ಇದು ಉತ್ತಮವಾಗಬಹುದೇ ಹೇಗೆ?

ಶ್ರೀ ಜಿ. ಎಚ್. ಪುಟ್ಟಣ್ಣ: ನಾನು ಬಿಟ್ಟಿನಲ್ಲಿ ಹೇಳುವುದಿಷ್ಟೆ: ಈ ದಿವಸ ಮಂತ್ರಿಗಳೇನು ಶಿವಮೊಗ್ಗದಿಂದ ನರ್ ಅಂತ ಹಾರಿ ಧಾರವಾಡ-ದಾವಣಗೆರೆ, ಹುಬ್ಬಳಿ ಸುತ್ತಿಕೊಂಡು ಪುರ್ ಅಂತ ಬಂದು ಬೆಂಗಳೂರಲ್ಲಿ ಕುಳಿತರೆ ಏನೂ ಕೆಲಸ ಆದಂತೆ ಆಗಲಿಲ್ಲ. ಪ್ರತಿ ಜಿಲ್ಲೆಯಲ್ಲೂ ಮಂತ್ರಿಗಳು 8 ದಿವಸ ಕ್ಯಾಂಪ್ ಹಾಕಿ ಕುಳಿತು ಕೊಳ್ಳಬೇಕು. ಎಲ್ಲೆಲ್ಲಿ ಏನೇನು ಕೆಲಸಗಳು ನಡೆದಿರುತ್ತೆಂಬು ದನ್ನು ಸ್ಥಳಕ್ಕೆ ಹೋಗಿ ನೋಡಬೇಕು.

ಶ್ರೀ ಎಚ್. ಎಸ್. ರುದ್ರಪ್ಪ.—ಹಾಗೆ ಮಾಡಿದರೆ ಮಂತ್ರಿಗಳು ಟಿ.ಎ. ಜಾಸ್ತಿಮಾಡುತ್ತಾ ರೆಂದು ಟೀಕೆ ಮಾಡುತ್ತೀರಲ್ಲ?

ಶ್ರೀ ಜಿ. ಎಚ್. ಪುಟ್ಟಣ್ಣ.—ಸರಿದು. ಓಪನಿಂಗ್ ಶೆರಮೋನಿಗಳಿಗೆಲ್ಲ ತಿರುಗುತ್ತಿದ್ದರೆ ಹೇಳಲೇಬೇಕು.

ಇನ್ನು ಈ ಸೇಲ್‌ಟ್ಯಾಕ್ಸ್ ವಿಚಾರಕ್ಕೆ ಬಂದರೆ ನಾನು ಹೇಳುವುದನ್ನೆಲ್ಲ ಶ್ರೀ ಮರಿಯಪ್ಪ ನವರೂ ಸಹ ಒಪ್ಪಿಕೊಳ್ಳುತ್ತಾರೆಂದು ನಾನು ತಿಳಿದಿದ್ದೇನೆ. ಆದರೆ ಶ್ರೀಮಾನ್ ಮರಿಯಪ್ಪನವ ರಲ್ಲಿ ಅದ್ಭುತವಾದ ಶಕ್ತಿಇದೆ. ಕೆಲಸವನ್ನು ಚೆನ್ನಾಗಿ ಮಾಡಬಲ್ಲರು. ಆದರೆ ಈ ವಸೀಲಿಬಾಜಿ ಬಂತು ಎಂದರೆ ಇವರೂ ಸಹ ತಣ್ಣಗಾಗಿ ಬಿಡುತ್ತಾರೆ. ಈ ವಿಚಾರದಲ್ಲಿ ಒಂದೇ ಒಂದು ಉದಾ

ಹರಣೆ ಕೊಡಬಹುದಾದರೆ ಸುಮಾರು 600 ಕೇಸುಗಳಲ್ಲಿ ಒಬ್ಬ ಅಸಿಸ್ಟೆಂಟ್ ಸೇಲ್ಸ್‌ಟ್ಯಾಕ್ಸ್ ಕಮಿಷನರು ಸರ್ಕಾರಕ್ಕೆ ಒಂದು ವರ್ಷದಲ್ಲಿ 2 ಲಕ್ಷ ರೂಪಾಯಿಗಳ ನಷ್ಟವನ್ನುಂಟು ಮಾಡಿದಾರೆಂದು ಸರ್ಕಾರಕ್ಕೆ ರಿಪೋರ್ಟು ಬಂದಿದ್ದರೂ ಸಹ ಸರ್ಕಾರ ಇನ್ನೂ ಈ ಬಗ್ಗೆ ಯಾವ ಕಾರ್ಯ ಕ್ರಮವನ್ನೂ ಕೈಗೊಳ್ಳದೆ ಹೈಕಿ-ನೈಕಿ ಅಂತ ಕುಳಿತಿದ್ದಾರೆ. ಆದರೆ ಇವರು ಇಂಥ ಮಸ್ಲಿಲವಾಜಿ ಕೆಲಸ ಮಾಡುವುದು ಬೇಸ ಎಂತ ಹೇಳದೆ ವಿಧಿಯಿಲ್ಲ.

ಸೇಲ್ಸ್‌ಟ್ಯಾಕ್ಸ್ ವಿಚಾರದಲ್ಲಿ ಕಾನೂನು ತಿದ್ದುಪಡಿ ಮಸೂದೆಯ ಚರ್ಚೆಗೆ ಸೆಲೆಕ್ಟ್ ಕಮಿಟಿಯನ್ನು ಶ್ರೀಮಾನ್ ಟಿ. ಮರಿಯಪ್ಪನವರು ಸೇರಿಸಿದ್ದರು. ತಿದ್ದುಪಡಿಗಳನ್ನು ಮಾಡಲಾಯಿತು. ಆದರೆ ಸೇಲ್ಸ್ ಟ್ಯಾಕ್ಸ್ ವಸೂಲು ಮಾಡುವ ವಿಚಾರದಲ್ಲಿ ಬಹಳ ಹೊಲುಸು ಆಗಿದೆ. ಸರಿಯಾಗಿ ವಸೂಲು ಆಗುತ್ತಿಲ್ಲ. ಸರಕಾರಕ್ಕೆ ಇದರಿಂದ ಉತ್ಪತ್ತಿಯಲ್ಲಿ ನಷ್ಟವಾಗುತ್ತಿದೆ. ವ್ಯಾಪಾರಸ್ಥರು ಸರಿಯಾಗಿ ಲೆಕ್ಕ ಪತ್ರ ಇಟ್ಟು ತೋರಿಸುವುದಿಲ್ಲ. ಅಂಥವರನ್ನು ಹಿಡಿದು ಸರಕಾರ ಬಲ ಹಾಕುವುದಿಲ್ಲ. ಈ ಬಗ್ಗೆ ನಾವು ಸರಕಾರಕ್ಕೆ ಎಷ್ಟು ಹೇಳಿದರೂ ಕೇಳುವುದಿಲ್ಲ. ಈ ಸಭೆಯಲ್ಲಿ ಅನೇಕ ಸಾರಿ ನಾವು ಇದನ್ನು ಹೇಳುತ್ತಲೇ ಇದ್ದೇವೆ. ದಯವಿಟ್ಟು ಸರಕಾರ ಈ ವಿಷಯದ ಕಡೆಗೆ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಯಾಕೆಂದರೆ ಇಂಥ ಅನೇಕ ಕೇಸುಗಳನ್ನು ನಾನು ಹಿಡಿದು ಕೊಡುತ್ತೇನೆ. ಆದರೆ ಈಗ ಏನಾಗಿದೆ ಎಂದರೆ ನಿಮಗೆ ಇಂಥಾದ್ದನ್ನು ಹಿಡಿಯುವುದು ಬೇಕಾಗಿಲ್ಲ. ವಸೂಲಿ ಬಾಬಿನಿಂದ ಇಂಥ ಕೇಸುಗಳು ಬೆಳಕಿಗೆ ಬರುತ್ತಿಲ್ಲ. ಇತ್ತೀಚೆಗೆ ವಸೂಲಿ ಬಾಬು ಜಾಸ್ತಿಯಾಗಿದೆ. ಬೇಕಾದಹಾಗೆ ಅಂಥವರು ಆಟವಾಡುತ್ತಾರೆ. ಅವರಿಗೆ ಏನೂ ತೊಂದರೆಯಾಗುವುದಿಲ್ಲ. ಈ ರೀತಿ ನಡೆಯುವದಾದರೆ ಆಡಳಿತೆಯಲ್ಲಿ ಬಗಿ ಉಳಿಯುವದಿಲ್ಲ. ಸರಕಾರಕ್ಕೆ ನ್ಯಾಯವಾಗಿ ಬರಬೇಕಾಗಿದ್ದ ಉತ್ಪತ್ತಿ ಕಳಕೊಳ್ಳಬೇಕಾಗುತ್ತದೆ. ಆದುದರಿಂದ ಆದಷ್ಟು ಜಾಗ್ರತೆ ಇದನ್ನು ಸರಿಪಡಿಸಬೇಕು. ಮತ್ತು ಹೆಚ್ಚು ಗಮನ ಕೊಡುವುದು ಅಗತ್ಯ.

ಇನ್ನು ವಿದ್ಯಾ ಇಲಾಖೆಯ ಬಗ್ಗೆ ಒಂದೆರಡು ವಿಚಾರಗಳನ್ನು ಹೇಳಬೇಕೆಂದಿದ್ದೇನೆ. ಶ್ರೀಮಾನ್ ಅಣ್ಣಾರಾವ್ ಗಣಮುಖಿಯವರು ವಿದ್ಯಾ ಇಲಾಖೆಯ ಮಂತ್ರಿಗಳಾಗಿದ್ದಾರೆ ಅವರು ತಮ್ಮ ಭಾಷಣದಲ್ಲಿ ಅನೇಕ ಸಂಗತಿಗಳನ್ನು ಹೇಳಿದ್ದಾರೆ. ಆದರೆ ಇವತ್ತಿನ ದಿವಸ ಪ್ರತಿಯೊಂದು ಹಳ್ಳಿಯಲ್ಲಿ ನಡೆಯುತ್ತಿರುವುದು ಬೇರೆ ಆಗಿದೆ. ಹಳ್ಳಿಗಳಲ್ಲಿ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸಲಾಗುವ ಯೋಜನೆಯ ಬಗ್ಗೆ ಹೇಳಿದರೂ, ಆದರೆ ಸ್ಕೂಲು ಪ್ರಾರಂಭಿಸುವುದಕ್ಕೆ ಕಟ್ಟಡವಿರುವದಿಲ್ಲ. ಎರಡು ಕೊಠಡಿಯ ಒಂದು ಸ್ಕೂಲು ಕಟ್ಟುವುದಕ್ಕೆ ಸಾಕಷ್ಟು ಹಣ ಸರಕಾರ ಒದಗಿಸುತ್ತಿಲ್ಲ. ಒಂದು ಸ್ಕೂಲು ಬಿಲ್ಡಿಂಗ್ ಆಗುವುದಕ್ಕೆ ಇವತ್ತಿನ ದಿವಸ 6,000 ರೂಪಾಯಿ ಎಸ್ಟಿಮೇಟು ಆಗುತ್ತದೆ. ಇಂಥ ಕಟ್ಟಡ ಕಟ್ಟುವದಕ್ಕೆ ಒಬ್ಬರಿಗೆ ಕಂಟ್ರಾಕ್ಟು ಕೊಡುತ್ತಾರೆ. ಆದರೆ ಕೆಲಸವೇ ನಡೆಯುವದಿಲ್ಲ. ಈ ವಿಚಾರದಲ್ಲಿ ಬಹಳ ಅನ್ಯಾಯವಾಗುತ್ತಿದೆ. ಇದನ್ನು ಆದಷ್ಟು ಜಾಗ್ರತೆ ಸರಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನೊಂದು ವಿಚಾರದ ಬಗ್ಗೆ ಮಂತ್ರಿಗಳನ್ನು ಕೇಳಿದರೆ ಯುನಿವರ್ಸಿಟಿ ಅಟಾನಮಸ್ ಆಗಿದೆಂದು ಹೇಳುತ್ತಾರೆ. ಶಾಲಾ ಉಪಾಧ್ಯಾಯರುಗಳು ಬೇಸಿಗೆಯ ಕಾಲದ ರಜಾ ಬಂದಕೂಡಲೇ ಏಪ್ರೇಲ್ 15ನೇ ತಾರೀಖಿಗೆ ಮನೆಗೆ ಹೋಗಬೇಕಾಗುತ್ತದೆ. ಕಾಲೇಜ ಲೆಕ್ಚರರ್ಸ್ ಅವರಿಗೂ ಸಹ ಈ ತೊಂದರೆಯಾಗುತ್ತಿದೆ. ಇದು ತೀರ ಅನ್ಯಾಯ. 27-28 ವರ್ಷಗಳವರೆಗೆ ಸರ್ವಿಸ್ ಮಾಡಿದವರಿಗೆ ಹೀಗೆ ಮನೆಗೆ ಹೊರಡಿ ಎಂದು ಹೇಳತಕ್ಕದ್ದು ಸರಿಯಲ್ಲ. ಇದನ್ನು ಸರಿಪಡಿಸಬೇಕು. ಇನ್ನು ಅಡಲ್ಟ್ ಎಜುಕೇಶನ್ ವಿಚಾರದಲ್ಲಿ ಸಹ ಏನೇನು ನಡೆದಿದೆ ನೋಡ

(ಶ್ರೀ ಟಿ. ಎಸ್. ಪುಟ್ಟಣ್ಣ)

ಬೇಕು. ವಯಸ್ಕರ ಶಿಕ್ಷಣ ಪದ್ಧತಿಯು ಸರಿಯಾದ ರೀತಿಯಲ್ಲಿ ನಡೆಯುತ್ತಿಲ್ಲ. ಶಿಕ್ಷಣ ಪ್ರಚಾರ ಸರಿಯಾಗಿ ಆಗುತ್ತಿಲ್ಲ. ಅಕ್ಷರಸ್ಥರ ಸಂಖ್ಯೆ ನಿರೀಕ್ಷಿಸಿದಷ್ಟು ಹೆಚ್ಚಾಗುತ್ತಿಲ್ಲ. ಹಣವೇನೋ ಖರ್ಚಾಗುತ್ತಿದೆ. ಸರಿಯಾದ ಪ್ರತಿಫಲ ದೊರೆಯುತ್ತಿಲ್ಲ. ಈಗ ಸ್ವಾತಂತ್ರ್ಯ ದೊರೆತು ಹದಿಮೂರು ವರ್ಷವಾಯಿತು· ಆದರೆ ಶೇಕಡಾ 20 ರಷ್ಟು ಪ್ರಗತಿ ಮಾಡುವುದ ಕ್ಕಾಗಿಲ್ಲ. ಇದೇ ಸಂದರ್ಭದಲ್ಲಿ ಇನ್ನೊಂದು ವಿಚಾರ ಹೇಳಬೇಕಾಗಿದೆ. ರೆಡ್ ಕ್ರಾಸ್ ಎಂದಿರುವ ಸಂಸ್ಥೆಯು ಡೆಡ್‌ಕ್ರಾಸ್ ಆಗಿದೆ. ಆದರೆ ಸರಕಾರದ ಖಜಾನೆಯಿಂದ ಹಣ ಖರ್ಚಾಗುತ್ತಿದೆ. ಇದು ಸರಿಯಲ್ಲ ಇಡೀ ಇಂಡಿಯಾ ದೇಶವನ್ನು ತೆಗೆದುಕೊಂಡರೆ, ನಮ್ಮ ಮೈಸೂರಿನಲ್ಲಿ, ವಿದೇಶಗಳಿಗೆ ಹೋಗುವವರಿಗೆ Study leave concession ಮತ್ತು ಸ್ಕಾಲರ್‌ಷಿಪ್‌ಗಳನ್ನು ಇತರ ಕಡೆಗಳಿಗಿಂತ ಹೆಚ್ಚಾಗಿ ಕೊಡುತ್ತೇವೆಂದು ಹಣಕಾಸಿನ ಉಪಮಂತ್ರಿಗಳು ಹೇಳಿದರು. ಲಂಡನ್ನಲ್ಲಿರುವ ಭಾರತದ ಹೈಕಮಿಷನರಿಂದ ನಾನು ಸಮಾಚಾರವನ್ನು ತರಿಸಿ ಆ ವಿವರಗಳನ್ನು ಚೀಫ್ ಸೆಕ್ರೆಟರಿಯವರಿಗೆ ಕೊಟ್ಟಿರುತ್ತೇನೆ. ಅದರ ಪ್ರಕಾರ ಇತರ ದೇಶಗಳಲ್ಲಿ ಕೊಡತಕ್ಕ ಸ್ಕಾಲರ್‌ಷಿಪ್‌ಗಿಂತ ಇಂಡಿಯಾ ದೇಶ ದಲ್ಲಿ ಕೊಡುವುದು ಕಡಿಮೆ, ಹಿಂದೆ ಪೌಂಡ್ ಕೊಡುತ್ತಿದ್ದರು. ಅಲ್ಲಿ ಜೀವನದ ವೆಚ್ಚ ಗಳು ಕಡಿಮೆಯಾಗಿಲ್ಲ. ಆದರೂ ಸಹ ಈಗ ಅದನ್ನು 31 ಪೌಂಡ್‌ಗಳಿಗೆ ಇಳಿಸಿದ್ದಾರೆ. ದುರುದ್ದೇಶದಿಂದ ಈರೀತಿ ಮಾಡಿದ್ದಾರೆ. ಲಂಡನ್ ನಗರದಲ್ಲಿ ಜೀವನ ಮಾಡಬೇಕಾದರೆ 31 ಪೌಂಡ್ ಸಾಕೇ ಎಂದು ಕೇಳುತ್ತೇನೆ. ಅಲ್ಲಿರುವ ವಿದ್ಯಾರ್ಥಿಗಳಿಂದ ನನಗೆ ಸುಮಾರು ಇಪ್ಪತ್ತು ಕಾಗದಗಳು ಬಂದಿವೆ. ವಿದೇಶಗಳಲ್ಲಿ ವ್ಯಾಸಂಗ ಮಾಡುವವರಿಗೆ ಸರಿಯಾದ Scholarships ಕೊಡಬೇಕು.

ಷೆಡ್ಯೂಲ್ಡ್ ಜಾತಿಯವರ ವಿಚಾರವಾಗಿ ನಾನು ಹೇಳಿದ ತಕ್ಷಣ ಶ್ರೀಮಾನ್ ಬಸವಲಿಂಗಪ್ಪನವರಿಗೂ ಮತ್ತು ಇನ್ನು ಕೆಲವರಿಗೂ ಕೋಪ ಬಂತು ಎಂದು ಕಾಣು ತ್ತದೆ. ನಮ್ಮ ಉದ್ದೇಶವಾದರೂ ಇವರಿಗೆ ಹೆಚ್ಚಿನ ಸೌಲಭ್ಯಗಳನ್ನು ಕೊಡಬಾರ ದೆಂದಲ್ಲ. ಆದರೆ ಯಾರು ಹಿಂದುಳಿದಿದ್ದಾರೆಯೋ ಅವರಿಗೆ ಮೊದಲು ಸಹಾಯ ಸೌಲಭ್ಯ ಗಳನ್ನು ಒದಗಿಸಬೇಕು. Scheduled Castes and Scheduled tribes ಗೆ ಸೇರಿ ರುವ, ಕೊರಮರು, ಕೊರಚರು, ಬುಡುಬುಡುಕೆಯವರು, ಬುರುಡೇದಾಸರು, ಗೋಣಿ ಗರು, ಬೋವಿಗಳು, ದೊಂಬರು, ದೊಂಬಿದಾಸರು, ಗೊಂಚಿರಾಮರು, ಕಾಡುಗೊಲ್ಲರು, ಕಾಡುಕುರುಬರು, ಸೋಲಿಗರು, ದೀವರು, ಮಾಲೇರು, ಇತ್ಯಾದಿ ಪಂಗಡಗಳ ಜನ ರಿಗೆ ಯಾವ ಸೌಲಭ್ಯಗಳನ್ನು ಕೊಟ್ಟಿಲ್ಲ.

ಅವರಿಗೆ ಯಾರಿಗಾದರೂ, ಒಬ್ಬರಿಗಾದರೂ ವಿದ್ಯಾರ್ಥಿ ವೇತನಗಳನ್ನು ಕೊಟ್ಟಿದ್ದೀರಾ ಎಂದು ಕೇಳುತ್ತೇನೆ. ಹರಿಜನರಿಗೆ ಕೊಡಬೇಡಿ ಎಂದು ನಾನು ಹೇಳುವುದಿಲ್ಲ. ನಾನು ಹೇಳಿದ ಜನರಿಗೆ ಮಾತ್ರ ಏಕೆಕೊಡುವುದಿಲ್ಲವೆಂದು ಕೇಳುತ್ತಿದ್ದೇನೆ. ಅವರು ಪ್ರಜಾಸಂಖ್ಯೆ ಯಲ್ಲಿ ಕಡಿಮೆಯಲ್ಲ. ಇಂಥವರಿಗಾಗಿ ಒಂದು ಕಾಲೋನಿ ಮಾಡಿದ್ದೀರಾ? ಅವರಿಗೆ ವಿದ್ಯಾ ಭ್ಯಾಸ ಮಾಡಲು ಸೌಕರ್ಯ ಮಾಡಿಕೊಟ್ಟಿದ್ದೀರಾ?

Foreign democracy in the Indian soil among the uneducated public will be advantage for the ruling party to get votes from the uneducated people and rule for ever and ever. Educate the public and give them facilities.

ಗೊಲ್ಲರಹಟ್ಟಿಗೆ ಒಂದು ಬಾವಿಯನ್ನೂ ಕೊಟ್ಟಿದ್ದಾರೆಯೇ? ಅವರಿಗೆ ವಿದ್ಯಾಭ್ಯಾಸವನ್ನು ಕೊಟ್ಟಿದ್ದಾರೆಯೇ? ಏನೂ ಇಲ್ಲ. ಇದನ್ನು ನೋಡಿದರೆ ನಾಚಿಕೆಯಾಗುತ್ತದೆ.

ಇಕ್ಕರಾರದ ಕೈ ಎಂಜಲು ಎಂದು ಪುರಂದರದಾಸರು ಹೇಳಿರುವಂತೆ ಆಗಿದೆ. ನಾನು ಹೇಳುವುದೇನೆಂದರೆ ಲಿಂಗಾಯತರಿಗೆ ಮತ್ತು ಇತರರಿಗೆ ಸೌಲಭ್ಯಗಳನ್ನು ಕೊಡಬೇಡಿ ಅವರಲ್ಲಿಯೂ ಬಡವರಾದವರಿಗೆ ಕೊಡಿ ಅದೆಲ್ಲಕ್ಕಿಂತ ಮೊದಲು ಬಹಳ ಹಿಂದುಳಿದಿರುವ, ನಾನು ಆಗಲೇ ಹೇಳಿದ ಜನಾಂಗದವರಿಗೆ ಕೊಡಿ. ಅವರೆಲ್ಲ ಕಾಡು ಜನರಾಗಿಯೇ ಇದ್ದರೆ ಅಂಥವರಿಗೆ ಸಹಾಯ ಮಾಡಿ. ಐದು ವರ್ಷಕ್ಕೊಂದು ಸಲ ಈ ಜನರ ಹತ್ತಿರ ಹೋಗಿ ಓಟಿನ ಭಿಕ್ಷೆಯನ್ನು ಬೇಡುತ್ತೀರಿ. ಅನಂತರ ಅವರನ್ನು ವಿಚಾರಿಸುವುದೇ ಇಲ್ಲ. ಅವರಿಗೆ Foreign Scholarships ಅಂತೂ ಇಲ್ಲ, ಅದರ ಜೊತೆಗೆ Local Scholarships ಸಹ ಕೊಡುತ್ತಿಲ್ಲ. ಒಬ್ಬ ಗೊಲ್ಲರ ಹುಡುಗನಿಗೆ ಸ್ಕಾಲರ್‌ಷಿಪ್ ಆಗಲೀ ಫ್ರೀಷಿಪ್ ಆಗಲಿ ಕೊಟ್ಟಿಲ್ಲ. ಇಂಥ ಬಹಳ ಅಧೋಗತಿಯಲ್ಲಿರುವ ಜನರಿಗೆ ವಿದ್ಯಾಭ್ಯಾಸ ಮಾಡಲು ಎಲ್ಲ ಸೌಲಭ್ಯಗಳನ್ನು ಕೊಡಿ ಎಂದು ಕೇಳುತ್ತೇನೆ.

Foreign Scholarships ಮತ್ತು Study leave concessions ಸರಿಯಾಗಿ ಕೊಟ್ಟಿಲ್ಲ. ನಾನು ಈ ವಿಚಾರವಾಗಿ ಮುಖ್ಯ ಕಾರ್ಯದರ್ಶಿಗಳಿಗೆ ಬರೆದು ಅದಕ್ಕೆ ಸಂಬಂಧಪಟ್ಟ ಕಾಗದ ಪತ್ರಗಳನ್ನು ಅವರಿಗೆ ಕಳಿಸಿದ್ದೇನೆ. ಅವರ ಮನಸ್ಸು ಬಹಳ ಒಳ್ಳೆಯದಿದೆ. ಆದರೆ ಸರ್ಕಾರಕ್ಕೆ ಮನಸ್ಸಿಲ್ಲ ಏನು ಮಾಡುವುದು. ನಾನು ಯಾರಮೇಲೆಯೂ ಉದ್ದೇಶ ಪೂರಿತವಾಗಿ ಟೀಕೆಗಳನ್ನು ಮಾಡುತ್ತಿಲ್ಲ.

ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ, ಈ ಬಡ್ಜೆಟ್ ಕುಂಠಿತ ಮಾಡತಕ್ಕ ಅನಾನುಕೂಲ ಮಾಡತಕ್ಕದ್ದಾಗಿರುವುದರಿಂದ ಇದನ್ನು ವಿರೋಧಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ

ಶ್ರೀ ಕೆ. ವಿ. ಗದಗ್ (ಗದಗ್).—ಮಾನ್ಯ ಅಧ್ಯಕ್ಷರೇ ನಮ್ಮ ಮುಂದಿರುವ ಬೇಡಿಕೆಗಳನ್ನು ಅನುಮೋದಿಸಿ, Sales-tax Administration ಮತ್ತು Sales-tax ಇವುಗಳ ಬಗ್ಗೆ ನಾನು ಕೆಲವು ಸಲಹೆಗಳನ್ನು ಈ ಮೂಲಕ ಮಾಡಬಯಸುತ್ತೇನೆ. ನಮಗೆ ಬರತಕ್ಕ ಆದಾಯಗಳಲ್ಲಿ ಸೇಲ್ಸ್ ಟ್ಯಾಕ್ಸ್ ಆದಾಯಕ್ಕಿಂತ ಹೆಚ್ಚು ಇನ್ನೊಂದಿಲ್ಲ. 1961-62 ರಲ್ಲಿ ಸೇಲ್ಸ್ ಟ್ಯಾಕ್ಸ್ ಒಟ್ಟು ಉತ್ಪನ್ನ 10,58,24,000 ರೂಪಾಯಿ ಇದೆ. ಜನರಲ್ ಸೇಲ್ಸ್ ಟ್ಯಾಕ್ಸ್‌ನಿಂದ 7,23,37,000 ರೂಪಾಯಿ Additional Excise duties in lieu of Sales-tax ನಿಂದ 1,37,10,000 ರೂಪಾಯಿ, Sales-tax on Motor Spirits ನಿಂದ 1,13,83,000 ರೂಪಾಯಿ Interstate Sales-tax ನಿಂದ 83,94,000 ರೂಪಾಯಿ—ಈ ಪ್ರಕಾರ 10,58,24,000 ರೂಪಾಯಿ ಒಟ್ಟು ಸೇಲ್ಸ್ ಟ್ಯಾಕ್ಸ್ ನಿಂದ ಉತ್ಪನ್ನವಿದೆ. ಆದಾಗ್ಯೂ ಬಡ್ಜೆಟ್ಟಿನ ಮೇಲಿನ ಚರ್ಚೆಯಲ್ಲಿ ಕಾಲಕ್ಕೆ ಕೆಲವು ಮಾನ್ಯ ಸದಸ್ಯರು ಕರವನ್ನು ಭರ್ತಿಮಾಡಲಿಕ್ಕೆ Sale-tax ಹೆಚ್ಚು ಮಾಡಬೇಕೆಂದು ಸಲಹೆ ಮಾಡಿದರು, ಮತ್ತು Sales-tax ನಲ್ಲಿರುವ ಕೆಲವು evasions ಏನಿದೆಯೋ ಅವುಗಳನ್ನು ತಡೆಗಟ್ಟಬೇಕೆಂಬ ಅಭಿಪ್ರಾಯ ವ್ಯಕ್ತ ಮಾಡಿದರು. ಆದರೆ Salestax evasion ಯಾವ ಸ್ವರೂಪದ್ದಿದೆ, ಯಾವ ಪ್ರಕಾರದ್ದಿದೆ, ಅವುಗಳನ್ನು ತಡೆಗಟ್ಟಲಿಕ್ಕೆ ಯಾವ ಕ್ರಮ ಕೆಗೆದುಕೊಳ್ಳಬೇಕು ಎನ್ನುವಂಥ ಒಂದು ಸಲಹೆಯನ್ನು, ವಿವರಣೆಗಳನ್ನು ವೇಳೆಯ ಅಭಾವದ ಕಾರಣ ಬಹುಶಃ ಕೊಟ್ಟಿರಲಿಕ್ಕಿಲ್ಲ. ಆದರೆ ಸೇಲ್ಸ್ ಟ್ಯಾಕ್ಸ್‌ನಲ್ಲಿ evasions ಇರುವುದು ಅಧಿಕಾರಿಗಳಿಗೂ ಮತ್ತು ಯಾವತ್ತು ಜನರಿಗೂ ವಿಶೇಷವಾಗಿ ಗೊತ್ತಿದೆ. ಇದೇ ಸಭೆಯಲ್ಲಿ ಒಂದು ಪ್ರಶ್ನೆಯನ್ನು ಚರ್ಚೆಮಾಡಿದ ಕಾಲಕ್ಕೆ A.P.M.C. ಇರುವ

(ಶ್ರೀ ಕೆ. ಪಿ. ಗದಗ್)

ತಿಪಟೂರು, ಅರಸೀಕೆರೆ ಮತ್ತು ಇತರ ಪಟ್ಟಣಗಳಲ್ಲಿ ಅನಾಯ್ಯಹತವಾಗಿ ಸೇಲ್ಸ್ ಟ್ಯಾಕ್ಸ್ ಕೊಡದೆ ಎಲ್ಲ ವ್ಯವಹಾರಗಳೂ ನಡೆಯುತ್ತಿವೆಯೆಂದು ಕೆಲವು ಮಾನ್ಯ ಸದಸ್ಯರು ಅಭಿಪ್ರಾಯವ್ಯಕ್ತಮಾಡಿದರು. ಇದು ನಿಜವಿರಲಿಕ್ಕಿಲ್ಲವೆಂದು ನನಗನ್ನಿಸಿತು. ಆದರೆ ವಿಚಾರ ಮಾಡಲಾಗಿ ಅದು ನಿಜದ ಸಂಗತಿ ಎಂದು ಕಾಣಿಸಿತು, ಇದು ಬಹಳ ಆಶ್ಚರ್ಯವಾದುದು ಆ ವ್ಯವಹಾರಗಳು ಯಾವರೀತಿ ನಡೆದಿವೆಯೆಂದರೆ ಅಲ್ಲಿ ಅನೇಕ ವ್ಯಾಪಾರಸ್ಥರ turn over 7,500 ಕ್ಕೆ ಹೆಚ್ಚಾಗಿ ಇದ್ದಾಗ್ಯೂ ಲೈಸೆನ್ಸ್ ತೆಗೆದುಕೊಂಡಿಲ್ಲ. Registered Dealer ಆಗಿಲ್ಲ. ಇದರಿಂದ ಅವರು ಸೇಲ್ಸ್ ಟ್ಯಾಕ್ಸ್‌ನಿಂದ ಮುಕ್ತರಾಗಿ, ಸೇಲ್ಸ್ ಟ್ಯಾಕ್ಸ್‌ಗೆ ಒಳಪಡದೆ, ತಮ್ಮ ವ್ಯವಹಾರಗಳನ್ನು ಈಗಲೂ ಸಾಗಿಸುತ್ತಿದ್ದಾರೆನ್ನುವುದು ನನಗೆ ಕೆಲವು ಮಟ್ಟಿಗೆ ಅಧಿಕೃತವಾಗಿ ಇಲ್ಲಿ ತಿಳಿಯಿತು. ಇದು ಒಂದು ಪ್ರಕಾರದ evasion. ತಿಪಟೂರು, ಅರಸೀಕೆರೆ ಮತ್ತು ಇತರ ಕಡೆಗಳಲ್ಲಿರುವ A. P. M. C. ನಲ್ಲಿ ಸಹ ಈ ತರಹ ವ್ಯವಹಾರಗಳಾಗುತ್ತಿವೆ ಎನ್ನುವುದು ನನಗೆ ಇಲ್ಲಿ ಈ ಸಭಾಗೃಹದಲ್ಲಿ ತಿಳಿಯಿತು. ಯಾವ ಪ್ರಕಾರ evasion ಆಗುತ್ತದೆ ಎನ್ನುವುದು ಅವರ ಕಡೆ ಚರ್ಚೆಮಾಡಿದ ಮೇಲೆ, ಸಂಗತಿ ತಿಳಿದು ನಿಜವಾಗಿಯೂ ಆಶ್ಚರ್ಯವಾಯಿತು. ಈ ಪ್ರಕಾರವಾಗಿ evasion ಇದ್ದರೆ, ಇದರ ಬಗ್ಗೆ ಸೇಲ್ಸ್ ಟ್ಯಾಕ್ಸ್ ಅಧಿಕಾರಿಗಳು ಏನಾದರೂ ವಿಚಾರ ಮಾಡುತ್ತಾರೆಯೋ ಇಲ್ಲವೋ ಎನ್ನುವ ಸಂಶಯ ಬರುತ್ತದೆ. ಇಷ್ಟನ್ನು ಮಾತ್ರ ನಾನು ಹೇಳಬಲ್ಲೆ. ಇದೊಂದು ಪ್ರಕಾರದ evasion. ಇದು ನಿಜಸಂಗತಿಯಾಗಿದ್ದಲ್ಲಿ ಇದಕ್ಕೆ ಉತ್ತರ ಕೊಡುವರೋ ಎಂದು ನೋಡೋಣ.

ಶ್ರೀ ಟಿ. ಮರಿಯಪ್ಪ.--ಈ ವಿಚಾರ ಸರ್ಕಾರದ ಗಮನಕ್ಕೆ ಬಂದು, ಒಂದು ಸರ್ಕ್ಯುಲರ್ ಹೊರಡಿಸಲಾಗಿದೆ. ರೆಗುಲೇಟೆಡ್ ಮಾರ್ಕೆಟ್ಟಿನಲ್ಲಿ ಸೇಲ್ಸ್ ಟ್ಯಾಕ್ಸ್ ಅಧಿಕಾರಿಗಳು ಹೋಗಿ ತನಿಖೆ (check) ಮಾಡುವುದಕ್ಕೆ ಅವಕಾಶವಿರಬೇಕೆಂದು ಸೂಚನೆಕೊಟ್ಟಿದ್ದೇವೆ.

ಶ್ರೀ ಕೆ. ಪಿ. ಗದಗ್.—A. P. M. C. ಯಲ್ಲಿ 7,500 ರೂಪಾಯಿ turn over ಇದ್ದಂಥ ವ್ಯಾಪಾರಸ್ಥರು ಸಹ ಸೇಲ್ಸ್ ಟ್ಯಾಕ್ಸ್ ಕೊಡದೆ ಅವ್ಯಾಹತವಾಗಿ ವ್ಯಾಪಾರ ಮಾಡುವರೆನ್ನುವುದು ನಿಜವಿದ್ದಲ್ಲಿ ಸೇಲ್ಸ್ ಟ್ಯಾಕ್ಸ್ ಅಧಿಕಾರಿಗಳು ತಮ್ಮ ಕರ್ತವ್ಯವನ್ನು ತಮ್ಮ ಹೊಣೆಯನ್ನು ನಿರ್ವಹಿಸುತ್ತಿಲ್ಲವೆನ್ನುವುದಕ್ಕೆ ಯಾವ ಅಭ್ಯಂತರವೂ ಇಲ್ಲವೆನ್ನುವುದು ನನ್ನ ಅಭಿಪ್ರಾಯ.

5-30 P.M.

ಇನ್ನೊಂದು ಪ್ರಕಾರದ evasions ಎನ್ನುವುದು ಇದೆ ಎಂದು ಹಿಂದೊಮ್ಮೆ ನಾನು ಮಾತನಾಡಿದಾಗ ನನ್ನ ಅಭಿಪ್ರಾಯವನ್ನು ವ್ಯಕ್ತಮಾಡಿದ್ದೆ. ಇಡೀ ಪ್ರಾಂತದಲ್ಲಿ ಈ ವ್ಯವಹಾರ ಅವ್ಯಾಹತವಾಗಿ ನಡೆಯುತ್ತ ಬಂದಿದೆ. ಖರೀದಿ ಪಟ್ಟಿ ಮತ್ತು ವಿಕ್ರಿ ಪಟ್ಟಿ ಎಂದು ಕೆಲವು ಜನರು ಲೆಕ್ಕಪತ್ರಗಳನ್ನು ಬರೆಸುತ್ತಾರೆ ಇದರಲ್ಲಿ ಬರೆಯುವಾಗ ಕೆಲವು ಅಂಶಗಳನ್ನು ಬರೆಯಿಸುವುದಿಲ್ಲ ಒಂದು ಕಡೆ ಎಲ್ಲಾ ವ್ಯವಹಾರವನ್ನು ಇನ್ನೊಂದು ಕಡೆ ವ್ಯವಹಾರ ಮಾಡುವಾಗ ಲೆಕ್ಕ ಬರೆಸುವುದಿಲ್ಲ ಇಂತಹ ವ್ಯವಹಾರ ಈಗಲೂ ನಡೆಯುತ್ತಿವೆ. ಈ ರೀತಿ ಬೆಂಗಳೂರಿನಲ್ಲೂ ಕೂಡ ಬಂಗಾರದ ವ್ಯವಹಾರ ಮಾಡುವಾಗ ನಡೆಯುತ್ತಿದೆ ಎಂದು ಅಧಿಕೃತವಾಗಿ ತಿಳಿದಿದೆ. ಇದನ್ನು ಅಧಿಕಾರಿಗಳು ಹೋಗಿ ವಿಚಾರಿಸುವುದು ಯೋಗ್ಯವಾಗಿದೆ ಎಂದು ನಾನು ಇಲ್ಲಿ ಅಧ್ಯಕ್ಷರ ಮೂಲಕ ಮಾನ್ಯ ಹಣಕಾಸಿನ ಮಂತ್ರಿಗಳ ಗಮನಕ್ಕೆ ಅರುಹುತ್ತಿದ್ದೇನೆ.

ಶ್ರೀ ಟಿ. ಮರಿಯಪ್ಪ.—ಹಿಂದೆ ಒಂದು ಸಾರಿ ಈರೀತಿಯಾದ ಕಂಪ್ಲೇಂಟು ಬಂದಿತ್ತು. ಈ ವ್ಯವಹಾರವೆಲ್ಲಾ ರೈಲಿನಲ್ಲಿ ಹೋಗುವಾಗ ಆಗುತ್ತಿತ್ತು ಎಂದು ತಿಳಿದು ಅವರ ಲೆಕ್ಕಪತ್ರಗಳು ಏನು ಇವೆ ಎನ್ನುವುದಕ್ಕಾಗಿ ನಾವು C.I.D. ಗಳನ್ನು ಕೂಡಹಾಕಿ ನೋಡಿದರು ಅವರು ಸಿಗಲಿಲ್ಲ.

ಶ್ರೀ ಕೆ. ಪಿ. ಗದಗ್.—ಈ ಚಿನ್ನದ ವ್ಯಾಪಾರದ ವ್ಯವಹಾರದಲ್ಲಿ ಈ ರೀತಿಯಾದ ಅನೇಕ ಪ್ರಕರಣಗಳು ನಡೆಯುತ್ತಿರುವುದು ಸಾಮಾನ್ಯವಾಗಿ ಸಾರ್ವಜನಿಕರಿಗೂ ಅಧಿಕಾರಿಗಳಿಗೂ ಗೊತ್ತಿದೆ. ಇದನ್ನು ಯಾವ ಕ್ರಮದಿಂದ ಕಂಡುಹಿಡಿಯಬೇಕು ಮತ್ತು ತಡೆಗಟ್ಟಲಿಕ್ಕೆ ಏನು ಮಾಡಬೇಕು ಎನ್ನುವುದರ ಬಗ್ಗೆ ಮುಂದೆ ಕೆಲವು ಸೂಚನೆಗಳನ್ನು ಮಾಡುತ್ತೇನೆ.

ಇನ್ನೊಂದು ತರಹದ Evasions ಅದೆ. ಅದು ನಮ್ಮ ಕ್ಷೇತ್ರದಲ್ಲಿದೆ, ಬರೀ ಉತ್ತರ ಕರ್ನಾಟಕದಲ್ಲಿದ್ದವರು ಈ ರೀತಿ ದಕ್ಷಿಣ ಭಾಗದ ಕರ್ನಾಟಕದ ಮೇಲೆ ಹೇಳುತ್ತಾರೆ ಎಂದು ಯಾರೂ ಭಾವಿಸಬಾರದು. ಅದು ಹಾಗೇನಿಲ್ಲ. ಇದು ಎಲ್ಲಕಡೆಗಳಲ್ಲಿಯೂ ಅದೆ. ಅದೇನೆಂದರೆ, ಸರಕಾರದವರು Baby Industries ಎಂದು ಸಣ್ಣ ಸಣ್ಣ ಉದ್ಯಮಗಳನ್ನು ಸ್ಥಾಪನೆ ಮಾಡಲಿಕ್ಕಾಗಿ ಜನಕ್ಕೆ ಸ್ವಲ್ಪ ಸವಲತ್ತುಗಳನ್ನು ಕೊಟ್ಟಿದ್ದಾರೆ. ಇದೇನೋ ಉತ್ತಮ. ಆದರೆ ಈಗ ಸೇಂಗಾದ ಮೇಲೆ ಟ್ಯಾಕ್ಸನ್ನು ಕೊಡಬೇಕಾಗುತ್ತದೆ ಎಂದು ರೈತ ಅದನ್ನು ಮನೆಗೆ ತೆಗೆದು ಕೊಂಡು ಬರುತ್ತಾನೆ. ಅದರ ಮೇಲೆ ಸೇಲ್ಸ್ ಟ್ಯಾಕ್ಸನ್ನು ಕೊಡಬೇಕಾಗುತ್ತದೆ ಎಂದು ಸಣ್ಣ ಸಣ್ಣ ವ್ಯಾಪಾರಸ್ಥರು ನಮ್ಮಲ್ಲಿನ ಲೆಕ್ಕಕ್ಕೂ ಬರೆಯಬೇಡಿ ಕೊಳ್ಳುವ ಕಡೆ ಲೆಕ್ಕ ಬರೆಯಬೇಡಿ ಎಂದು ಬರೀ ವ್ಯಾಪಾರ ಮಾಡುತ್ತಾರೆ. ಇದನ್ನು ಹೋದಸಾರಿ ಮಾತನಾಡುವಾಗಲೂ ಹೇಳಿದ್ದೆ. ಈ ತರಹ Evasions ಕಂಡುಬಂದಾಗ ನನಗನಿಸುವುದು ಇದನ್ನು ತಡೆಗಟ್ಟಲಿಕ್ಕೆ ಅಥವಾ ಕಡಿಮೆ ಮಾಡಲಿಕ್ಕೆ ಅಷ್ಟೇನು ಕಾರ್ಯಕ್ರಮ ತೆಗೆದುಕೊಂಡಂತೆ ಕಂಡುಬಂದಿಲ್ಲ.

ಶ್ರೀ ಟಿ. ಮರಿಯಪ್ಪ.—ತೆಗೆದುಕೊಂಡಿದ್ದೇವೆ. ಹೋಗಿ ನೋಡುವಾಗ ಬರಿ ಬೋರ್ಡ್ Crushing for hire ಎಂದು ಹಾಕಿಬಿಡುತ್ತಾರೆ.

We will positively try to see that Evasions is stopped.

ಶ್ರೀ ಕೆ. ಪಿ. ಗದಗ್.—ಇದೇ ಪ್ರಕಾರ Evasions ಗಳು ಇನ್ನೂ ಅವೆ. ಹೀಗೆ ಇದುವರೆಗೆ ನಡೆದುಬಂದಿದೆ. ಇವುಗಳನ್ನು ತಡೆಗಟ್ಟುವುದಕ್ಕೆ ಕೆಲವು ಕಾರ್ಯಕ್ರಮಗಳನ್ನು ತೆಗೆದುಕೊಳ್ಳ ಬೇಕಾಗುತ್ತದೆ. ಈ ಬಗ್ಗೆ ಕೆಲವು ಸೂಚನೆಗಳನ್ನು ಇಲ್ಲಿ ಹೇಳಬಯಸುತ್ತೇನೆ. ತಮಗೆ ಯೋಗ್ಯ ವಿದ್ದುದನ್ನು ವಿಚಾರ ಮಾಡಬಹುದು. ಅಥವಾ ಬಿಡಬಹುದು. ಇದನ್ನು ಮಾಡಿದರೆ ನನಗೆ ತಿಳಿದಮಟ್ಟಿಗೂ ಉತ್ಪನ್ನ ಹೆಚ್ಚುತ್ತದೆ. ಸ್ವಲ್ಪಮಟ್ಟಿಗೆ ಅದರ ವಿಚಾರವೇನು ಎನ್ನುವುದನ್ನು ಈ ಮಾನ್ಯ ಸಭೆಯಮುಂದೆ ಹೇಳುತ್ತೇನೆ.

ಸೇಲ್ಸ್ ಟ್ಯಾಕ್ಸ್ ಅಧಿಕಾರಿಗಳು ಬರುತ್ತಾರೆಂದು ವ್ಯಾಪಾರಸ್ಥರೂ ಕೂಡ ಸ್ವಲ್ಪ ಹೆಚ್ಚು ಕೊಡಬೇಕಾಗುತ್ತದೆ ಎಂದು ಲೆಕ್ಕವನ್ನೇ ಬರಿಸುವುದಿಲ್ಲ. ಸರಿಯಾದ ಲೆಕ್ಕ ಬರೆಯದೇ ಏನೋ ಒಂದು ರೀತಿಯ ಲೆಕ್ಕ ಬರೆದು ತೋರಿಸುತ್ತಾರೆ. ಇದರಲ್ಲಿ ತಪ್ಪಿದೆ ಎನ್ನುವುದು ಮನವರಿಕೆ ಯಾದರೆ ಸಂಶಯ ಬಂದರೆ ಅಂತಹವರ ಅಂಗಡಿಗಳನ್ನು Raid ಮಾಡಬೇಕು. ಇವೊತ್ತಿನವರೆಗೂ ಈ ರೀತಿ Raids ಮಾಡಿಲ್ಲ ಅಧಿಕಾರಿಗಳಿಗೆ Raid ಮಾಡಲಿಕ್ಕೆ ಅಧಿಕಾರವಿದೆ ಇದನ್ನು ಮಾಡ ಬಹುದು.

ಮತ್ತೊಂದು ಸೂಚನೆ ಪ್ರತಿಯೊಂದು ಡಿಸ್ಟ್ರಿಕ್ಟಿಗೂ ಒಬ್ಬೊಬ್ಬರು Investigating sales tax Officer ಎನ್ನುವ ಅಧಿಕಾರಿಗಳಿರಬೇಕು. ಈರೀತಿಯಾಗಿರುವ ಅಧಿಕಾರಿಗಳು ಕೆಲವು ಬೇರೆ ಪ್ರಾಂತಗಳಲ್ಲಿದ್ದಾರೆ. ಎಂದು ಕೇಳುತ್ತೇನೆ. ಇಂತಹವರನ್ನು ಮಾಡಿದರೆ ಬಹಳ ಸಹಾಯ ವಾಗುತ್ತದೆ.

ಶ್ರೀ ಟಿ. ಮರಿಯಪ್ಪ.—ನಾವು ಮಾಡಿದ್ದೇವೆ. We have appointed two Officers.

Sri K. P. GADAG.—Two are not enough there must be eight or ten.

ಮತ್ತೊಂದು ಈ ಆಫೀಸರುಗಳಿಂದ ಯಶಸ್ವಿಯಾಗಿ Evasionಗಳು ಪತ್ತೆಯಾಗಿದ್ದರೆ ಅಂತಹ ಅಧಿಕಾರಿಗಳಿಗೆ ಪ್ರೋತ್ಸಾಹ ಕೊಡಬೇಕು. ಅವರೂ ಇನ್ನೂ ಹೆಚ್ಚಾಗಿ ಚೆನ್ನಾಗಿ ಆಸೆಯಿಂದ ಕೆಲಸ ಮಾಡತಕ್ಕ ಆಫೀಸರುಗಳಾಗಿದ್ದಾರೆ ಅವರಿಗೆ ಪ್ರೋತ್ಸಾಹ ಕೊಡಲು ಪ್ರಮೋಷನ್ ಕೊಡಬೇಕು. ಅಂತ ಅವರಿಗೆ ಪ್ರೋತ್ಸಾಹ ಕೊಟ್ಟರೆ ಇನ್ನೂ ಆಸಕ್ತಿಯಿಂದ ಕೆಲಸ ಮಾಡುತ್ತಾರೆ. ಇಂತಹ ಒಂದು ಕಾರ್ಯಕ್ರಮ ನಡೆಸಿದರೆ ಈಗ ಹೇಳುವ 11 ಕೋಟಿ 57 ಲಕ್ಷಕ್ಕಿಂತ ಇನ್ನೂ ಒಂದೂವರೆ ಅಥವಾ ಎರಡು ಕೋಟಿಯಷ್ಟು ಉತ್ಪನ್ನ ಹೆಚ್ಚುತ್ತದೆಂದು ನನಗನಿಸುತ್ತದೆ. ಇದರಿಂದ ಮುಂದೆ Evasionಗಳನ್ನು ತಡೆಗಟ್ಟಲು ಅನುಕೂಲವಾಗುತ್ತದೆಂದು ನಾನು ತಿಳಿಯುತ್ತೇನೆ. ನನಗೆ ತಿಳಿದಮಟ್ಟಿಗೆ ಈ ಸೇಲ್ಸ್‌ಟ್ಯಾಕ್ಸ್ ಆಫೀಸರುಗಳಿಗೆ ಬಹಳ ಕೆಲಸವಿದೆ. ಇವರು ಎರಡು, ಮೂರು ವರ್ಷಗಳ ಹಿಂದಿನ ಲೆಕ್ಕ, Returns ಎಲ್ಲಾ ನೋಡಬೇಕು. ಮತ್ತು ಅನೇಕ ಕಡೆ ಪ್ರಶ್ನೆ ಹಾಕಿ ಪತ್ರವಹಾರ ಮಾಡಬೇಕು. ಇವಕ್ಕೆಲ್ಲ ಲಕ್ಷ ಕೊಡಲಿಕ್ಕೆ ಎಷ್ಟೊಂದು ಕಾಲದ ಅವಧಿ ಬೇಕು. ಇದರಿಂದ ಅವರಿಗೆ ಅವಕಾಶ ಸಿಗುತ್ತಿಲ್ಲ ಎನ್ನುವ ಸಂಶಯ ಕಾಣುತ್ತದೆ. ಇದಕ್ಕಾಗಿ ಪ್ರತ್ಯೇಕವಾದ ಒಬ್ಬ Sales-tax Officer ಎಂದು ಪ್ರತಿ ಜಿಲ್ಲೆಗೂ ನೇಮಕ ಮಾಡಬೇಕೆಂದು ನನ್ನ ಅಭಿಪ್ರಾಯ

ಇನ್ನೊಂದು ವಿಷಯ. ಈಗ ಕೆಲವು ತಜ್ಞರು ಒಂದು ವಿಚಾರ ಮಾಡಲಿಕ್ಕೆ ಹತ್ತಿದ್ದಾರೆ. ಅದು ಏನೂ ಹೊಸದಲ್ಲ. ಸೇಲ್ಸ್‌ಟಾಕ್ಸ್ ಏನಿದೆ ಅದನ್ನು ಕೇಂದ್ರ ಸರ್ಕಾರಕ್ಕೆ ಕೊಡಬೇಕೋ, ಬೇಡವೋ ಎಂಬ ವಿಚಾರ ನಡೆದಿದೆ. ಈಗಾಗಲೇ ಇನ್‌ಕಂಟ್ಯಾಕ್ಸ್ ಕೇಂದ್ರ ಸರ್ಕಾರದವರ ಕೈಲಿದೆ. ಹಾಗೆಯೇ ಈ ಸೇಲ್ಸ್‌ಟ್ಯಾಕ್ಸನ್ನೂ ಸಹ ಕೊಡಬೇಕು ಎಂಬ ಬಗ್ಗೆ ಕೆಲವರು ತಜ್ಞರು ವಿಚಾರ ಮಾಡಲಿಕ್ಕೆ ಹತ್ತಿದ್ದಾರೆ. ಅವರು ಇದನ್ನು ಚೆನ್ನಾಗಿ ವಿಚಾರಮಾಡಲಿಕ್ಕೆ ಚೇಂಬರ್ ಆಫ್ ಕಾಮರ್ಸಿಗೆ ಕೊಡುವುದು ಒಳ್ಳೆಯದು ಎಂದು ಹೇಳಿದ್ದಾರೆ. ಇದರಲ್ಲಿ ಪೂರಾ ಕೊಡಬೇಕೋ ಸ್ವಲ್ಪ ಕೊಡಬೇಕೋ ಎಂಬ ವಿಚಾರ ಬಂದಿದೆ. ಕೆಲವನ್ನು ಕೊಡುವುದು, ಕೆಲವನ್ನು ಕೊಡುವುದು ಬೇಡ ಎಂದು ಭಿನ್ನಾಭಿಪ್ರಾಯವಿದೆ. ಈ ವಿಚಾರವನ್ನು ಕೇಂದ್ರಸರ್ಕಾರದವರು ಮತ್ತು ಪ್ರಾಂತ ಸರ್ಕಾರದವರೂ ಕೂಡ ಆದಷ್ಟು ಮಟ್ಟಿಗೆ ವಿಚಾರಮಾಡಬೇಕು. ಯಾವುದನ್ನು ಕೊಡಬೇಕು, ಯಾವುದನ್ನು ಕೊಡಬಾರದು ಎಂದು ಪ್ರಾಂತ ಸರ್ಕಾರದವರು ಯೋಚನೆಮಾಡಬೇಕು. ಪ್ರಾಂತ ಸರ್ಕಾರದವರು ಒಪ್ಪಿದ ಆ ವಿಚಾರವನ್ನು ಅಲ್ಲಿ ಯಾವರೀತಿ ಬಿಡಬೇಕೆಂದು ನನಗೆ ಆಶ್ಚರ್ಯವಾಯಿತು. ಅದು ಪೇಪರ್‌ನಲ್ಲಿ ನೋಡಿದ ಸಂಗತಿ. ಅದು ಅನಿವಾರ್ಯ, ಅದು ಒಂದು ಪ್ರತ್ಯೇಕವಾದ ಅಂಶವಾಗಿದೆ. ಇಡೀ ದೇಶದಲ್ಲಿ ಎಲ್ಲ ಕಾನೂನುಗಳು ಯೂನಿಫಾರಂ ಆಗಿ ಬರಬೇಕು ಎಂದು ಹೇಳುವಾಗ ಅದಕ್ಕೆ ತಕ್ಕ ಸಾಲಭ್ಯ ಬೇಕು. ಒಂದು ಪ್ರಾಂತ್ಯದೊಳಗೆ ಆದ ವ್ಯವಹಾರ, ಮತ್ತೊಂದು ಪ್ರಾಂತದಲ್ಲಿ ಆದ ವ್ಯವಹಾರ ಸರಿಯಾಗಿ ತಿಳಿಯುತ್ತದೋ ಇಲ್ಲವೋ ಗೊತ್ತಿಲ್ಲ. ಅದನ್ನು ತಿಳಿಯುವುದಕ್ಕೆ ಕಷ್ಟವಾಗಬಹುದು. ಈ ಪ್ರಾಂತದವರು ಬೊಂಬಾಯಿನಲ್ಲ ಮಾಡಿದ ವ್ಯವಹಾರವನ್ನು ಮುಚ್ಚುವುದಕ್ಕೆ ಕಠಿಣವಾಗುತ್ತದೆ. ನಾವು ಇಂತಹ ಐಟಂಗಳನ್ನು ಅವರಿಗೆ ಕೂಡಲೇ ಕೊಡಬೇಕು ಎಂದು ನಿರ್ದಿಷ್ಟವಾಗಿ ಹೇಳಲು ಅಷ್ಟು ಶಕ್ತರಲ್ಲ. ನಾನು ಹೇಳುವುದಿಷ್ಟೆ, ಈ ಬಗ್ಗೆ ತಜ್ಞರನ್ನು, ವ್ಯಾಪಾರಸ್ಥರನ್ನು, ಚೇಂಬರ್ ಆಫ್ ಕಾಮರ್ಸ್ ಅವರನ್ನು ವಿಚಾರಮಾಡಬೇಕು. ಮಾನ್ಯ ಸದಸ್ಯರು ಈ ಬಗ್ಗೆ ಸಲಹೆಗಳನ್ನು ಕೊಡುವುದು ಹಿತವೋ, ಅಹಿತವೋ ತಿಳಿಯಲ್ಲ. ಇದನ್ನು ಭಾರತ ದೃಷ್ಟಿಯಿಂದ, ದೇಶದ ಜನತೆಯ ದೃಷ್ಟಿಯಿಂದ, ಕನ್ಸ್ಯೂಮರ್ಸ್ ದೃಷ್ಟಿಯಿಂದ ಇದನ್ನು ಕೇಂದ್ರಸರ್ಕಾರಕ್ಕೆ ಕೊಡಬೇಕೇ ಬೇಡವೇ ಎಂಬುದನ್ನು ವಿಚಾರ ಮಾಡಬೇಕು. ಆದರೆ ಒಂದು ರೀತಿ ನೋಡಿದರೆ ಯೂನಿಫಾರಂ ಆಗುವಂತೆ ಒಂದು ಪ್ರಾಂತದ ವ್ಯವಹಾರ

ಇನ್ನೊಂದು ಪ್ರಾಂತಕ್ಕೆ ತಿಳಿಯುವ ಹಾಗೆ ಒಂದು ಅವಕಾಶವನ್ನು ಪ್ರಾಂತಸರ್ಕಾರದವರು ಮಾಡಿ ಕೊಡಬೇಕು. ಒಟ್ಟಿನಲ್ಲಿ ಇದನ್ನು ಕೇಂದ್ರ ಸರ್ಕಾರಕ್ಕೆ ಕೊಡುವುದು ಏಹಿತ ಎಂದು ನಾನು ಈ ಮೂಲಕ ಹೇಳಬಯಸುತ್ತೇನೆ.

ಇನ್ನೊಂದು ಮಹತ್ವದಸಂಗತಿ, ಅದೇನೆಂದರೆ ಸೇಲ್ಸ್‌ಟ್ಯಾಕ್ಸ್ ಆಕ್ಟಿನಲ್ಲಿ ಒಮ್ಮೊಮ್ಮೆ ಅಥವಾ ಅನೇಕಸಾರಿ ಕೆಲವು ಕಲಂಗಳನ್ನು ಸೇರಿಸಿದ್ದಾರೆ. ಅವು ಏಕಾರ್ಥ ಮತ್ತು ದ್ವಂದಾರ್ಥ ಬರುವಂತೆ ಇರುತ್ತವೆ. ಆ ಕಲಂಗಳಲ್ಲಿ ಒಂದೊಂದರ ತಾತ್ಪರ್ಯ ಒಂದು ರೀತಿ ಇದ್ದರೆ ಅದರ ಅರ್ಥವೇ ಒಂದು ರೀತಿ. ಹೀಗೆ ಕೆಲವು ಪದಗಳು ಅದರಲ್ಲಿ ಬಂದಿವೆ. ಇಂತಹ ಸಂದರ್ಭದಲ್ಲಿ ಅಧಿಕಾರಿಗಳು ಸಾರ್ವಜನಿಕರಿಗೂ ಮತ್ತು ವ್ಯಾಪಾರಸ್ಥರಿಗೂ ಯಾವ ರೀತಿಯ ಗೊಂದಲವಾಗ ದಂತೆ ಒಂದು ನೀತಿಯಿಂದ ನ್ಯಾಯದಿಂದ ಸರಳವಾದ ರೀತಿಯಲ್ಲಿ ನಮ್ಮ ಕಾನೂನು ಅರ್ಥಹೀಗಿದೆ, ಹಾಗಿದೆ ಎಂದು ಸರ್ಕಾರದವರು ಹೇಳುವದಾರಿ ಯೋಗ್ಯವೆಂದು ನಾನು ತಿಳಿಯುತ್ತೇನೆ. ಆದರೆ ಇಂತಹ ಸಂದರ್ಭದಲ್ಲಿ ನಮ್ಮ ಸರ್ಕಾರದವರು ಮತ್ತು ಸಂಬಂಧಪಟ್ಟ ಇಲಾಖೆಯವರು ಇದ್ದ ಸಂಗತಿಯನ್ನು ಸರಿಯಾಗಿ ಜನಗಳಿಗೆ ತಿಳಿಸಬೇಕು. ಇಲ್ಲದಿದ್ದರೆ ಸರ್ಕಾರದವರು ಆ ಕಲಂಗಳನ್ನು ಸರಿಯಾಗಿ ಅರ್ಥಮಾಡುವ ಗೋಜಿಗೆ ಹೋಗದೆ ಅವರು ಈ ವಿಷಯಗಳನ್ನು ದ್ವಂದಾರ್ಥ ಬರುವ ಹಾಗೆ ಮಾಡಿದ್ದಾರೆಂದು ನಾನು ಹೇಳಬೇಕಾಗುತ್ತದೆ. ಅದು ಯಾವ ಸಂದರ್ಭ, ಯಾವ ಕಲಂ, ಏನಾಗಿದೆ ಎನ್ನುವುದನ್ನು ನಾನು ಸ್ವಲ್ಪ ಇಲ್ಲಿ ಹೇಳಬೇಕಾಗಿದೆ. ಅದನ್ನು ಇಲ್ಲಿ ಪ್ರಸ್ತಾಪಮಾಡುತ್ತೇನೆ. ಸರಕುಗಳ ಪೈಕಿ ಸೆಂಗಾ ಮತ್ತು ಹತ್ತಿಯನ್ನು ಒಂದು ಪ್ರಾಂತ್ಯದಿಂದ ಮತ್ತೊಂದು ಪ್ರಾಂತ್ಯಕ್ಕೆ ವಿಕ್ರಯಮಾಡಲಿಕ್ಕೆ ಕಳುಹಿಸಿದರೆ ಆಗ ಕನ್‌ಸೈನ್‌ಮೆಂಟ್ ಬೇಸಿಸ್ ಮೇಲೆ ವ್ಯಾಪಾರಸ್ಥನಮೇಲೆ ತೆರಿಗೆ ಬೀಳುತ್ತದೋ ಇಲ್ಲವೋ ಎನ್ನುವುದು ಒಂದು ವಿಷಯ ಈಗ ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅದನ್ನು ನೀವು ಪಾರ್ಟಿಮುಂದೆ ತಂದಿದ್ದರೆ ಚೆನ್ನಾಗಿತ್ತು.

ಶ್ರೀ ಕೆ. ಪಿ. ಗದಗ್.—ಪಾರ್ಟಿಮುಂದೆ ತಂದಿಲ್ಲ. ಅದನ್ನು ಒಂದು ರೀತಿ ಬೇರೆ ಟೈಂನಲ್ಲಿ ಚರ್ಚೆ ಮಾಡುತ್ತೇವೆ. ನಮ್ಮ ಪ್ರಾಂತದಿಂದ ಬೇರೆ ಪ್ರಾಂತಕ್ಕೆ ಸೆಂಗಾ ಮತ್ತು ಹತ್ತಿಯನ್ನು ಕಳುಹಿಸುವ ಬಗ್ಗೆ ನಿಮ್ಮ ಕಲಂನಲ್ಲಿ ಹೇಳಿರುವುದು ತಪ್ಪು. ದ್ವಂದಾರ್ಥ ಮತ್ತು ಏಕಾರ್ಥಗಳು ಬರುವಂತಹ ವಾಕ್ಯ ಡೆಫಿನಿಷನ್ನಿನಲ್ಲಿ ಹೇಳಿದೆ. ಆದ್ದರಿಂದ ಈ ಸೆಕ್ಷನ್ ಇನ್ನೊಂದು ಸಾರಿ ನೋಡಿ. ಏಕೆಂದರೆ ವ್ಯಾಪಾರಸ್ಥರು, ಚೆಂಬರ್ ಆಫ್ ಕಾಮರ್ಸ್‌ನವರು ಅನೇಕರು ನಾನು ಹೇಳಿದಪ್ರಕಾರ ತೆರಿಗೆ ಬೀಳುತ್ತದೋ ಇಲ್ಲವೋ ಎಂಬುದನ್ನು ಸ್ಪಷ್ಟಮಾಡುವುದು ಉಚಿತವೆಂದು ಹೇಳುತ್ತಾರೆ. ಮಂತ್ರಿಗಳು ಹುಬ್ಬಳ್ಳಿಗೆ ಬಂದಾಗ ಪತ್ರವ್ಯವಹಾರದಿಂದ ಸೇಲ್ಸ್‌ಟ್ಯಾಕ್ಸ್ ಕಮಿಷನರ್ ಅವರಿಗೆ ಈ ವಿಚಾರವಾಗಿ ರೆಪ್ರೆಸೆಂಟ್ ಮಾಡಿದಮೇಲೆ ಈ ವಿಷಯವನ್ನು ಮತ್ತು ಕೆಲವು ಕಲಂಗಳನ್ನು ಸ್ಪಷ್ಟಮಾಡಬೇಕಾಗುತ್ತದೆಂದು ನಾನು ಹೇಳಿದೆ. ಆ ರೀತಿ ಸ್ಪಷ್ಟಮಾಡುವಾಗ ಕರ್ಣಾಟಕ ಚೆಂಬರ್ ಆಫ್ ಕಾಮರ್ಸ್ ಅವರು ಮಾನ್ಯ ಆರ್ಥಿಕ ಸಚಿವರಿಗೆ ಒಂದು ಪತ್ರ ಬರೆದಿದ್ದಾರೆ. ಆ ಪತ್ರದ ಕಾಪಿಯನ್ನು ನನಗೂ ಕಳುಹಿಸಿದ್ದಾರೆ. ಆ ಪತ್ರದಲ್ಲಿ ಏನು ಬರೆದಿದ್ದರು ಎಂಬುದನ್ನು ಎರಡು-ಮೂರು ವಾಕ್ಯಗಳಲ್ಲಾದರೂ ನಾನೀಗ ಹೇಳಬೇಕಾಗಿದೆ. Clarifications under the Sales-tax Act 1956 57.

When you had visited Hubli in 1957 after the passing of the Sales-tax Act, you had assured that purchases of declared goods which to be consigned to places outside the State for sale in those places would not be lable to tax either under the Central Sales–tax Act or under the Mysore Sales-tax Act. The merchants association at Ranibennur had also sought

(Sri K. P. GADAG)

clarification on this point from the Commissioner of Sales-tax, Bangalore in conformity with your assurance given in Hubli, the Commissioner of Sales-tax gave a written clarification under the Central Law or under the Local Law.

"With reference to your letter dated 18th September 1957 I have inform you that goods consigned to commission agent at Bombay by Ranibennur Merchants on cosignment basis do not attract the levy of sales-tax under the Central Sales-tax Act 1956. As such your dealers cannot expect dealers to give a declaration under the Central Sales-tax."

Goods consigned to Bombay will not be liable to tax under the Mysore Sales-tax. Act, 1957

ಇದನ್ನು ಸ್ಪಷ್ಟವಾಗಿ ಲಿಖಿತದೊಳಗೆ ಸೇಲ್ಸ್‌ಟ್ಯಾಕ್ಸ್ ಕಮಿಶನರು ತಿಳಿಸಿದ್ದಾರೆ. ಫೈನಾನ್ಸ್ ಮಿನಿಸ್ಟರು ಹುಬ್ಬಳ್ಳಿಗೆ ಬಂದಾಗ ಚೇಂಬರ್ ಆಫ್ ಕಾಮರ್ಸಿನವರು ಅವರಿಗೆ ಬರೆದಿದ್ದಾರೆ. ಸೆಕ್ರೆಟರಿ ಸೈನ್ ಮಾಡಿದ ಪತ್ರದ ನಕಲು ಇದೆ, ಬೆಳಗಾಂ ಡೆಪ್ಯುಟಿ ಕಮಿಶನರವರ ಕೂಡ ಚರ್ಚೆ ಮಾಡಿದೆವು. ಡೆಪ್ಯುಟಿ ಕಮಿಶನರು ಕಮಿಶನರು ಪುಟ್ಟರಂಗಸ್ವಾಮಿಯವರು ಅಲ್ಲಿಗೆ ಬಂದಿದ್ದಾಗ ವ್ಯವಹರಿಸಿ ಮೊದಲೇ ಸೇಲ್ಸ್‌ಟ್ಯಾಕ್ಸ್ ಹಾಕಿದ್ದರೆಂದು ಹೇಳಿದ್ದಾರೆ. ಅನ್ನುವುದೂ ಪತ್ರದಲ್ಲಿದೆ ವಾಸ್ತವವಾಗಿ ಇಂತಹ ಪರಿಸ್ಥಿತಿ ಇದ್ದರೂ ಏನಾಯಿತು ಎಂದರೆ ಅಮೆಂಡ್‌ಮೆಂಟ್ ಮೇಲೆ 1958 ರಲ್ಲಿ ಸ್ವಲ್ಪ ಬದಲಾಯಿತು. 1957–58ರ ವ್ಯವಹಾರವ ಕಳುಹಿಸಿದರೆ, ಇನ್‌ಸ್ಟ್ರಕ್ಷನ್ಸ್ ಮೇಲೆ ಟ್ಯಾಕ್ಸ್ ಹಾಕಿದ್ದರೆಂದು ನಾನು ಕೇಳಿದೆ. ಡಿಪಾರ್ಟಮೆಂಟಿನವರು ಏನು ಜಬಾಬು ಕೊಟ್ಟರೆಂದರೆ "ನಮ್ಮ ಕರ್ತವ್ಯ ಅಸೆಸ್ ಮಾಡುವುದು, ಜ್ಯುಡಿಶಿಯಲ್ ಡಿಪಾರ್ಟ್‌ಮೆಂಟಿನವರು ಇಂಟರ್‌ಪ್ರೆಟ್ ಮಾಡಿ ಕೋರ್ಟಿಗೆ ಹೋಗಬೇಕು." ಕ್ಷಮಿಸಬೇಕು ವ್ಯಾಪಾರಸ್ಥರನ್ನು ಒಂದು ರೀತಿ ನೀವು ಮಿಸ್‌ಲೀಡ್ ಮಾಡಿದಿರಿ. ಡಿಪಾರ್ಟ್‌ಮೆಂಟಿನವರು ಸ್ಪಷ್ಟವಾದ ಹೇಳಿಕೆ ಕೊಟ್ಟಿದ್ದರು. ಏನೇ ಇರಲಿ ಮಾನ್ಯ ಅಧ್ಯಕ್ಷರ ಮುಖಾಂತ ಫೈನಾನ್ಸ್ ಮಿನಿಷ್ಟರಿಗೆ ಕೇಳುಕೊಳ್ಳುವುದೇನೆಂದರೆ, ಎಲ್ಲಾ ನಿಜಸಂಗತಿ ಗಮನಕ್ಕೆ ತೆಗೆದು ಕೊಂಡು, ಈ ಸಂಧರ್ಭದಲ್ಲಿ ಏನು ಮಾಡಬೇಕು, ಯಾವ ವಿಧಾನ, ಯಾವವ ಕ್ರಮ ಕೈಗೊಂಡರೆ ಅದು ಒಂದು ನೀತಿಯ ದೃಷ್ಟಿಯಿಂದ ನ್ಯಾಯ ದೃಷ್ಟಿಯಿಂದ ಸರಿಯಾದೀತು ಎನ್ನುವುದನ್ನು ನೋಡಬೇಕು. ಈಗ ಪರಿಸ್ಥಿತಿ ಉತ್ಪತ್ತಿಯಾಗಿದೆ. ಅಲ್ಲಿ ವ್ಯಾಪಾರಸ್ಥರು ಒಂದು ತರಹ ಕಳೆದುಕೊಂಡಂತಾಗಿದೆ ಅವರ ವಾದ: ನಾವು ಇಷ್ಟೊಂದು ಅಂಜಿ, ವಿಧೇಯರಾಗಿ ಸೇಲ್ಸ್ ಟ್ಯಾಕ್ಸ್ ಕೊಡುವುದು ನಮಗೆ ಈ ರೀತಿ ಪ್ರತಿಫಲ! ಆದ್ದರಿಂದ ಅಲ್ಲಿ ಪರಿಸ್ಥಿತಿ ನಿಜವಾಗಿ ಸ್ವಲ್ಪ ಅಲೋಚನೆಗೆ ಕಾರಣವಾಗಿದೆ, ನಿಜ ಸಂಗತಿಯನ್ನು ತಿಳಿದು ಕೊಂಡು ಸೂಕ್ತವಾದ ಕಾರ್ಯಕ್ರಮಗಳಿಂದ ಸರಿಮಾಡಬೇಕೆಂದು ಅರ್ಥ ಸಚಿವರನ್ನು ನಾನು ಕೇಳಿಕೊಳ್ಳುತ್ತೇನೆ.

Sri M. R. PATIL.—The point is this: So far as the party is concerned, between the original Act and the amendment, how much time elapsed?

Sri K. P. GADAG.—Fifteen months. ಇನ್ನೊಂದು ಸಂಗತಿ ನಾನು ಈ ಮಾನ್ಯ ಸಭೆಯ ಗಮನಕ್ಕೆ ತರುತ್ತೇನೆ. ಈಗ ಅಸೆಸ್ ಮಾಡುವುದು ಆಗಿದೆ. V Schedule Item No. 29 Fire-wood and charcole that is sold for domatic use ಇದು Exumpt list ನಲ್ಲಿದೆ when should for domestic use, ಟ್ಯಾಕ್ಸ್ ಇಲ್ಲ ಬಹಳ ವಿಚಿತ್ರ ನಡೆದಿದೆ. ನಮ್ಮಲ್ಲಿ ಮಲ್ಟಿ ಪಾಯಿಂಟ್ ಆಗಿ ಬೀಳುತ್ತಿದೆ. ನಮ್ಮಲ್ಲಿ ರೋಣ ಮುಂತಾದ ಕಡೆ

ಫಾರೆಸ್ಟ್ ಇರುತ್ತದೆ. ವ್ಯಾಪಾರಸ್ಥರು ಅಲ್ಲಿ ಫೈರ್ ವುಡ್ ತರುವುದಕ್ಕೆ ಖರೀದಿ ಮಾಡುತ್ತಾರೆ ಡಿಪೋನವರು "ನೀವು ಡೊಮೆಸ್ಟಿಕ್ ಯೂಸ್‌ಗಾದರೂ ಒಯ್ಯಿರಿ, ಫ್ಯಾಕ್ಟರಿಗಾದರೂ ಒಯ್ಯಿರಿ, ನಮಗೆ ಏನು ಗೊತ್ತು, ಟ್ಯಾಕ್ಸ್ ಕೊಡಬೇಕು" ಎನ್ನುತ್ತಾರೆ whole sale dealers retail dealers, ಎಲ್ಲಾ ಟ್ಯಾಕ್ಸ್ ಕೊಡಬೇಕೆನ್ನುತ್ತಾರೆ. ನಾನೂ ಸೆಲೆಕ್ಟ್ ಕಮಿಟಿನಲ್ಲಿದ್ದೆ. ಚರ್ಚೆಯಾದ ಕಾಲದಲ್ಲಿ, ಇದರ ಸ್ಪಿರಿಟ್ ನನಗೆ ಗೊತ್ತಿದೆ. ಡೊಮೆಸ್ಟಿಕ್ ಯೂಸಿಗೆ ಎಕ್ಸೆಂಟ್ ಎಂದು ಸ್ಪಷ್ಟವಾಗಿದೆ. ಮಾನ್ಯ ಅರ್ಥ ಸಚಿವರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತಿರುವುದು ಏನಂದರೆ, ಈ ಪ್ರಕಾರವಾಗಿ ಇರುವುದರಿಂದ 2-3 ಇನ್‌ಸಿಡೆನ್ಸ್ ಆಫ್ ಟ್ಯಾಕ್ಸೇಶನ್ ಬೀಳುತ್ತದೆ.

Sri M. R. PATIL.—The point is this : In every article, the point of personal consumption, even suger, even jawar....

Sri K. P. GADAG.—I can understand the law better, than you. I do not agree with this interpretation.

ಎಲ್ಲಾ ಕನ್‌ಸ್ಯೂಮರ್ ಮೇಲೆ ಬೀಳುತ್ತದೆ, ಏಕೆ ಆರ್‌ಗ್ಯೂ ಮಾಡುತ್ತೀರ? ಯಾವ ಸ್ಪಿರಿಟ್ಟನಲ್ಲಿ ಇದನ್ನು ಮಾಡಿತು ಎಂಬುದನ್ನು ಹೇಳಿದ್ದೇನೆ. ಆ ಸ್ಪಿರಿಟ್ಟಿನಿಂದ ತಪ್ಪಿ ಹೋಗಿದೆ ಎಂದು ನಾನು ಹೇಳಿದೆ. ಡೊಮೆಸ್ಟಿಕ್ ಯೂಸಿಗೆ ತೆಗೆದುಕೊಳ್ಳುವವರ ಮೇಲೆ ಇದು ಬೀಳುದಂತೆ ಮಾಡಲಕ್ಕೆ ಯೋಜನೆ ಮಾಡಬೇಕು. ಡಿಪಾರ್ಟ್‌ಮೆಂಟಿನವರು ಈ ಬಗ್ಗೆ ಅಷ್ಟು ತಲೆ ಕೆಡಿಸಿ ಕೊಂಡಿಲ್ಲ.

6-00 P.M.

ಇದರ ಫಾರಂ ಮತ್ತು ರೂಲ್ಸ್‌ಗಳನ್ನು ಸರಿಯಾಗಿ ಮಾಡಿದರೆ ಇವನ್ನು ಆ ಫ್ಯಾಕ್ಟರಿ ಓನರ್ಸ್‌ಗಳ ಮೇಲೆ ಸರ್ಕಾರಕ್ಕೆ ಹಾಕಲಿಕ್ಕೆ ಬರುತ್ತೆ ಅದಕ್ಕೆ ಅವಕಾಶವಿದೆ. ಅದರೆ ಅವರು ಈ ದೃಷ್ಟಿಯಿಂದ ಮಾಡಲಿಕ್ಕೆ ಹೋಗಬೇಕೆಂಬುದು ನನ್ನ ನಮ್ರ ವಿನಂತಿ. ಅದರೆ ನಾನು ಇನ್ನೂ ಕೆಲವು ಕಲಂಗಳ ಮೇಲೆ ಹೇಳತಕ್ಕದ್ದಿತ್ತು. ಆದರೆ ಬೇರೆ ಸಂದರ್ಭದಲ್ಲಿ ಅವಕಾಶ ದೊರೆತಾಗ ತಿಳಿಸಲಿಕ್ಕೆ ಅವಕಾಶ ಸಿಗಬಹುದೆಂತ ತಿಳಿದು ನಾನು ಈಗ ಹೇಳಿರತಕ್ಕ ಸೂಚನೆಗಳ ಬಗ್ಗೆ ಸರ್ಕಾರ ಗಮನಕ್ಕೆ ತೆಗೆದುಕೊಂಡು ಸೂಕ್ತ ಕಾರ್ಯಕ್ರಮ ಕೈಗೊಳ್ಳಬೇಕೆಂದು ತಿಳಿಸಿ ಈಗ ಸಭೆಯ ಮುಂದಿರತಕ್ಕ ಡಿಮ್ಯಾಂಡುಗಳನ್ನು ಸಂಪೂರ್ಣವಾಗಿ ಸಮರ್ಥಿಸಿ ನನಗೆ ಇಷ್ಟು ಮಾತನಾಡಲು ಅವಕಾಸ ಕಲ್ಪಿಸಿ ಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆ ಗಳನ್ನು ಅರ್ಪಿಸಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

MR. DEPUTY SPEAKER.—The House will now rise and meet tomorrow at 1 P. M.

---

*The House adjourned at Five Minutes past Six of the Clock to meet again at One of the Clock on, Thursday, the 6th April 1961.*

---

WD 6417—GPB—500—(L.A. New)—16-1-67